ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೨೦

**ಪಟ್ಟಿ – ೦೨**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೆಂಟನೆಯ ಅಧಿವೇಶನ**

**ಬುಧವಾರ, ದಿನಾಂಕ : ೨೮ನೇ ಜನವರಿ, ೨೦೨೬**

---

## ಸಮೂಹ – III

೧. ಸಾರಿಗೆ ಮತ್ತು ಮುಜರಾಯಿ ಸಚಿವರು

೨. ಲೋಕೋಪಯೋಗಿ ಸಚಿವರು

೩. ಕಂದಾಯ ಸಚಿವರು

೪. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

೫. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

೬. ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

---

## ಭೂ ವ್ಯಾಜ್ಯ ಪ್ರಕರಣಗಳ ಕುರಿತು

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :–**

೧೦೯ (೧೨೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೫ ವರ್ಷದಿಂದ ಕಂದಾಯ ಇಲಾಖೆಯಡಿಯಲ್ಲಿ ಬರುವ ನ್ಯಾಯಾಲಯಗಳಲ್ಲಿ ಇಲ್ಲಿಯವರೆಗೂ ಇರುವ ಬಾಕಿ ಪ್ರಕರಣ, ಹೆಚ್ಚು ಅವಧಿಯ ಬಾಕಿ ಪ್ರಕರಣ ಹಾಗೂ ಆದೇಶಕ್ಕೆ ಬಾಕಿಯಿರುವ ಭೂ ವ್ಯಾಜ್ಯ ಪ್ರಕರಣಗಳ ಸಂಖ್ಯೆಯೆಷ್ಟು; ಹಾಗೂ ಬಾಕಿ ಉಳಿಯಲು ಇರುವ ಕಾರಣಗಳೇನು ;

(ಆ) ಭೂ ವ್ಯಾಜ್ಯಗಳನ್ನು ಇಂತಿಷ್ಟು ಕಾಲಮಿತಿಯುಡಿಯುಲ್ಲಿ ಪೂರ್ಣಗೊಳಿಸಬೇಕೆಂಬ ನೀತಿ ನಿಯುಮ ಹಾಗೂ ಮಾನದಂಡವನ್ನು ಸರ್ಕಾರ ರೂಪಿಸಿದೆಯೇ ;

(ಇ) ಕಾಲಮಿತಿಯೊಳಗೆ ವ್ಯಾಜ್ಯವನ್ನು ಇತ್ಯರ್ಥಪಡಿಸದ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಬೆಂಗಳೂರು ನಗರ ಜಿಲ್ಲೆಯಲ್ಲಿ ೧೬ ಸಾವಿರಕ್ಕೂ ಹೆಚ್ಚಾಗಿ ಭೂ ವ್ಯಾಜ್ಯ ಪ್ರಕರಣಗಳು ಬಾಕಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಶೀಘ್ರವಾಗಿ ಇತ್ಯರ್ಥ ಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಹೊರರಾಜ್ಯದವರು ಅಕ್ರಮವಾಗಿ ಮೀನು ಹಿಡಿಯುವುದನ್ನು ತಡೆಗಟ್ಟುವ ಬಗ್ಗೆ

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೦ (೧೨೮) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆಲಮಟ್ಟಿ ಜಲಾಶಯುದ ಹಿನ್ನೀರಿನಲ್ಲಿ ಹೊರರಾಜ್ಯದ ಮೀನುಗಾರರು ಆಕ್ರಮವಾಗಿ ಮೀನುಗಾರಿಕೆ ಮಾಡುತ್ತಿದ್ದು, ಇದರಿಂದ ಸ್ಥಳೀಯ ಮಟ್ಟದ ಮೀನುಗಾರರು ಪರದಾಡುವಂತಹ ಪರಿಸ್ಥಿತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಅಕ್ರಮ ಮೀನುಗಾರಿಕೆಯನ್ನು ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ;

(ಆ) ಅಕ್ರಮವಾಗಿ ಮೀನು ಹಿಡಿಯುವವರ ವಿರುದ್ಧ ಕ್ರಮ ಕೈಗೊಳ್ಳಲು ಇರುವ ನಿಯಮಗಳಾವುವು ?

## ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಯ ಬಗ್ಗೆ

**ಶ್ರೀ ಶಿವಕುಮಾರ್ ಕೆ (ನಾಮನಿರ್ದೇಶನ ಹೊಂದಿದವರು) :–**

೧೧೧ (೧೨೯) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು–ಬೆಂಗಳೂರು ದಶಪಥ ರಾಷ್ಟ್ರೀಯ ಹೆದ್ದಾರಿಯಲ್ಲಿ ಪ್ರಸ್ತುತ ವಾಹನಗಳ ಸಂಚಾರಕ್ಕೆ ಗಂಟೆಗೆ ಎಷ್ಟು ಕಿಲೋಮೀಟರ್‌ಗಳ ಗರಿಷ್ಠ ವೇಗದ ಮಿತಿಯನ್ನು ನಿಗದಿಪಡಿಸಲಾಗಿದೆ ;

(ಆ) ಸದರಿ ಹೆದ್ದಾರಿಯ ಗುಣಮಟ್ಟ ಮತ್ತು ಸುರಕ್ಷತೆಯನ್ನು ಪರಿಗಣಿಸಿ, ಈಗಿರುವ ವೇಗದ ಮಿತಿಯನ್ನು ಹೆಚ್ಚಿಸುವ ಬಗ್ಗೆ ಸರ್ಕಾರದ ಮುಂದೆ ಯಾವುದಾದರೂ ಪ್ರಸ್ತಾವನೆಯಿದೆಯೇ ;

(ಇ) ಒಂದು ವೇಳೆ ವೇಗದ ಮಿತಿಯನ್ನು ಹೆಚ್ಚಿಸುವ ಪ್ರಸ್ತಾವನೆ ಇದ್ದಲ್ಲಿ, ಗರಿಷ್ಠ ಎಷ್ಟು ಕಿಲೋಮೀಟರ್ ವೇಗದ ಮಿತಿಯುನ್ನು ನಿಗದಿಪಡಿಸಲು ಸರ್ಕಾರ ಉದ್ದೇಶಿಸಿದೆ ;

(ಈ) ಈ ಹೆದ್ದಾರಿಯಲ್ಲಿ ಸಂಚರಿಸುವ ಜನಸಾಮಾನ್ಯರಿಗೆ ಅನುಕೂಲವಾಗುವಂತೆ, ಟೋಲ್ ರಹಿತ ಸರ್ವೀಸ್ ರಸ್ತೆಗಳನ್ನು (Service Roads) ಪೂರ್ಣ ಪ್ರಮಾಣದಲ್ಲಿ ಅಗಲೀಕರಣ ಮಾಡುವ ಮತ್ತು ಅಭಿವೃದ್ಧಿಪಡಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ;

(ಉ) ಹಾಗಿದ್ದಲ್ಲಿ, ವಾಹನ ದಟ್ಟಣೆಯನ್ನು ನಿಯಂತ್ರಿಸಲು ಎಷ್ಟು ಅಡಿಗಳಷ್ಟು ಅಥವಾ ಎಷ್ಟು ಪಥಗಳು (Lanes) ವಿಸ್ತರಣೆಗೆ ಅವಕಾಶ ಮಾಡಿಕೊಡಲಾಗುವುದು ;

(ಊ) ಹೆದ್ದಾರಿಯ ಉದ್ದಕ್ಕೂ ಇರುವ ಸರ್ವೀಸ್ ರಸ್ತೆಗಳು ಕಡಿದುಹೋಗಿರುವುದನ್ನು ಸರಿಪಡಿಸಿ, ಅವುಗಳನ್ನು ತಡೆರಹಿತವಾಗಿ (Continuous Flow) ಸಂಪರ್ಕಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಕೆ.ಎಸ್.ಐ.ಸಿ ಕೈಗಾರಿಕೆಯಲ್ಲಿ ಉತ್ಪಾದಿಸುವ ರೇಷ್ಮೆ ಸೀರೆ ಬಗ್ಗೆ

**ಶ್ರೀ ಶಿವಕುಮಾರ್ ಕೆ (ನಾಮನಿರ್ದೇಶನ ಹೊಂದಿದವರು) :–**

೧೧೨ (೧೩೦) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆ.ಎಸ್.ಐ.ಸಿ ಕೈಗಾರಿಕೆಯಲ್ಲಿ ಎಷ್ಟು ವರ್ಷಗಳಿಂದ ರೇಷ್ಮೆ ಸೀರೆ ಉತ್ಪಾದಿಸಲಾಗುತ್ತಿದೆ ಹಾಗೂ ಪ್ರಸ್ತುತ ಎಷ್ಟು ಸಂಖ್ಯೆಯಲ್ಲಿ ಸೀರೆ ಉತ್ಪಾದಿಸಲಾಗುತ್ತಿದೆ ;

(ಆ) ದೇಶದಲ್ಲಿ ಮತ್ತು ರಾಜ್ಯದಲ್ಲಿ ಎಷ್ಟು ಕೆ.ಎಸ್.ಐ.ಸಿ ಮಳಿಗೆಗಳಿವೆ ; ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಸೀರೆಯನ್ನು ಪೂರೈಸಲಾಗುತ್ತಿದೆಯೇ ಮತ್ತು ಉತ್ಪಾದನೆ ಹೆಚ್ಚಿಸುವ ಗುರಿ ಪ್ರಸ್ತಾವನೆಯಲ್ಲಿದೆಯೇ ;

(ಇ) ಇತ್ತೀಚಿನ ದಿನಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ದರ ಹೆಚ್ಚಾಗಿದ್ದು, ಇದರ ಪರಿಣಾಮವು ರೇಷ್ಮೆ ಸೀರೆ ಉತ್ಪಾದನೆ ಮೇಲೆ ಬೀರಲಿದೆಯೇ ?

## ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಉನ್ನತ ವ್ಯಾಸಂಗಕ್ಕೆ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ

**ಶ್ರೀ ಶಿವಕುಮಾರ್ ಕೆ (ನಾಮನಿರ್ದೇಶನ ಹೊಂದಿದವರು) :–**

೧೧೩ (೧೩೧) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಉನ್ನತ ವ್ಯಾಸಂಗಕ್ಕಾಗಿ ಸರ್ಕಾರ ರೂಪಿಸಿರುವ ವಿದ್ಯಾರ್ಥಿ ವೇತನ ಸಂಬಂಧ ಕಾರ್ಯಕ್ರಮಗಳು ಯಾವುವು ; ಹಾಗೂ ಎಷ್ಟು ಪ್ರಮಾಣದ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ ; ಐ.ಎ.ಎಸ್ ಮತ್ತು ಕೆ.ಎ.ಎಸ್ ತರಬೇತಿಗಾಗಿ ಎಷ್ಟು ಮಂದಿಗೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಅಲ್ಪಸಂಖ್ಯಾತ ವಿದ್ಯಾರ್ಥಿಗಳ ವಿದೇಶಿ ವ್ಯಾಸಂಗಕ್ಕೆ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳೇನು ; ಇಲ್ಲಿಯವರೆಗೆ ಎಷ್ಟು ವಿದ್ಯಾರ್ಥಿಗಳು ವಿದೇಶಿ ವ್ಯಾಸಂಗಕ್ಕಾಗಿ ತೆರಳಿದ್ದಾರೆ ? (ಮಾಹಿತಿ ಒದಗಿಸುವುದು)

## ರಾಜ್ಯದ ಕಂದಾಯ ಇಲಾಖೆಯಲ್ಲಿನ ಪೋಡಿ ಅಭಿಯಾನದ ಬಗ್ಗೆ

**ಶ್ರೀ ಶಿವಕುಮಾರ್ ಕೆ (ನಾಮನಿರ್ದೇಶನ ಹೊಂದಿದವರು) :–**

೧೧೪ (೧೩೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಕಂದಾಯ ಇಲಾಖೆಯಿಂದ ಭೂ ದಾಖಲೆಗಳನ್ನು ಸರಿಪಡಿಸಲು, ವಿಶೇಷವಾಗಿ ದರ್ಖಾಸ್ತು ಪೋಡಿ ಪ್ರಕರಣಗಳನ್ನು ಇತ್ಯಾರ್ಥಿಪಡಿಸಲು ಕೈಗೊಂಡಿರುವ ಪೋಡಿ ಅಭಿಯಾನದಿಂದ ಸಾಧಿಸಿರುವ ಪ್ರಗತಿ ಏನು ; (ಜಿಲ್ಲಾವಾರು ಮಾಹಿತಿಯನ್ನು ನೀಡುವುದು)

(ಆ) ರಾಜ್ಯದಲ್ಲಿ ಪೋಡಿ ಅಭಿಯಾನ ಎಷ್ಟು ದಿನಗಳೊಳಗೆ ಪೂರ್ಣಗೊಳ್ಳಲಿದೆ ;

(ಇ) ಬುಡಕಟ್ಟು ಸಮುದಾಯದ ಜನರ ಅನುಭವದಲ್ಲಿರುವ ಕಂದಾಯ ಭೂಮಿಯನ್ನು ಸರ್ಕಾರವು ಅಭಿಯಾನದ ಮೂಲಕ ಎಷ್ಟು ಬುಡಕಟ್ಟು ಜನರಿಗೆ ಈ ಸೌಲಭ್ಯವನ್ನು ಒದಗಿಸಿದೆ ?(ಮಾಹಿತಿ ಒದಗಿಸುವುದು)

## ಗ್ಯಾರಂಟಿ ಯೋಜನೆಗಳಲ್ಲೊಂದಾದ ಶಕ್ತಿ ಯೋಜನೆಯ ಅನುಕೂಲಗಳ ಬಗ್ಗೆ

**ಶ್ರೀ ಶಿವಕುಮಾರ್ ಕೆ (ನಾಮನಿರ್ದೇಶನ ಹೊಂದಿದವರು) :–**

೧೧೫ (೧೩೩) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳಲ್ಲೊಂದಾದ ಶಕ್ತಿ ಯೋಜನೆ ಕಾರ್ಯಕ್ರಮ ಜಾರಿಗೆ ಬಂದ ನಂತರ ಎಷ್ಟು ಜನ ಇದರ ಅನುಕೂಲತೆಯನ್ನು ಪಡೆದಿರುತ್ತಾರೆ ; ಈ ಕಾರ್ಯಕ್ರಮ ಜಾರಿಗೆ ಬಂದ ನಂತರ ಎಷ್ಟು ಬಸ್‌ಗಳನ್ನು ರಾಜ್ಯ ಸರ್ಕಾರ ಖರೀದಿಸಿರುತ್ತದೆ ; (ಮಾಹಿತಿ ನೀಡುವುದು)

(ಆ) ಬೇಡಿಕೆಗೆ ಅನುಗುಣವಾಗಿ ಎಷ್ಟು ಚಾಲಕರ ಖಾಯಂ ನೇಮಕಾತಿಯಾಗಿರುತ್ತದೆ ಹಾಗೂ ಇನ್ನು ಖಾಲಿ ಇರುವ ಚಾಲಕರ ಹುದ್ದೆಗಳ ಸಂಖ್ಯೆ ಎಷ್ಟು; (ಮಾಹಿತಿ ನೀಡುವುದು)

(ಇ) ಗುತ್ತಿಗೆ ಆಧಾರದ ಮೇಲೆ ಚಾಲಕರಾಗಿ ಸೇವೆ ಸಲ್ಲಿಸುತ್ತಿರುವ ನೌಕರರನ್ನು ಖಾಯಂಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇದ್ದರೆ, ಯಾವಾಗ ಖಾಯಂಮಗೊಳಿಸಲಾಗುವುದು ?

## ಬೆಂಗಳೂರು ನೈಸ್ ರಸ್ತೆ ಟೋಲ್‌ಗಳ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೧೧೬ (೧೩೪) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಹೊರವಲಯದಲ್ಲಿರುವ ನೈಸ್ ರಸ್ತೆಯನ್ನು ಉಪಯೋಗಿಸಲು ತೆರಬೇಕಾಗಿರುವ ಟೋಲ್ ದರಗಳ ಪರಿಷ್ಕರಣೆ ಯಾವ ಯಾವ ವರ್ಷಗಳಲ್ಲಿ ಮಾಡಲಾಗಿದೆ ;

(ಆ) ಪ್ರತಿ ವರ್ಷ ನೈಸ್ ಸಂಸ್ಥೆಯವರು ಕೇಳಿರುವ ಟೋಲ್ ದರ ಪರಿಷ್ಕರಣೆ ಹಾಗೂ ಸರ್ಕಾರದಿಂದ ಸಿಕ್ಕಿರುವ ಅಂಗೀಕಾರದ ಕುರಿತು ವಿವರಗಳನ್ನು ನೀಡುವುದು ;

(ಇ) ಹಾಲಿ ದರದಂತೆ ನೈಸ್ ರಸ್ತೆಯಲ್ಲಿ ದ್ವಿಚಕ್ರ ವಾಹನ, ನಾಲ್ಕು ಚಕ್ರ ವಾಹನ ಹಾಗೂ ಬೃಹತ್ ವಾಹನಗಳಿಗೆ ಕಿ.ಮೀ ಒಂದಕ್ಕೆ ನೈಸ್ ರಸ್ತೆಯಲ್ಲಿ ವಿಧಿಸುತ್ತಿರುವ ಟೋಲ್ ದರವೇನು ;

(ಈ) ನೈಸ್ ರಸ್ತೆ ಗುತ್ತಿಗೆ ಯಾವಾಗ ಮುಕ್ತಾಯವಾಗುತ್ತದೆ ?

## ರಾಮನಗರ ಜಿಲ್ಲೆ ಕೆಂಪಾಪುರದಲ್ಲಿ ನಾಡಪ್ರಭು ಕೆಂಪೇಗೌಡರ ಸಮಾಧಿ ಅಭಿವೃದ್ಧಿಯ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೧೧೭ (೧೩೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿ ಕೆಂಪಾಪುರದಲ್ಲಿ ನಾಡಪ್ರಭು ಕೆಂಪೇಗೌಡರ ಸಮಾಧಿಗೆ ೪ ಎಕರೆ ಸ್ಥಳವಿದ್ದು ಕೆಂಪೇಗೌಡರ ವೀರ ಸಮಾಧಿಯನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕ್ರಮವೇನು ;

(ಆ) ಅಭಿವೃದ್ಧಿ ಕಾಮಗಾರಿ ಪ್ರಾರಂಭಿಸಿದ್ದಲ್ಲಿ, ಪ್ರಸ್ತುತ ಯಾವ ಹಂತದಲ್ಲಿದೆ ;

(ಇ) ಅಭಿವೃದ್ಧಿ ಪಡಿಸಲು ಸರ್ಕಾರ ಬಿಡುಗಡೆ ಮಾಡಿರುವ ಮೊತ್ತವೆಷ್ಟು ?

## ರಾಜ್ಯದಲ್ಲಿ ಭೂ ದಾಖಲೆ ಡಿಜಿಟಲೀಕರಣದ ಪ್ರಸ್ತುತ ಸ್ಥಿತಿಯ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೧೧೮ (೧೬೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಭೂ ದಾಖಲೆ ಡಿಜಿಟಲೀಕರಣದ ಪ್ರಸ್ತುತ ಸ್ಥಿತಿ ಏನು ;

(ಆ) ತಿದ್ದುಪಡಿಗಾಗಿ ಎಷ್ಟು ಆರ್‌ಟಿಸಿ/ಹಕ್ಕುಗಳ ದಾಖಲೆ ಪ್ರಕರಣಗಳು ಬಾಕಿ ಇವೆ ;

(ಇ) ನಕಲು ಅಥವಾ ನಕಲಿ ಭೂ ದಾಖಲೆಗಳನ್ನು ತಡೆಗಟ್ಟಲು ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ;

(ಈ) ಆರ್‌ಟಿಸಿ, ಮ್ಯುಟೇಶನ್ ಮತ್ತು ಪಹಣಿ ದಾಖಲೆಗಳನ್ನು ನೀಡಲು ಸರಾಸರಿ ಎಷ್ಟು ಸಮಯ ತೆಗೆದುಕೊಳ್ಳುತ್ತದೆ ?

## ಸರ್ಕಾರಿ ಭೂಮಿ ಒತ್ತುವರಿಯ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೧೧೯ (೧೬೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಸ್ತುತ ಎಷ್ಟು ಸರ್ಕಾರಿ ಭೂಮಿ ಒತ್ತುವರಿಯಾಗಿದೆ ;

(ಆ) ಕಳೆದ ವರ್ಷದಲ್ಲಿ ಅಕ್ರಮ ಒತ್ತುವರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಇ) ರಾಜಕೀಯ ಅಥವಾ ಪ್ರಭಾವಿ ಒತ್ತುವರಿಗಳಿವೆಯೇ ; ಮತ್ತು ಅವುಗಳನ್ನು ಹೇಗೆ ನಿರ್ವಹಿಸಲಾಗುತ್ತದೆ ;

(ಈ) ಕೆರೆ, ಅರಣ್ಯ ಮತ್ತು ಗೋಮಾಳ ಭೂ ರಕ್ಷಣೆಯಲ್ಲಿನ ಪ್ರಗತಿ ಏನು ?

## ಮಾಜಿ ಸೈನಿಕರಿಗೆ ನೀಡುವ ಸರ್ಕಾರಿ ಭೂ ಮಂಜೂರಾತಿ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೨೦ (೧೩೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮಾಜಿ ಸೈನಿಕರಿಗೆ ಮಂಜೂರಾಗಿರುವ ಒಟ್ಟು ಸರ್ಕಾರಿ ಜಾಗ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ಭೂ ಮಂಜೂರಾತಿಗಾಗಿ ಮಾಜಿ ಸೈನಿಕರಿಗಳಿಂದ ಸಲ್ಲಿಕೆಯಾಗಿರುವ ಅರ್ಜಿಗಳು ಎಷ್ಟು ; ಎಷ್ಟು ಮಾಜಿ ಸೈನಿಕರಿಗೆ ಭೂ ಮಂಜೂರಾತಿ ನೀಡಲಾಗಿದೆ ; ಭೂ ಮಂಜೂರಾತಿಗೆ ಬಾಕಿ ಇರುವ ಪ್ರಕರಣಗಳು ಎಷ್ಟು ; ಬಾಕಿ ಉಳಿಸಿಕೊಳ್ಳಲು ಕಾರಣಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) ಮನೆ ಕಂದಾಯ ಪಾವತಿಗೆ ಮಾಜಿ ಸೈನಿಕರಿಗಾಗಿ ನಿಗದಿಪಡಿಸಲಾದ ರಿಯಾಯಿತಿಯ ಶೇಕಡ ಪ್ರಮಾಣ ಎಷ್ಟು ; ಇದನ್ನು ಶೇಕಡ ೧೦೦ ಪ್ರಮಾಣಕ್ಕೆ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

## ಲೋಕೋಪಯೋಗಿ ಇಲಾಖೆಯಿಂದ ಬಿಡುಗಡೆಯಾದ ಅನುದಾನದ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೨೧ (೧೩೭) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ವಿವಿಧ ಯೋಜನೆಯಡಿ ಕಾಮಗಾರಿಗಳನ್ನು ಕೈಗೊಳ್ಳಲು ಬಿಡುಗಡೆಯಾದ ಒಟ್ಟು ಅನುದಾನ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಕೈಗೊಂಡಿರುವ ಕಾಮಗಾರಿಗಳು, ಪ್ರಗತಿಯಲ್ಲಿರುವ ಹಾಗೂ ಪೂರ್ಣಗೊಂಡಿರುವ ಕಾಮಗಾರಿಗಳು ಮತ್ತು ಬಾಕಿ ಇರುವ ಕಾಮಗಾರಿಗಳ ಸಂಖ್ಯೆ ಎಷ್ಟು ? (ಮೀಸಲಿಟ್ಟ ಅನುದಾನ ಸಹಿತ ತಾಲ್ಲೂಕುವಾರು ವಿವರ ನೀಡುವುದು)

## ದೇವಸ್ಥಾನದ ಜಾಗ ಸಾರಿಗೆ ಇಲಾಖೆ ಪಡೆಯುತ್ತಿರುವ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೨೨ (೧೩೮) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೨–೨೩ ನೇ ಸಾಲಿನ ಆಯವ್ಯಯದಲ್ಲಿ ಮುಜರಾಯಿ ಇಲಾಖೆ ಆಡಳಿತ ವ್ಯಾಪ್ತಿಗೆ ಒಳಪಟ್ಟಿರುವ ದೇವಸ್ಥಾನಗಳಿಗೆ

ಸ್ವಾಯತ್ತತೆ ನೀಡಲು ಕ್ರಮವಹಿಸುವುದಾಗಿ ಘೋಷಿಸಿದ್ದು ಅದರಂತೆ ಇದುವರೆಗೆ ಎಷ್ಟು ದೇವಸ್ಥಾನಗಳಿಗೆ ಸ್ವಾಯತ್ತತೆ ನೀಡಲಾಗಿದೆ ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಒಂದು ಬಾರಿ ದೇವಸ್ಥಾನದ ಆಸ್ತಿ ಎಂದು ದಾಖಲೆಗಳಲ್ಲಿ ಬಂದ ಮೇಲೆ ಅದು ಖಾಯಂ ಆಗಿ ದೇವಸ್ಥಾನದ ಆಸ್ತಿಯೇ ಎಂಬುದರ ಕುರಿತು ಮಾಹಿತಿ ಒದಗಿಸುವುದು ;

(ಇ) ದೇವನಹಳ್ಳಿಯಲ್ಲಿನ ಸರ್ವೆ ನಂ ೩೦೬ರ ೫.೨೫ ಎಕರೆ ಭೂಮಿಯು ಶ್ರೀ ರಂಗನಾಥಸ್ವಾಮಿ ದೇವಸ್ಥಾನದ ಜಾಗವಾಗಿರುವುದು ಸರ್ಕಾರದ ಗಮನದಲ್ಲಿದೆಯೇ ;

(ಈ) ದೇವಸ್ಥಾನದ ಜಮೀನು ಮತ್ತು ತೋಪು, ಸಾರಿಗೆ ಇಲಾಖೆಗೆ ಹಸ್ತಾಂತರಿಸುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ದೇವಸ್ಥಾನದ ಜಮೀನಿನ ರೀತಿಯಲ್ಲೇ ವಕ್ಫ್ ಬೋರ್ಡ್‌ನ ಭೂಮಿಯನ್ನು ಸಾರಿಗೆ ಇಲಾಖೆ ತನ್ನ ವಶಕ್ಕೆ ಪಡೆಯುವ ಚಿಂತನೆ ನಡೆಸಿದೆಯೇ ; ಈ ಕುರಿತು ಸರ್ಕಾರದ ನಿಲುವೇನು ; (ವಿವರ ನೀಡುವುದು)

(ಉ) ಇಲ್ಲಿಯವರೆಗೆ ಸಾರಿಗೆ ಇಲಾಖೆಯು ಮುಜರಾಯಿ ಇಲಾಖೆಯ ಎಷ್ಟು ಎಕರೆ ಜಮೀನನ್ನು ವಶಕ್ಕೆ ಉಚಿತವಾಗಿ ಪಡೆದುಕೊಂಡಿದೆ ? (ವಿವರ ನೀಡುವುದು)

## ದೇವಸ್ಥಾನದ ಜಾಗ ಒತ್ತುವರಿ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೨೩ (೧೩೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ತಿಗಳರ ಪೇಟೆಂಯಲ್ಲಿರುವ ಶ್ರೀ ಧರ್ಮರಾಯಸ್ವಾಮಿ ದೇವಾಲಯಕ್ಕೆ ಸೇರಿದ ಬೆಂಗಳೂರು ನಗರ ಜಿಲ್ಲೆಯ ನೀಲಸಂದ್ರ ಗ್ರಾಮದ ಸರ್ವೆ ನಂ–೭೯ ರಲ್ಲಿ ೧೫ ಎಕರೆ ೧೨ ಗುಂಟೆ ಮತ್ತು ಹೊಂಗಸಂದ್ರ ಗ್ರಾಮದ ಸರ್ವೆ ನಂ ೩೩ರಲ್ಲಿ ೧೬ ಎಕರೆ ೨೫ ಗುಂಟೆ ದೇವಸ್ಥಾನಕ್ಕೆ ಸೇರಿದ ಭೂಮಿಯನ್ನು ಅತಿಕ್ರಮವಾಗಿ ಒತ್ತುವರಿಯಾಗಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ ; ಸದರಿ ಜಾಗವನ್ನು ಸರ್ಕಾರದ ವಶಕ್ಕೆ ಪಡೆಯಲು ಕೈಗೊಂಡ ಕ್ರಮಗಳೇನು ;

(ಆ) ಶ್ರೀ ಧರ್ಮರಾಯಸ್ವಾಮಿ ದೇವಾಲಯಕ್ಕೆ ಸೇರಿದ ನೀಲಸಂದ್ರ ಗ್ರಾಮದ ಸರ್ವೆ ನಂ–೭೯ ರಲ್ಲಿ ೧೫ ಎಕರೆ ೧೨ ಗುಂಟೆ ಜಾಗದಲ್ಲಿ ಅನಧಿಕೃತವಾಗಿ ಒತ್ತುವರಿ ಮಾಡಿ ಅಕ್ರಮವಾಗಿ ನಿರ್ಮಿಸಿರುವ ಮನೆಗಳಿಗೆ/ಕಟ್ಟಡಗಳಿಗೆ ಬಿ.ಬಿ.ಎಂ.ಪಿ ವತಿಯಿಂದ ಸೌಲಭ್ಯಗಳನ್ನು ಕಲ್ಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇಲಾಖೆಯ ಅನುಮತಿ ಪಡೆಯದೆ ಬಿ.ಬಿ.ಎಂ.ಪಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳಿಗೆ ಇಲಾಖೆ ಆಕ್ಷೇಪಣೆಯನ್ನು ಸಲ್ಲಿಸಿದೆಯೇ ; (ವಿವರ ನೀಡುವುದು)

(ಇ) ದೇವಸ್ಥಾನಗಳ ಆಡಳಿತ ವ್ಯವಸ್ಥೆ ಹಾಗೂ ದೈನಂದಿನ ಕಾರ್ಯಭಾರಗಳನ್ನು ಸದರಿ ದೇವಸ್ಥಾನದ ಭಕ್ತರ ಅಧೀನಕ್ಕೆ ನೀಡುವ ಕುರಿತು ಸರ್ಕಾರದ ನಿಲುವೇನು ;

(ಈ) ಪ್ರತಿ ದೇವಸ್ಥಾನಕ್ಕೆ ಅದರ ಭಕ್ತರನ್ನೇ ಸದಸ್ಯರನ್ನಾಗಿ ನೋಂದಾಯಿಸಲು ಅವಕಾಶ ಮಾಡಿಕೊಟ್ಟು ಆ ಸದಸ್ಯರ ಮೂಲಕ ಚುನಾಯಿತ ಸಮಿತಿಯನ್ನು ದೇವಸ್ಥಾನದ ದೈನಂದಿನ ಆಡಳಿತ ನೋಡಿಕೊಳ್ಳಲು ಅವಕಾಶ ಕಲ್ಪಿಸುವ ಮೂಲಕ ದೇವಸ್ಥಾನಗಳನ್ನು ಸರ್ಕಾರಿ ಆಡಳಿತದಿಂದ ಮುಕ್ತಗೊಳಿಸುವ ಕುರಿತು ಸರ್ಕಾರದ ನಿಲುವೇನು ?

## ನೋಂದಣಿ ಶುಲ್ಕ ನಷ್ಟವಾಗಿರುವ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೨೪ (೧೪೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪ ಉಪನೋಂದಣಿ ಕಛೇರಿಯಲ್ಲಿ ಒಂದು ಟ್ರಸ್ಟ್ ತನ್ನ ಆಸ್ತಿಯನ್ನು ಇನ್ನೊಂದು ಟ್ರಸ್ಟ್‌ಗೆ ವರ್ಗಾವಣೆಯ ನೋಂದಣಿ ಸಮಯದಲ್ಲಿ ಕಡಿಮೆ ಮುದ್ರಾಂಕ ಶುಲ್ಕದ ಮೂಲಕ ನೋಂದಣಿ ಮಾಡಿರುವುದರಿಂದ ರೂ ೧೦.೭೪ ಕೋಟಿಯ ನೋಂದಣಿ ಶುಲ್ಕ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಆ) ರೂ ೧೦.೭೪ ಕೋಟಿಯ ನೋಂದಣಿ ಶುಲ್ಕವನ್ನು ಸರ್ಕಾರಕ್ಕೆ ನಷ್ಟ ಮಾಡಿರುವ ಉಪನೋಂದಣಾಧಿಕಾರಿಯವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ; ಸದರಿ ಉಪ ನೋಂದಣಾಧಿಕಾರಿಯವರನ್ನು ಅಮಾನತ್ತುಗೊಳಿಸಲಾಗಿದೆಯೇ ; ಇಲ್ಲವಾದಲ್ಲಿ, ಯಾವಾಗ ಅಮಾನತ್ತುಗೊಳಿಸಲಾಗುವುದು ; (ವಿವರ ನೀಡುವುದು)

(ಇ) ಮುದ್ರಾಂಕ ಶುಲ್ಕ ನಷ್ಟವಾಗಿದ್ದು ಈ ಮೊತ್ತವನ್ನು ಸಂಭಂದಿಸಿದ ಉಪನೋಂದಣಾಧಿಕಾರಿಯಿಂದಲೇ ವಸೂಲು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ; ಯಾವಾಗ ವಸೂಲು ಮಾಡಲಾಗುವುದು ? (ವಿವರ ನೀಡುವುದು)

## ಕಂದಾಯ ಇಲಾಖೆಯ ನೋಂದಣಿ ಇಲಾಖೆಯಲ್ಲಿ ನಷ್ಟ ಅಗಿರುವ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೨೫ (೨೪೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಜೂನ್ ೨೦೧೯ ರಿಂದ ಜನವರಿ ೨೦೨೨ರ ನಡುವೆ ಮಹದೇವಪುರ ಮತ್ತು ನೆಲಮಂಗಲದ ಉಪನೋಂದಣಿ ಕಛೇರಿಗಳಲ್ಲಿ ಕರ್ನಾಟಕ ಮುದ್ರಾಂಕ ಅಧಿನಿಯಮ ಕಲಂ ೫(F) ಮತ್ತು ೧೯೦೮ರ ಅಧಿನಿಯಮ ಕಲಂ III(a) ಪ್ರಕಾರ GDA ನೋಂದಣಿ ಮಾಡದಿರುವುದರಿಂದ ನೋಂದಣಿ ಸುಂಕ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ರೀತಿಯಲ್ಲಿ ತಪ್ಪಾಗಿ ನೋಂದಣಿ ಪ್ರಕ್ರಿಯೆ ನಡೆಸಿರುವುದರಿಂದ ಸರ್ಕಾರಕ್ಕೆ ರೂ.೧.೪೮ ಕೋಟಿಯ ಮುದ್ರಾಂಕ ಶುಲ್ಕ ನಷ್ಟವಾಗಿದ್ದು, ಇದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಿದೆ ; ಸದರಿ ಉಪನೋಂದಣಾಧಿಕಾರಿಗಳ ಮೇಲೆ ಅಗತ್ಯ ಶಿಸ್ತು ಕ್ರಮ ಕೈಗೊಂಡು ಅಮಾನತ್ತು ಮಾಡಲಾಗುವುದೇ ;

(ಇ) ಸರ್ಕಾರಕ್ಕೆ ರೂ.೧.೪೮ ಕೋಟಿಯ ಮುದ್ರಾಂಕ ಶುಲ್ಕ ನಷ್ಟವಾಗಿದ್ದು, ಈ ಮೊತ್ತವನ್ನು ಸಂಭಂದಿಸಿದ ಉಪನೋಂದಣಾಧಿಕಾರಿಯಿಂದಲೇ ವಸೂಲಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ನವೆಂಬರ್ ೨೦೨೧ರಲ್ಲಿ ರಾಜಾಜಿನಗರ ನೋಂದಣಾಧಿಕಾರಿಯವರು ನಿಯಮಾನುಸಾರ ನೋಂದಣಿ ಮಾಡದಿರುವುದರಿಂದ ರೂ.೧.೩೨ ಕೋಟಿ ನಷ್ಟವಾಗಿದ್ದು ಈ ನಷ್ಟವನ್ನು ಸಂಬಂಧಿತ ಅಧಿಕಾರಿಯಿಂದಲೇ ವಸೂಲು ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

## ವಸತಿ ಯೋಜನೆಯ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೨೬ (೨೪೩) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಲ್ಲಿ ವಿವಿಧ ವಸತಿ ಯೋಜನೆಯ ಅನ್ವಯ ಎಷ್ಟು ಮನೆಗಳನ್ನು ವಿತರಿಸಲಾಗಿದೆ ; ಫಲಾನುಭವಿಗಳ ಹೆಸರಿನೊಂದಿಗೆ ಜಿಲ್ಲಾವಾರು ವಿವರ ನೀಡುವುದು ಹಾಗೂ ಎಷ್ಟು ಹಿಂದುಗಳಿಗೆ, ಎಷ್ಟು ಅಲ್ಪ ಸಂಖ್ಯಾತರಿಗೆ, ಎಷ್ಟು ಮಹಿಳೆಯರಿಗೆ, ಎಷ್ಟು ತೃತೀಯ ಲಿಂಗಿಗಳಿಗೆ ಮನೆಗಳನ್ನು ವಿತರಿಸಲಾಗಿದೆ ಎಂಬುದರ ಮಾಹಿತಿ ಒದಗಿಸುವುದು ;

(ಆ) ವಸತಿ ಯೋಜನೆಗಳಲ್ಲಿ ಯಾವ ರೀತಿಯ ಆರ್ಥಿಕ ರಿಯಾಯಿತಿ ಇದೆ ; ಸದರಿ ಆರ್ಥಿಕ ರಿಯಾಯಿತಿ ಪಡೆದ ವಸತಿ ಯೋಜನೆಯ ಫಲಾನುಭವಿಗಳ ಜಿಲ್ಲಾವಾರು ವಿವರ ನೀಡುವುದು ;

(ಇ) ವಿವಿಧ ವಸತಿ ಯೋಜನೆಗಳಲ್ಲಿ ಮನೆಗಳಿಗೆ ನಿಗದಿ ಪಡಿಸಿದ ದರವೆಷ್ಟು ; ಸದರಿ ದರವನ್ನು ಯಾವ ಮಾನದಂಡದಡಿಯಲ್ಲಿ ನಿಗದಿ ಪಡಿಸಲಾಗುತ್ತದೆ ; ಸದರಿ ಯೋಜನೆಗೆ ಎಷ್ಟು ಮೊತ್ತದ ಸಹಾಯಧನ, ಎಷ್ಟು ಮೊತ್ತದ ಸಾಲವನ್ನು ಪ್ರತಿಯೊಂದು ಫಲಾನುಭವಿಗೆ ನೀಡಲಾಗಿದೆ ಎಂಬುದರ ಮಾಹಿತಿ ಒದಗಿಸುವುದು ?

## ವಸತಿ ಇಲಾಖೆಯಿಂದ ವಿತರಿಸಲಾದ ಮನೆಗಳ ವಿವರದ ಬಗ್ಗೆ

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) :–**

೧೨೭ (೧೪೧) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಲ್ಲಿ ಎಷ್ಟು ಅರ್ಜಿದಾರರಿಗೆ ಮನೆಗಳನ್ನು ವಿತರಿಸಲಾಗಿದೆ ; ಯಾವ ಯಾವ ಯೋಜನೆಯ ಅನ್ವಯ ಮನೆಗಳನ್ನು ವಿತರಿಸಲಾಗಿದೆ ; (ಯೋಜನೆಯ ಹೆಸರು ಫಲಾನುಭವಿಯ ಹೆಸರಿನೊಂದಿಗೆ ಜಿಲ್ಲಾವಾರು ಸಮಗ್ರ ವಿವರ ನೀಡುವುದು)

(ಆ) ಅರ್ಜಿದಾರ ಮನೆಗಾಗಿ ಅರ್ಜಿ ಸಲ್ಲಿಸಿದ ಎಷ್ಟು ದಿನಗಳಲ್ಲಿ ಮನೆಯನ್ನು ಹಂಚಿಕೆ ಮಾಡಲಾಗುತ್ತದೆ ; ಇಲಾಖೆಯಲ್ಲಿ ಪ್ರಸ್ತುತ ಎಷ್ಟು ಅರ್ಜಿಗಳು ಬಾಕಿ ಇವೆ ; ಎಷ್ಟು ವರ್ಷಗಳಿಂದ ಬಾಕಿ ಇವೆ ; (ವಿವರ ನೀಡುವುದು)

(ಇ) ಬೆಂಗಳೂರಿನ ಕೋಗಿಲು ಅಕ್ರಮವಾಸಿಗಳಿಗೆ ಅರ್ಜಿ ಸಲ್ಲಸಿದ ಎಷ್ಟು ದಿನಗಳಲ್ಲಿ ಮನೆ ಹಂಚಿಕೆ ಮಾಡುವ ಕುರಿತು ಕ್ರಮ ಕೈಗೊಳ್ಳಲಾಗಿದೆ ? (ಫಲಾನುಭವಿಗಳು ಅರ್ಜಿ ಸಲ್ಲಿಸಿದ ದಿನಾಂಕದೊಂದಿಗೆ ಮಾಹಿತಿ ನೀಡುವುದು)

## ಸರ್ಕಾರಿ ಭೂಮಿ ಒತ್ತುವರಿ ಬಗ್ಗೆ

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) :–**

೧೨೮ (೧೮೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಹಾಗೂ ಹೊಂದಿಕೊಂಡಿರುವ ಜಿಲ್ಲೆಗಳಲ್ಲಿ ಎಷ್ಟು ಪ್ರಮಾಣದಲ್ಲಿ ಸರ್ಕಾರಿ ಭೂಮಿ ಒತ್ತುವರಿಯಾಗಿದೆ ; ಇದನ್ನು ಯಾವ ರೀತಿ ಗುರುತಿಸಲಾಗಿದೆ ;

(ಆ) ಇದನ್ನು ಸರ್ಕಾರದ ಸುಪರ್ದಿಗೆ ಪಡೆಯಲು ನಿಗಧಿತ ಕಾಲಮಿತಿಯಲ್ಲಿ ಕಾರ್ಯಾಚರಣೆ ಮಾಡಲು ಯಾವ ರೀತಿಯ ಯೋಜನೆ ರೂಪಿಸಿದೆ ;

(ಇ) ಈ ರೀತಿಯ ಒತ್ತುವರಿದಾರರ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳದಿರುವುದರಿಂದ ಒತ್ತುವರಿಯು ಮುಂದುವರಿಯುತ್ತಲೇ ಇರುವುದನ್ನು ತಡೆಗಟ್ಟಲು ಸರ್ಕಾರದ ಕ್ರಮಗಳೇನು ?

## e-commerce ಗೆ ಸಂಬಂಧಿಸಿದ ಮಾಹಿತಿ ಬಗ್ಗೆ

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) :–**

೧೨೯ (೧೮೧) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) e-commerce ಗೆ ಸಂಬಂಧಿಸಿದ ಸಾಮಾನುಗಳನ್ನು ವಿತರಿಸುವ ದ್ವಿ–ಚಕ್ರ ವಾಹನಗಳನ್ನು ಅತೀ ವೇಗವಾಗಿ ಓಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ವಿತರಕರು ಓಡಾಡುವ ವಾಹನಕ್ಕೆ ವೇಗ ನಿಯಂತ್ರಕಗಳನ್ನು (governor) ಅಳವಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ರಾಜ್ಯದಲ್ಲಿ ಉಪ ನೋಂದಣಾಧಿಕಾರಿಗಳು ಶಾಮಿಲಾಗಿ ಅಕ್ರಮ ನೋಂದಣಿ ಮಾಡಿರುವ ಬಗ್ಗೆ

**ಶ್ರೀ ವೈ.ಎಂ ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೩೦ (೧೪೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕೆಲವು ಉಪನೋಂದಣಾಧಿಕಾರಿಗಳು ಶಾಮಿಲಾಗಿ ನಕಲಿ ದಾಖಲೆಗಳ ಸಹಾಯದಿಂದ ಅಕ್ರಮವಾಗಿ ನೋಂದಣಿ ಮಾಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದ್ದಲ್ಲಿ, ಇಲ್ಲಿಯವರೆಗೆ ರಾಜ್ಯದಲ್ಲಿ ಕಂಡು ಬಂದ ಪ್ರಕರಣಗಳೆಷ್ಟು ; (ವಿವರಗಳೊಂದಿಗೆ ಮಾಹಿತಿ ಒದಗಿಸುವುದು)

(ಆ) ಅಕ್ರಮವಾಗಿ ನೋಂದಣಿ ಮಾಡಿಕೊಟ್ಟಿರುವ ಪ್ರಕರಣಗಳಲ್ಲಿ ಸರ್ಕಾರವು ಸರ್ಕಾರಿ ಅಧಿಕಾರಿಗಳ ಮೇಲೆ ಕೈಗೊಂಡ ಕಠಿಣ ಕ್ರಮಗಳೇನು ; (ಸಂಪೂರ್ಣ ವಿವರಗಳೊಂದಿಗೆ ಮಾಹಿತಿ ಒದಗಿಸುವುದು)

(ಇ) ಅಕ್ರಮ ನೋಂದಣಿಯನ್ನು ತಡೆಗಟ್ಟಲು ಸರ್ಕಾರದ ಕ್ರಮಗಳೇನು ಹಾಗೂ ಅಧಿಕಾರಿಗಳಿಗೆ ಈ ಅಕ್ರಮ ನೋಂದಣಿಯನ್ನು ಮಾಡದಂತೆ ಇರಲು ಸರ್ಕಾರದ ಕಠಿಣ ಆದೇಶಗಳೇನು ? (ವಿವರಗಳೊಂದಿಗೆ ಮಾಹಿತಿ ಒದಗಿಸುವುದು)

## ಬಳ್ಳಾರಿ ಜಿಲ್ಲೆ ಕಂಪ್ಲಿ ಪಟ್ಟಣ ವ್ಯಾಪ್ತಿಯ ರಾಜ್ಯ ಹೆದ್ದಾರಿಗೆ ಬರುವ ತುಂಗಭದ್ರಾ ನದಿಗೆ ಸೇತುವೆ ನಿರ್ಮಾಣದ ಬಗ್ಗೆ

**ಶ್ರೀ ವೈ. ಎಂ ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೩೧ (೧೮೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆ, ಕಂಪ್ಲಿ ಪಟ್ಟಣ ವ್ಯಾಪ್ತಿಯ ರಾಜ್ಯ ಹೆದ್ದಾರಿಯಲ್ಲಿ ಬರುವ ತುಂಗಭದ್ರಾ ನದಿಗೆ ಅಡ್ಡಲಾಗಿ ಹೊಸ ಸೇತುವೆ ನಿರ್ಮಾಣ ಕಾಮಗಾರಿಯನ್ನು ನಡೆಸಲು ಉದ್ದೇಶಿಸಲಾಗಿದೆಯೇ ; (ಇದ್ದಲ್ಲಿ, ವಿವರಗಳನ್ನು ಒದಗಿಸುವುದು)

(ಆ) ಪ್ರಸ್ತುತ ಇರುವ ಸೇತುವೆಯನ್ನು ಯಾವಾಗ ಕಟ್ಟಲಾಗಿದೆ ಮತ್ತು ಅದರ ಬಾಳಿಕೆಯ ಅವಧಿ ಎಷ್ಟು ; ಪ್ರಸ್ತುತ ಇರುವ ಸೇತುವೆಯ ಗುಣಮಟ್ಟ ಎಷ್ಟಿದೆ ; (ವಿವರಗಳನ್ನು ಒದಗಿಸುವುದು)

(ಇ) ಹೊಸ ಸೇತುವೆ ನಿರ್ಮಾಣದ ಪ್ರಗತಿ ಯಾವ ಹಂತದಲ್ಲಿದೆ ; ಯಾವಾಗ ಪ್ರಾರಂಭ ಮಾಡಲಾಗುವುದು ; ಅದಕ್ಕೆ ಒದಗಿಸಲಾಗಿರುವ ಅನುದಾನ ಎಷ್ಟು ? (ವಿವರಗಳನ್ನು ಒದಗಿಸುವುದು)

## ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಯೋಜನೆಗಳ ವಿವರಗಳ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) :–**

೧೩೨ (೧೪೩) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಬಜೆಟ್‌ನಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ ; (ವಿವರ ನೀಡುವುದು)

(ಆ) ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ರಾಜ್ಯದಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ ಹಾಗೂ ಸಿವಿಲ್ ಹಾಗೂ ಮಸೀದಿ ನವೀಕರಣ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡಲಾಗಿದೆಯೇ ; (ತಾಲ್ಲೂಕುವಾರು ವಿವರ ನೀಡುವುದು)

(ಇ) ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾರ ಕಲ್ಯಾಣ ಇಲಾಖೆಯಿಂದ ಹೊಸದಾಗಿ ಎಷ್ಟು ಶಾಲೆಗಳನ್ನು ನಿರ್ಮಿಸಲು ಯೋಜನೆ ಮಾಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಈ) ವಸತಿ ಇಲಾಖೆಯಿಂದ ರಾಜ್ಯದ ಯಾವ ಯಾವ ತಾಲ್ಲೂಕುಗಳಲ್ಲಿ ಗೃಹ ನಿರ್ಮಾಣ ಮಾಡಲಾಗುತ್ತಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಉ) ರಾಜ್ಯದಲ್ಲಿ ಈ ವರ್ಷ ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ ? (ವಿವರ ನೀಡುವುದು)

## ರೇಬಿಸ್ ನಿಯಂತ್ರಣಕ್ಕೆ ಓರಲ್ ಲಸಿಕೆ ನೀಡುವ ಬಗ್ಗೆ

**ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೩೩ (೧೪೫) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರೇಬಿಸ್‌ನಿಂದ ಸಾವುಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳ ಕಂಡು ಬಂದಿರುವುದು ನಿಜವೇ ; ನಿಜವಿದ್ದಲ್ಲಿ, ಅದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ರೇಬಿಸ್ ಸೋಂಕು ನಿಯಂತ್ರಣಕ್ಕೆ ಬೀದಿ ನಾಯಿಗಳಿಗೆ ಬಾಯಿ ಮೂಲಕ ನೀಡಲಾಗುವ ಓರಲ್ ಲಸಕೆ ಅಭಿವೃದ್ಧಿ ಪಡಿಸುತ್ತಿರುವುದು ನಿಜವೇ ; ನಿಜವಾಗಿದ್ದಲ್ಲಿ, ಎಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ ಮತ್ತು ಟ್ರಯಲ್ ಯಾವಾಗ ಮಾಡಲಾಗುವುದು ;

(ಇ) ಓರಲ್ ಲಸಿಕೆ ಅಭಿವೃದ್ಧಿ ಪಡಿಸಲು ನೀಡಿರುವ ಅನುದಾನ ಎಷ್ಟು ?

## ಕೊಳಚೆ ನಿರ್ಮೂಲನಾ ಮಂಡಳಿಯ ಮನೆಗಳನ್ನು ನೀಡುವ ಬಗ್ಗೆ

**ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೩೪ (೧೪೬) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯ ವತಿಯಿಂದ ಮನೆಗಳನ್ನು ನೀಡಲು ಅರ್ಜಿ ಸಲ್ಲಿಸಿದ ಫಲಾನುಭವಿಗಳ ಸಂಖ್ಯೆ ಎಷ್ಟು ; ಅದರಲ್ಲಿ, ಎಷ್ಟು ಫಲಾನುಭವಿಗಳಿಗೆ ಮನೆಗಳನ್ನು ನೀಡಲಾಗಿದೆ ;

(ಆ) ಉಳಿದ ಫಲಾನುಭವಿಗಳಿಗೆ ಮನೆಗಳನ್ನು ಯಾವಾಗ ನೀಡಲಾಗುವುದು ;

(ಇ) ಮನೆಗಳ ನಿರ್ಮಾಣ ಪೂರ್ಣಗೊಳ್ಳದಿರಲು ಕಾರಣಗಳೇನು ;

(ಈ) ಅಧಿಕಾರಿಗಳು ಮತ್ತು ಗುತ್ತಿಗೆದಾರರ ಹಣ ದಾಹದಿಂದ ವಿಳಂಬವಾಗುತ್ತಿದೆಯೇ ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು ;

(ಉ) ರಸ್ತೆ, ಚರಂಡಿ ಹೀಗೆ ಮೂಲಭೂತ ಸೌಲಭ್ಯಗಳ ವಿಳಂಬದಿಂದಾಗಿ ಮನೆಗಳ ವಿತರಣೆಗೆ ಹಿನ್ನಡೆಯಾಗಿದೆಯೇ ; ಹಾಗಿದ್ದಲ್ಲಿ, ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಹಾಲಿನಲ್ಲಿ ಕಲಬೆರಕೆ ಪದಾರ್ಥಗಳನ್ನು ಸೇರಿಸುತ್ತಿರುವ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೩೫ (೧೪೭) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆಲವಡೆ ಡೇರಿಗಳಿಗೆ ಪೂರೈಕೆ ಆಗುವ ಹಾಲಿನಲ್ಲಿ ಯೂರಿಯಾ, ಸಕ್ಕರೆ, ಪೌಡರ್ ಸೇರಿದಂತೆ ಇನ್ನಿತರೆ ರಾಸಾಯನಿಕಗಳನ್ನು ಸೇರಿಸುತ್ತಿರುವುದರಿಂದ ಹಾಲಿನಲ್ಲಿ ಕಲಬೆರಕೆ ಅಂಶ ಕಂಡುಬರುತ್ತಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಯಾವ ಯಾವ ಜಿಲ್ಲೆಗಳ ಡೇರಿಗಳಿಗೆ ಪೂರೈಕೆ ಆಗುವ ಹಾಲಿನಲ್ಲಿ ಕಲಬೆರಕೆ ಅಂಶ ಕಂಡು ಬಂದಿರುವುದನ್ನು ಪತ್ತೆ ಹಚ್ಚಲಾಗಿದೆ ; ಈವರೆವಿಗೂ ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಕೆಎಂಎಫ್ ಗೆ ಪೂರೈಕೆ ಆಗುತ್ತಿರುವ ಹಾಲಿನಲ್ಲಿ ಹಾಗೂ ಖಾಸಗಿ ಕಂಪನಿಗಳ ಹಾಲಿನಲ್ಲಿ ಶೇಕಡ ಎಷ್ಟು ಪ್ರಮಾಣದಲ್ಲಿ ಕಲಬೆರಕೆ ಅಂಶ ಸೇರುತ್ತಿರುವುದು ಪತ್ತೆ ಆಗಿದೆ ; (ವಿವರ ನೀಡುವುದು)

(ಈ) ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯಡಿ ಕಲಬೆರಕೆಗೊಳಿಸುವ ಅಪರಾಧಕ್ಕೆ ಪ್ರಸ್ತುತ ವಿಧಿಸಲಾಗುವ ಶಿಕ್ಷೆ ಏನು ; ಶಿಕ್ಷೆ ಪ್ರಮಾಣ ಹೆಚ್ಚಿಸಲು ಸರ್ಕಾರ ಉದ್ದೇಶಿಸಿದೆಯೇ ; (ಸಂಪೂರ್ಣ ಮಾಹಿತಿ ನೀಡುವುದು)

(ಉ) ಕಲಬೆರಕೆ ಹಾಲಿನ ಪೂರೈಕೆಯನ್ನು ತಡೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ಹೇಮಾವತಿ ಜಲಾಶಯ ಪುನರ್ವಸತಿ ಸಂತ್ರಸ್ತರ ಸಂಕಷ್ಟ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೩೬ (೧೪೪೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೇಮಾವತಿ ಜಲಾಶಯ ನಿರ್ಮಾಣದಲ್ಲಿ ಭೂಮಿ ಕಳೆದುಕೊಂಡ ಸಂತ್ರಸ್ತರ ಸಾಗುವಳಿ ಚೀಟಿ ಆಧಾರದಲ್ಲಿಯೇ ಮನೆ ನಿರ್ಮಿಸಿಕೊಂಡು ಸಾಗುವಳಿ ಮಾಡುತ್ತಿದ್ದ ಇವರಿಗೆ ಮನೆ ಹಕ್ಕು ಪತ್ರ ನೀಡದಿರುವುದು, ಪಹಣಿ ಸೇರಿದಂತೆ ಜಮೀನಿನ ಅಗತ್ಯ ದಾಖಲೆಗಳನ್ನು ಸರಿಪಡಿಸದೇ ಇರುವುದರಿಂದ ತೀವ್ರ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಭೂ ದಾಖಲೆಗಳು ಸರಿಯಿಲ್ಲದ ಕಾರಣಕ್ಕೆ ಸರ್ಕಾರದ ಸೌಲಭ್ಯಗಳಾದ ಪಿ.ಎಂ ಕಿಸಾನ್, ಬೆಳೆಸಾಲ, ಬೆಳೆ ಹಾನಿ ಪರಿಹಾರ, ಬೆಂಬಲ ಬೆಲೆಯಲ್ಲಿ ಉತ್ಪನ್ನ ಮಾರಾಟಕ್ಕೆ ನೋಂದಣಿ ಮಾಡಲು ಸಾಧ್ಯವಾಗದಿರುವುದು ಸೇರಿದಂತೆ ಅನೇಕ ಸಮಸ್ಯೆಗಳು ಆಗುತ್ತಿದ್ದು, ಸಂತ್ರಸ್ತರ ೩ ದಶಕಗಳ ಸಂಕಷ್ಟವನ್ನು ಪರಿಹರಿಸಲು ಸರ್ಕಾರದ ಕ್ರಮಗಳೇನು ;

(ಇ) ಹೇಮಾವತಿ ಪನರ್ವಸತಿ ಯೋಜನೆಯ ಸಂತ್ರಸ್ತರಿಗೆ ಮೀಸಲಿಟ್ಟ ಜಮೀನನ್ನು ಬೇರೆಯವರಿಗೆ ಅಕ್ರಮವಾಗಿ ಭೂ ಮಂಜುರಾತಿ ಮಾಡಲಾಗಿದೆ ಎನ್ನುವ ಬಲವಾದ ಆರೋಪಗಳು ಕೇಳಿ ಬಂದಿದ್ದು, ಇಂತಹ ಎಷ್ಟು ಪ್ರಕರಣಗಳು ಪತ್ತೆಯಾಗಿವೆ ; ರದ್ದುಪಡಿಸಲಾದ ಮಂಜೂರಾತಿ ಪ್ರಕರಣಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಈ) ಅಕ್ರಮ ಭೂ ಮಂಜೂರಾತಿ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ನೌಕರರ ವಿರುದ್ಧ ಸರ್ಕಾರಕ್ಕೆ ವರದಿ ಸಲ್ಲಿಕೆಯಾಗಿದೆಯೇ ; ಆಗಿದ್ದಲ್ಲಿ, ತಪ್ಪಿತಸ್ಥರ ವಿರುದ್ಧ ತೆಗೆದುಕೊಂಡಿರುವ ಶಿಸ್ತು ಕ್ರಮಗಳೇನು ; (ಅಧಿಕಾರಿ/ಸಿಬ್ಬಂದಿಗಳ ಹೆಸರು, ಪದನಾಮಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಉ) ನೈಜ ಪ್ರಕರಣಗಳಲ್ಲಿ ಅರ್ಹರಿಗೆ ನ್ಯಾಯ ಒದಗಿಸಲು ಸರ್ಕಾರದ ಕ್ರಮವೇನು ? (ಸಂಪೂರ್ಣ ವಿವರ ನೀಡುವುದು)

## ಮಾಜಿ ಸೈನಿಕರಿಗೆ ಸವಲತ್ತು ದೊರೆಯದಿರುವ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೩೭ (೧೪೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರದಿಂದ ಮಾಜಿ ಸೈನಿಕರಿಗೆ ಪ್ರಸ್ತುತ ಭೂ ಮಂಜೂರಾತಿ ಸೇರಿದಂತೆ ನೀಡುವ ಇನ್ನಿತರೆ ಸೌಲಭ್ಯಗಳೇನು ;

(ಆ) ರಾಜ್ಯದಲ್ಲಿ ಭೂ ಲಭ್ಯತಾ ಪಟ್ಟಿಯಂತೆ ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು) ಮಂಡ್ಯ, ಮೈಸೂರು, ಹಾಸನ, ಚಾಮರಾಜನಗರ ಜಿಲ್ಲೆಗಳಿಗೆ ಸಂಬಂಧಿಸಿದಂತೆ ತಾಲ್ಲೂಕುವಾರು ಮಾಹಿತಿ ನೀಡುವುದು ;

(ಇ) ಮಾಜಿ ಸೈನಿಕರು ಭೂ ಮಂಜೂರಾತಿ ಸೇರಿದಂತೆ ಇತರೆ ಸವಲತ್ತು ಕೋರಿ ಎಷ್ಟು ಮಂದಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದಾರೆ ; ಈ ಪೈಕಿ ಸವಲತ್ತು ಮಂಜೂರು ಮಾಡಲಾದ ಮತ್ತು ಬಾಕಿಯಿರುವ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು) ಮಂಡ್ಯ, ಮೈಸೂರು, ಹಾಸನ, ಚಾಮರಾಜನಗರ ಜಿಲ್ಲೆಗಳಿಗೆ ಸಂಬಂಧಿಸಿದಂತೆ ತಾಲ್ಲೂಕುವಾರು ಮಾಹಿತಿ ನೀಡುವುದು ;

(ಈ) ಕಳೆದ ಎಷ್ಟು ವರ್ಷಗಳಿಂದ ಅರ್ಜಿಗಳು ಬಾಕಿ ಉಳಿದಿವೆ ; ಇದಕ್ಕೆ ಕಾರಣಗಳೇನು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ರಾಜ್ಯದಲ್ಲಿ ಮಾಜಿ ಸೈನಿಕರಿಗೆ ಭೂ ಮಂಜೂರಾತಿ ಮಾಡಿ ಹಿಂಪಡೆದಿರುವ ಯಾವುದಾದರೂ ಪ್ರಕರಣಗಳಿವೆಯೇ ;

(ಊ) ಇದ್ದಲ್ಲಿ, ಎಷ್ಟು ಮಂದಿ ಮಾಜಿ ಸೈನಿಕರಿಗೆ ಮಂಜೂರು ಮಾಡಲಾದ ಭೂಮಿಯನ್ನು ಹಿಂದಕ್ಕೆ ಪಡೆಯಲಾಗಿದೆ ; ಇದರ ಒಟ್ಟು ವಿಸ್ತೀರ್ಣ ಎಷ್ಟು ; ಕಾರಣಗಳೇನು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಋ) ಮಾಜಿ ಸೈನಿಕರಿಗೆ ಭೂ ಮಂಜೂರಾತಿ ಮಾಡಲು ಸಾಧ್ಯವಿಲ್ಲದಿದ್ದಲ್ಲಿ, ಬೇರಾವ ಸೌಲಭ್ಯಗಳನ್ನು ನೀಡಲು ಸರ್ಕಾರ ಉದ್ದೇಶಿಸಿದೆ ?

## ಮಂಡ್ಯ ಜಿಲ್ಲೆಯಲ್ಲಿ ಲಭ್ಯವಿರುವ ಸರ್ಕಾರಿ ಜಮೀನು ಕುರಿತು

**ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೩೮ (೧೫೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆಯಲ್ಲಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು ೧೯೬೯ರ ನಿಯಮ ೩ರ ಅನ್ವಯ ಸರ್ಕಾರಿ ಜಮೀನುಗಳ ಭೂ ಲಭ್ಯತಾ ಪಟ್ಟಿಯನ್ನು ತಯಾರಿಸಲಾಗಿದೆಯೇ ;

(ಆ) ಹಾಗಿದ್ದಲ್ಲಿ, 'ಭೂ ಲಭ್ಯತಾ ಪಟ್ಟಿ ಪ್ರಕಾರ' ಪ್ರಸ್ತುತ ಮಂಡ್ಯ ಜಿಲ್ಲೆಯಲ್ಲಿರುವ ಸರ್ಕಾರಿ ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು ; (೯ ವಿವಿಧ ರೀತಿಯ ಭೂ ವರ್ಗೀಕರಣದಂತೆ ತಾಲ್ಲೂಕುವಾರು ಲಭ್ಯವಿರುವ ಜಮೀನಿನ ವಿಸ್ತೀರ್ಣದ ಮಾಹಿತಿ ನೀಡುವುದು)

(ಇ) ನಿಯಮಗಳನ್ವಯ ಪ್ರತಿ ವರ್ಷ 'ಭೂ ಲಭ್ಯತಾ ಪಟ್ಟಿ' ಅನ್ನು ಪರಿಷ್ಕರಿಸಲಾಗುತ್ತಿದೆಯೇ ; ಇದ್ದಲ್ಲಿ ಪ್ರತಿ ವರ್ಷ ಯಾವ ಮಾಹೆಯಲ್ಲಿ ಪರಿಷ್ಕರಿಸಿ ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಬೇಕು ಎಲ್ಲೆಲ್ಲಿ ಪ್ರಕಟಿಸಬೇಕು (ಸಂಪೂರ್ಣ ವಿವರ ನೀಡುವುದು)

(ಈ) ಇಲ್ಲದಿದ್ದಲ್ಲಿ, 'ಭೂ ಲಭ್ಯತಾ ಪಟ್ಟಿ' ಅನ್ನು ಪ್ರತಿ ವರ್ಷ ಪರಿಷ್ಕರಿಸದೇ ಇರುವುದಕ್ಕೆ ಕಾರಣಗಳೇನು ;

(ಉ) ಮಂಡ್ಯ ಜಿಲ್ಲೆಯಲ್ಲಿ ಕೊನೆಯದಾಗಿ 'ಭೂ ಲಭ್ಯತಾ ಪಟ್ಟಿ'ಯನ್ನು ಪರಿಷ್ಕರಿಸಿದ್ದು, ಯಾವಾಗ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಊ) ಕಳೆದ ೫ ವರ್ಷಗಳಲ್ಲಿ 'ಭೂ ಲಭ್ಯತಾ ಪಟ್ಟಿ' ಯಿಂದ ಮಂಜೂರಾತಿ ಮಾಡಲಾದ ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು ; ಯಾವ ಉದ್ದೇಶಗಳಿಗಾಗಿ ಮಂಜೂರಾತಿ ಮಾಡಲಾಗಿದೆ ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಸರ್ಕಾರಿ ಜಮೀನು ಮಂಜೂರಾತಿ ಕುರಿತು

**ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೩೯ (೧೫೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆಯಲ್ಲಿ ನಮೂನೆ ೫೦, ೫೩, ೫೭ ಹಾಗೂ ೯೪ಸಿ, ೯೪ಸಿಸಿ ಪ್ರಕಾರ ಜಮೀನು ಮಂಜೂರಾತಿ ಕೋರಿ ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಈ ಪೈಕಿ ಭೂ ಮಂಜೂರಾತಿ ಮಾಡಲಾದ ಪ್ರಕರಣಗಳ ಸಂಖ್ಯೆ ಹಾಗೂ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮತ್ತು ವಿವಿಧ ನಮೂನೆವಾರು ಮಾಹಿತಿ ನೀಡುವುದು)

(ಇ) ನಮೂನೆ ೫೦, ೫೩, ೫೭ ಹಾಗೂ ೯೪ಸಿ, ೯೪ಸಿಸಿ ಪ್ರಕಾರ ಜಮೀನು ಮಂಜೂರಾತಿ ಮಾಡಲು ಇರುವ ಮಾನದಂಡಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಮಂಡ್ಯ ಜಿಲ್ಲೆಯಲ್ಲಿ ಈ ನಮೂನೆಗಳಡಿಯಲ್ಲಿ ಭೂ ಮಂಜೂರಾತಿಯನ್ನು ಅಕ್ರಮವಾಗಿ ಮಾಡಲಾಗಿರುವ ಯಾವುದಾದರೂ ಪ್ರಕರಣಗಳಿವೆಯೇ ;

(ಉ) ಇದ್ದಲ್ಲಿ, ಅಂತಹ ಪ್ರಕರಣಗಳ ಸಂಖ್ಯೆ ಎಷ್ಟು ; ಮಂಜೂರು ಮಾಡಲಾದ ಜಮೀನಿನ ಅಂದಾಜು ವಿಸ್ತೀರ್ಣ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಊ) ಇಂತಹ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಲಾಗಿರುವ ನೌಕರರು/ತಪ್ಪಿತಸ್ಥರು ಯಾರು ಇವರ ವಿರುದ್ಧ ತೆಗೆದುಕೊಂಡಿರುವ ಶಿಸ್ತುಕ್ರಮಗಳೇನು ? (ಹೆಸರು, ಪದನಾಮದೊಂದಿಗೆ ಸಂಪೂರ್ಣ ವಿವರ ನೀಡುವುದು)

## ವಕ್ಫ್ ಆಸ್ತಿಗಳ ಕಬಳಿಕೆ ಕುರಿತು

**ಶ್ರೀ ಟಿ. ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೦ (೧೫೩) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಕ್ಫ್‌ಗೆ ಸೇರಿದ ಆಸ್ತಿ ಪಾಸ್ತಿ ಕಬಳಿಕೆ ಆಗಿರುವ ಬಗ್ಗೆ ಹಾಗೂ ಆಸ್ತಿ ವಿಚಾರ, ಕಬಳಿಕೆ ಆರೋಪಕ್ಕೆ ಗುರಿಯಾಗಿರುವವರ ಹೆಸರು ಸಹಿತ ವಿವರ ನೀಡುವುದು ;

(ಆ) ಈ ಆಸ್ತಿಯನ್ನು ಮರಳಿ ವಕ್ಫ್ ವಶಕ್ಕೆ ಪಡೆಯಲು ಕೈಗೊಂಡಿರುವ ಕ್ರಮಗಳೇನು ; (ಮಾಹಿತಿ ಒದಗಿಸುವುದು)

(ಇ) ರಾಜ್ಯದ ಎಷ್ಟು ಮಂದಿ ರೈತರಿಗೂ ಹಾಗೂ ವಕ್ಫ್ ಮಂಡಳಿಗೂ ಭೂಮಿ ವ್ಯಾಜ್ಯ ಇದೆ ? (ವಿಚಾರಣೆ ಪ್ರಕರಣದ ಸಂಖ್ಯೆ, ಆಸ್ತಿ ಪಾಸ್ತಿ ವಿವರ ಸಹಿತ ಸಂಪೂರ್ಣ ಮಾಹಿತಿ ನೀಡುವುದು)

## ಮಂಗಳೂರು–ಮೂಡಬಿದ್ರೆ–ಕಾರ್ಕಳ ಸಂಪರ್ಕದ ರಾಷ್ಟ್ರೀಯ ಹೆದ್ದಾರಿಯ ರಸ್ತೆಯ ಕಾಮಗಾರಿಗಳ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೧ (೧೫೪) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಗಳೂರು–ಮೂಡಬಿದ್ರೆ–ಕಾರ್ಕಳ ಸಂಪರ್ಕದ ರಾಷ್ಟ್ರೀಯ ಹೆದ್ದಾರಿ ೧೬೯ರ ರಸ್ತೆಯ ಕಾಮಗಾರಿಯು ಕಳೆದ ಐದು ವರ್ಷಗಳಲ್ಲಿ ಯಾವುದೇ ಪ್ರಗತಿಯನ್ನು ಸಾಧಿಸದೆ ಕಾಮಗಾರಿ ಕುಂಠಿತಗೊಳ್ಳುವುದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ;

(ಆ) ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯೂ ಬಹಳ ನಿಧಾನಗತಿಯಲ್ಲಿ ಸಾಗುತ್ತಿರುವುದರ ಪರಿಣಾಮವಾಗಿ ಸಾರ್ವಜನಿಕರು ತೊಂದರೆಗೊಳಗಾಗುತ್ತಿದ್ದು, ಭೂಮಿಯನ್ನು ಕಳೆದುಕೊಂಡವರಿಗೆ ಪರಿಹಾರವನ್ನು ವಿತರಣೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ;

(ಇ) ರಾಷ್ಟ್ರೀಯ ಹೆದ್ದಾರಿ ೧೬೯ ರ ಕಾಮಗಾರಿ ಯಾವಾಗ ಮುಕ್ತಾಯಗೊಳ್ಳುವುದು ಮತ್ತು ಇದಕ್ಕೆ ತಗಲುವ ಒಟ್ಟು ವೆಚ್ಚವೆಷ್ಟು ; ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳು ಅಸಮರ್ಪಕವಾಗಿ ನಿರ್ಮಾಣಗೊಂಡಿದ್ದು, ಈ ಬಗ್ಗೆ ಇಲಾಖೆ ತನಿಖೆ ನಡೆಸಿದೆಯೇ ; ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ; (ವಿವರ ನೀಡುವುದು)

(ಈ) ರಾಷ್ಟ್ರೀಯ ಹೆದ್ದಾರಿಯ ಅನೇಕ ಪ್ಲೈ–ಓವರ್‌ಗಳು ಹಾಗೂ ರಸ್ತೆ ಕಾಮಗಾರಿಯು ಅವೈಜ್ಞಾನಿಕವಾಗಿ ನಡೆದಿದ್ದು, ನೀರು ನಿಲ್ಲುವುದು ಮತ್ತು ಮಳೆಗಾಲದಲ್ಲಿ ರಸ್ತೆ ದಾಟಲು ಅಸಾಧ್ಯವಾದ ಪರಿಸ್ಥಿತಿ ಉಂಟಾಗುತ್ತಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಉ) ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಾಣ ಮಾಡಬೇಕಾದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ರಸ್ತೆಗಳ ಮೇಲೆ ರಾಜ್ಯ ಸರ್ಕಾರದ ನಿಯಂತ್ರಣವೇನು ; ಸರ್ಕಾರವು ಯಾವ ರೀತಿಯಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಕ್ರಮಕೈಗೊಂಡಿದೆ ? (ಈ ಬಗ್ಗೆ ವಿವರ ನೀಡುವುದು)

## ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ಗ್ರಾಮದಲ್ಲಿ ವಸತಿ ನಿಗಮದ ಮೂಲಕ ಸೈಟ್ ನೀಡುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೨ (೧೫೫) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ಮಧ್ಯ ಗ್ರಾಮದಲ್ಲಿ ಕೆ.ಎಚ್.ಬಿ (KHB) ಕರ್ನಾಟಕ ವಸತಿ ನಿಗಮದ ಮೂಲಕ ಸೈಟುಗಳನ್ನು ನೀಡಲು ಹಣ ಪಡೆದು ಸೈಟ್‌ಗಳನ್ನು ನೀಡದಿರುವುದರಿಂದ ಅನೇಕರು ವಸತಿ ಹೊಂದಬೇಕೆಂಬ ಜನರ ಬೇಡಿಕೆಗೆ ಸರ್ಕಾರ

ಸ್ಪಂಧಿಸದೆ ಇರಲು ಕಾರಣವೇನು ; ಅರ್ಜಿದಾರರಿಂದ ಮುಂಗಡ ಹಣವನ್ನು ಪಡೆದುಕೊಂಡು ಸೈಟ್‌ಗಳನ್ನು ನೀಡದಿರಲು ಕಾರಣವೇನು ;

(ಆ) ವಸತಿ ಅಭಿವೃದ್ಧಿ ನಿಗಮದಿಂದ ರಾಜ್ಯದ ಜನರಿಗೆ ಮೋಸ ಆಗುತ್ತಿದೆ ಎಂಬ ದೂರುಗಳಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ; (ವಿವರ ಒದಗಿಸುವುದು)

(ಇ) ಮುಂಗಡ ಪಡೆದ ಸೈಟುಗಳ ಸಂಖ್ಯೆ ಎಷ್ಟು ? (ವಿವರ ಒದಗಿಸುವುದು)

## ಕರಾವಳಿ ಭಾಗದಲ್ಲಿ ಮೀನುಗಾರಿಕೆಗೆ ಸಂಬಂಧಪಟ್ಟ ಯೋಜನೆಗಳ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೩ (೧೫೬) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರಾವಳಿ ಭಾಗದಲ್ಲಿ ಮೀನುಗಾರಿಕೆಗೆ ಸಂಬಂಧಪಟ್ಟಂತೆ ಯಾವ ಯಾವ ಯೋಜನೆಯಡಿಯಲ್ಲಿ ಎಷ್ಟು ಜನರಿಗೆ ಸರ್ಕಾರದಿಂದ ಸಹಾಯಧನ ಬಿಡುಗಡೆ ಮಾಡಲಾಗಿದೆ ; ೨೦೨೩–೨೪ ಮತ್ತು ೨೦೨೪–೨೫ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಅನುದಾನ ಎಷ್ಟು ; (ವಿವರ ನೀಡುವುದು)

(ಆ) ಮೀನುಗಾರಿಕೆ ದಿನವನ್ನು ಮಂಗಳೂರಿನಲ್ಲಿ ನಡೆಸದೇ ಇರಲು ಕಾರಣಗಳೇನು ; ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಈ ಉತ್ಸವ ನಡೆಸಲಾಗಿದೆ ; ಇದಕ್ಕೆ ತಗಲಿದ ವೆಚ್ಚ ಎಷ್ಟು ; (ವರ್ಷವಾರು ವಿವರ ನೀಡುವುದು)

(ಇ) ೨೦೨೩-೨೪ ಮತ್ತು ೨೦೨೪-೨೫ನೇ ಸಾಲಿನಲ್ಲಿ ಮೀನುಗಾರಿಕೆಗೆ ಎಷ್ಟು ಹಣವನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ ಸರ್ಕಾರದಿಂದ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳಾವುವು ; (ವಿವರ ನೀಡುವುದು)

(ಈ) ಸಿ ಆಂಬುಲೇನ್ಸ್ ಕಾರ್ಯಕ್ರಮ ಯಾವಾಗ ಜಾರಿಗೊಳ್ಳುವುದು ? (ವಿವರ ನೀಡುವುದು)

## ಮಂಗಳೂರು ನಗರದಲ್ಲಿ KSRTC ಬಸ್ಸುಗಳು ಇಲ್ಲದಿರುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೪೪ (೧೫೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಗಳೂರು ನಗರದಲ್ಲಿ KSRTC ಬಸ್ಸುಗಳಿಲ್ಲದೆ ಶಕ್ತಿ ಯೋಜನೆ, ಹಿನ್ನಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ;

(ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಕ್ತಿ ಯೋಜನೆಯಲ್ಲಿ ಸಂಚರಿಸಿರುವ ಒಟ್ಟು ಮಹಿಳೆಯರ ಸಂಖ್ಯೆ ಎಷ್ಟು ; ಇದಕ್ಕೆ ತಗುಲಿದ ಮೊತ್ತ ಎಷ್ಟು ; (ವಿವರ ಒದಗಿಸುವುದು)

(ಇ) KSRTC ಯಲ್ಲಿ ಸಮಗ್ರ ಬದಲಾವಣೆಯನ್ನು ತಂದು ಹೆಚ್ಚು ಲಾಭವನ್ನು ಗಳಿಸಿರುವ ಯೋಜನೆಗಳು ಯಾವುವು ; (ವಿವರವನ್ನು ಒದಗಿಸುವುದು) ಹೆಚ್ಚು ಸಂಖ್ಯೆಯಲ್ಲಿ KSRTC ಬಸ್ಸುಗಳನ್ನು ನಗರದಲ್ಲಿ ಓಡಿಸಲು ಸರ್ಕಾರದ ಯೋಜನೆಗಳಾವುವು ?

# ರಾಜ್ಯದಲ್ಲಿ ಕ್ರೈಸ್ತ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೫ (೧೫೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕ್ರೈಸ್ತ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯಲು ವಿದೇಶಗಳಿಗೆ ತೆರಳಲು ರಾಜ್ಯ ಅಲ್ಪಸಂಖ್ಯಾತರ ನಿಗಮದ ಮೂಲಕ ಪ್ರೋತ್ಸಾಹವನ್ನು ನೀಡಿ ವಿದ್ಯಾರ್ಥಿವೇತನ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ; ಈ ಬಗ್ಗೆ ಸರ್ಕಾರಕ್ಕೆ ಇರುವ ತೊಂದರೆಗಳೇನು ;

(ಆ) ಕ್ರೈಸ್ತ ಸಮುದಾಯದ ಜೀವನ ಪದ್ಧತಿ ಮತ್ತು ಶಿಕ್ಷಣ ವ್ಯವಸ್ಥೆಯ ಬಗ್ಗೆ ಸರ್ಕಾರದ ಅಂಕಿ–ಅಂಶಗಳನ್ನು ಸಂಗ್ರಹಿಸಿದೆಯೇ ; (ವಿವರ ಒದಗಿಸುವುದು)

(ಇ) ರಾಜ್ಯದಲ್ಲಿ ಒಟ್ಟು ಕ್ರೈಸ್ತ ಸಮುದಾಯದ ಸಂಖ್ಯೆಗಳು ಎಷ್ಟು ; ಯಾವ ಯಾವ ಜಿಲ್ಲೆಯಲ್ಲಿ ಕ್ರೈಸ್ತ ಸಮುದಾಯದವರು ಹೆಚ್ಚು ವಾಸವಾಗಿದ್ದಾರೆ ; ಅವರ ಆರ್ಥಿಕ ಪರಿಸ್ಥಿತಿ ಏನು ; (ವಿವರ ನೀಡುವುದು)

(ಈ) ಕ್ರೈಸ್ತ ಸಮುದಾಯದ ಬೆಳವಣಿಗೆಗೆ ಮತ್ತು ಸಮುದಾಯದ ಜನರ ಬದುಕಿಗಾಗಿ ಸರ್ಕಾರ ಕೈಗೊಂಡ ಕ್ರಮವೇನು ? (ವಿವರ ಒದಗಿಸುವುದು)

# ದಾಖಲೆಗಳಲ್ಲಿ ಮಾತ್ರವಿದ್ದು ವಾಸ್ತವದಲ್ಲಿ ಇಲ್ಲದಿರುವ ದೇವಸ್ಥಾನಗಳ ಆಸ್ತಿಯ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೬ (೧೫೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಮುಜರಾಯಿ ದೇವಾಲಯಗಳು ಯಾವುವು ; ಸದರಿ ದೇವಸ್ಥಾನಗಳಿಂದ ಬರುತ್ತಿರುವ ಆದಾಯ ಎಷ್ಟು ; ಈ ಆದಾಯ ಯಾವ ಉದ್ದೇಶಕ್ಕೆ ಬಳಕೆ ಆಗುತ್ತಿದೆ ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಹೆಚ್ಚು ಆದಾಯವುಳ್ಳ ದೇವಾಲಯಗಳಿಂದ ಬರುವ ಆದಾಯವನ್ನು ಬೇರೆ ದೇವಸ್ಥಾನಗಳಿಗೆ ಹಂಚಿಕೆ ಮಾಡುತ್ತಿರುವುದು ನಿಜವೇ ; ಹಾಗಿದ್ದಲ್ಲಿ, ಯಾವ ಯಾವ ದೇವಾಲಯಗಳ ಆದಾಯವನ್ನು ಯಾವ ದೇವಸ್ಥಾನಕ್ಕೆ ಹಂಚಿಕೆ ಮಾಡಲಾಗಿದೆ ; (ಸಮಗ್ರ ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ಮುಜರಾಯಿ ದೇವಾಲಯಗಳ ಒಟ್ಟು ಆಸ್ತಿ ಎಷ್ಟು ; (ಜಿಲ್ಲಾವಾರು ವಿವರವನ್ನು ದೇವಸ್ಥಾನವಾರು ನೀಡುವುದು)

(ಈ) ಟೆನೆಂಟ್ ಆಕ್ಟ್ ಬರುವುದಕ್ಕಿಂತ ಮೊದಲು ರಾಜ್ಯದ ಮುಜರಾಯಿ ದೇವಾಲಯಗಳಿಗಿದ್ದ ಆಸ್ತಿ ಎಷ್ಟು ; ಎಷ್ಟು ಆಸ್ತಿಯನ್ನು ಟೆನೆಂಟ್ ಆಕ್ಟ್ ಮೂಲಕ ಮಂಜೂರು ಮಾಡಲಾಗಿದೆ ; (ಜಿಲ್ಲಾವಾರು ವಿವರ ಒದಗಿಸುವುದು)

(ಉ) ಕೆಲವೊಂದು ದೇವಾಲಯಗಳು ದಾಖಲೆಗಳಲ್ಲಿ ಮಾತ್ರವಿದ್ದು, ವಾಸ್ತವವಾಗಿ ದೇವಾಲಯಗಳು ಇಲ್ಲದೇ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಂಡಿದೆ ? (ವಿವರ ಒದಗಿಸುವುದು)

# ಇನಾಂ ದತ್ತಾತ್ರೇಯ ಪೀಠದ ಆಸ್ತಿಗಳನ್ನು ಅಕ್ರಮವಾಗಿ ಪರಭಾರೆ ಮಾಡಿರುವ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೭ (೧೬೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕು ಇನಾಂ ದತ್ತಾತ್ರೇಯ ಪೀಠಕ್ಕೆ ಸಂಬಂಧಿಸಿದ ಆಸ್ತಿಗಳನ್ನು ಅಕ್ರಮವಾಗಿ ಪರಭಾರೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ವರೆಗೆ ಯಾವ ಯಾವ ಆಸ್ತಿಗಳು ಪರಭಾರೆ ಆಗಿವೆ ಹಾಗೂ ಯಾರು ಈ ಆಸ್ತಿಗಳನ್ನು ಪರಭಾರೆ ಮಾಡಿದ್ದಾರೆ ;

(ಇ) ದತ್ತಾತ್ರೇಯ ಪೀಠಕ್ಕೆ ಸಂಬಂಧಿಸಿದ ಆಸ್ತಿಗಳನ್ನು ಸಂರಕ್ಷಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಅಕ್ರಮವಾಗಿ ಪರಭಾರೆಯಾಗಿರುವ ಆಸ್ತಿಗಳನ್ನು ವಶಕ್ಕೆ ಪಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; (ವಿವರ ಒದಗಿಸುವುದು)

(ಈ) ಕಳೆದ ೩ ವರ್ಷಗಳಲ್ಲಿ ಇನಾಂ ದತ್ತಾತ್ರೇಯ ಪೀಠಕ್ಕೆ ಹುಂಡಿ ಹಾಗೂ ಇತರೆ ಮೂಲಗಳಿಂದ ಸಂಗ್ರಹವಾಗಿರುವ ಹಣ ಹಾಗೂ ಇತರೆ ವಸ್ತುಗಳು ಎಷ್ಟು ; ಇದರಲ್ಲಿ ಎಷ್ಟು ಹಣವನ್ನು ಯಾವ ಯಾವ ಕಾರಣಕ್ಕಾಗಿ ಉಪಯೋಗಿಸಲಾಗಿದೆ ; ಬಾಕಿ ಇರುವ ಹಣ ಹಾಗೂ ಇತರೆ ವಸ್ತುಗಳು ಎಷ್ಟು ಹಾಗೂ ಇದನ್ನು ಎಲ್ಲಿ ಸಂಗ್ರಹಿಸಲಾಗಿದೆ ? (ವಿವರ ಒದಗಿಸುವುದು)

# ರಾಜ್ಯದಲ್ಲಿರುವ ವಸತಿ ರಹಿತರ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೮ (೧೬೧) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ವಸತಿ ರಹಿತರ ಸಂಖ್ಯೆ ಎಷ್ಟು ; ಸಮೀಕ್ಷೆ ಮಾಡಿದ್ದು, ಯಾವಾಗ ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಮನೆಗಳನ್ನು ಹಂಚಿಕೆ ಮಾಡಲು ಸರ್ಕಾರ ಗುರಿ ಹೊಂದಿತ್ತು ; ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ ; ನಗರ ಮತ್ತು ಗ್ರಾಮೀಣ ಪ್ರದೇಶಕ್ಕೆ ಎಷ್ಟು ಮನೆಗಳ ಹಂಚಿಕೆ ಆಗಿದೆ ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಇ) ಈ ಹಿಂದೆ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಯಡಿ ಚಿಕ್ಕಮಗಳೂರು ನಗರ ಪ್ರದೇಶದ ಫಲಾನಭುವಿಗಳಿಗೆ ಮಂಜೂರಾಗಿದ್ದ ಮನೆಗಳಿಗೆ ಸಹಾಯಧನ ಬಿಡುಗಡೆ ಆಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಸಹಾಯಧನ ಬಿಡುಗಡೆ ಆಗದಿರಲು ಕಾರಣಗಳೇನು ;

(ಈ) ಮನೆ ನಿರ್ಮಿಸಿ ೪ ವರ್ಷಗಳು ಕಳೆದರೂ ಸಹಾಯಧನ ಬಿಡುಗಡೆ ಆಗದೆ ಫಲಾನುಭವಿಗಳಿಗೆ ಸಮಸ್ಯೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಈ ಹಿಂದೆ ಅತಿವೃಷ್ಟಿಯಿಂದ ಹಾನಿಗೀಡಾಗಿರುವ ಮನೆಗಳನ್ನು ಪುನರ್ ನಿರ್ಮಾಣ ಮಾಡಿಕೊಂಡಿರುವ ಫಲಾನುಭವಿಗಳಿಗೆ ಸಹಾಯಧನ ಮಂಜೂರಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ರೀತಿ ಎಷ್ಟು ಪ್ರಕರಣಗಳಿವೆ ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಊ) ಬಾಕಿ ಇರುವ ಸಹಾಯಧನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ; ಈ ಪ್ರಕ್ರಿಯೆ ಯಾವ ಹಂತದಲ್ಲಿದೆ ?

## ವಿವಿಧ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆ ಆಗಿರುವ ಅನುದಾನದ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೯ (೧೬೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷಗಳಿಂದ ಲೋಕೋಪಯೋಗಿ ಇಲಾಖೆಯಿಂದ ವಿವಿಧ ಲೆಕ್ಕ ಶೀರ್ಷಿಕೆಯಡಿ ಪ್ರಗತಿಯಲ್ಲಿರುವ ಕಾಮಗಾರಿಗಳೂ ಸೇರಿದಂತೆ ಹೊಸ ರಸ್ತೆ ಹಾಗೂ ಸೇತುವೆ ನಿರ್ಮಾಣಕ್ಕೆ ಎಷ್ಟು ಅನುದಾನ ಬಿಡುಗಡೆ ಆಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಲೋಕೋಪಯೋಗಿ ಇಲಾಖೆಯಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ನೀಡಲು ಬಾಕಿ ಇರುವ ಬಿಲ್ ಮೊತ್ತ ಎಷ್ಟು ; ಕಳೆದ ಎರಡು ವರ್ಷದಿಂದ ಈ ಉದ್ದೇಶಕ್ಕಾಗಿ ಬಿಡುಗಡೆ ಮಾಡಿರುವ ಹಣ ಎಷ್ಟು ; ಯಾವ ಯಾವ ಗುತ್ತಿಗೆದಾರರಿಗೆ ಎಷ್ಟು ಬಿಲ್ ಪಾವತಿಸಲಾಗಿದೆ ; (ಲೆಕ್ಕ ಶೀರ್ಷಿಕೆವಾರು/ಜಿಲ್ಲಾವಾರು ಗುತ್ತಿಗೆದಾರರ ಹೆಸರು ಸಹಿತ ವಿವರ ನೀಡುವುದು)

(ಇ) ಬಾಕಿ ಇರುವ ಹಣವನ್ನು ಬಿಡುಗಡೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಹಣ ಬಿಡುಗಡೆ ಮಾಡುವಾಗ ಅನುಸರಿಸಿರುವ ಮಾನದಂಡವೇನು ?

## ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಆಯ್ಕೆಯಾಗಿರುವ ಫಲಾನುಭವಿಗಳ ಮಾಹಿತಿ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೦ (೧೬೩) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಯಾವ ಯಾವ ಯೋಜನೆಯಲ್ಲಿ ಎಷ್ಟು ಫಲಾನುಭವಿಗಳಿಗೆ ಸೌಲಭ್ಯಗಳನ್ನು ಒದಗಿಸಲಾಗಿದೆ ; (ವರ್ಷವಾರು ಮಾಹಿತಿ ಒದಗಿಸುವುದು)

(ಆ) ಪ್ರಸಕ್ತ ಸಾಲಿಗೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆಯೇ ; ಮಾಡಿದ್ದರೆ, ಯಾವ ದಿನಾಂಕದಿಂದ ಆಯ್ಕೆ ಸಮಿತಿ ಸಭೆ ನಡೆಸಲಾಗಿದೆ ; (ವಿವರ ಒದಗಿಸುವುದು)

(ಇ) ಪ್ರಸಕ್ತ ಸಾಲಿನಲ್ಲಿ ಆಯ್ಕೆ ಮಾಡಿರುವ ಫಲಾನುಭವಿಗಳಿಗೆ ಯಾವ ದಿನಾಂಕದಂದು ಸಹಾಯಧನ ಮಂಜೂರು ಮಾಡಲಾಗಿದೆ ? (ತಾಲ್ಲೂಕುವಾರು ವಿವರ ನೀಡುವುದು)

## ಕೋಲಾರ ನಗರದ ಹಾರೋಹಳ್ಳಿ ಬಳಿ ವಸತಿ ಬಡಾವಣೆಯ ಕಾಮಗಾರಿ ಪೂರ್ಣಗೊಳಿಸದಿರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೧ (೧೬೬) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಲಾರ ಜಿಲ್ಲೆ, ಕೋಲಾರ ನಗರದ ಹಾರೋಹಳ್ಳಿ ಬಡಾವಣೆಯಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ೨ನೇ ಹಂತದಲ್ಲಿ ವಸತಿ ಲೇಔಟ್ ನಿರ್ಮಾಣ ಮಾಡುತ್ತಿರುವುದು ನಿಜವೇ ; (ಪೂರ್ಣ ವಿವರಗಳನ್ನು ಒದಗಿಸುವುದು)

(ಆ) ಈ ವಸತಿ ಬಡಾವಣೆಯನ್ನು ಯಾವಾಗಿನಿಂದ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ ; ಪ್ರಸ್ತುತ ಇದು ಯಾವ ಹಂತದಲ್ಲಿದೆ ;

(ಇ) ಈ ಲೇಔಟ್‌ನ ಕಾಮಗಾರಿಗಳನ್ನು ಪ್ರಾರಂಭಿಸಿ ೪ ವರ್ಷಗಳು ಕಳೆದಿದ್ದರೂ, ಈವರೆಗೆ ಪೂರ್ಣಗೊಳಿಸದಿರುವುದರಿಂದ ಇದನ್ನು ಹೊಂದಿಕೊಂಡಂತೆಯಿರುವ ನಿವಾಸಿಗಳಿಗೆ ಬಹಳ ಕಷ್ಟಕರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಇದನ್ನು ಪೂರ್ಣಗೊಳಿಸಲಾಗುವುದು ;

(ಈ) ಸದರಿ ಬಡಾವಣೆ ನಿರ್ಮಾಣಕ್ಕೆ ಎಷ್ಟು ಅನುದಾನವನ್ನು ನಿಗದಿಪಡಿಸಲಾಗಿದೆ ; ಹಾಗೂ ಇದರ ಕಾಮಗಾರಿಯನ್ನು ಯಾವ ಸಂಸ್ಥೆಯ ಮೂಲಕ ಮಾಡಲಾಗುತ್ತಿದೆ ?

## ಸಾರಿಗೆ ಸಂಸ್ಥೆಯ ನೌಕರರಿಗೆ ವೇತನ ಪರಿಷ್ಕರಣೆಯಾಗದೆ ಇರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೨ (೧೬೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಶಕ್ತಿ ಯೋಜನೆ ಜಾರಿಯಾದ ದಿನದಿಂದ ಇಲ್ಲಿಯವರೆಗೂ ಸಾರಿಗೆ ಸಂಸ್ಥೆಗೆ ಸರ್ಕಾರ ನೀಡಬೇಕಾಗಿರುವ ಬಾಕಿ ಹಣವೆಷ್ಟು ;

(ಆ) ಪ್ರಸ್ತುತ ಸಾರಿಗೆ ಸಂಸ್ಥೆಯ ಆರ್ಥಿಕ ಪರಿಸ್ಥಿತಿ ಹೇಗಿದೆ ಹಾಗೂ ಸಾರಿಗೆ ಸಂಸ್ಥೆಯಿಂದ ಪಾವತಿಸಲಾಗುತ್ತಿರುವ ಮಾಸಿಕ ಬಡ್ಡಿ ಹಣವೆಷ್ಟು ;

(ಇ) ಸರ್ಕಾರದಿಂದ ಸರಿಯಾದ ಸಮಯಕ್ಕೆ ಸಂಸ್ಥೆಗೆ ಹಣ ಬಾರದೇ ಇರುವುದರಿಂದ ಸಾರಿಗೆ ಸಂಸ್ಥೆಯು ಆರ್ಥಿಕವಾಗಿ ಮತ್ತು ದಿನನಿತ್ಯದ ಕಾರ್ಯಚಟುವಟಿಕೆಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಸಾರಿಗೆ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ವೇತನ ಪರಿಷ್ಕರಣೆ ಯಾವ ವರ್ಷದಲ್ಲಿ ಆಗಬೇಕಿತ್ತು ಹಾಗೂ ವೇತನ ಪರಿಷ್ಕರಣೆ ಮಾಡಲಾಗಿದೆಯೇ ;

(ಉ) ನೌಕರರಿಗೆ ಬಹಳ ವರ್ಷಗಳಿಂದ ವೇತನ ಪರಿಷ್ಕರಣೆ ಮಾಡದೇ ಇರುವುದರಿಂದ ನೌಕರರು ಆರ್ಥಿಕ ಸಂಕಷ್ಟದಲ್ಲಿ ಸಿಲುಕಿ ಕಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ಕೋಲಾರ ಜಿಲ್ಲೆಯಲ್ಲಿ ರೈತರಿಗೆ ಮಂಜೂರಾಗಿರುವ ಜಮೀನುಗಳಿಗೆ ಪೋಡಿ ಮತ್ತು ದುರಸ್ಥಿ ಬಾಕಿಯಿರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೩ (೧೬೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಲಾರ ಜಿಲ್ಲೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಈವರೆಗೂ ರೈತರಿಗೆ ಮಂಜೂರಾಗಿರುವ ಜಮೀನುಗಳನ್ನು ಪೋಡಿ ಮಾಡಿ ದುರಸ್ಥಿಪಡಿಸಲು ಬಾಕಿಯಿರುವ ಪ್ರಕರಣಗಳೆಷ್ಟು ;

(ಆ) ಈ ರೀತಿ ಬಾಕಿಯಿರುವ ಪ್ರಕರಣಗಳ ಪೈಕಿ ರೈತರ ಬಳಿ ದೃಢೀಕೃತ ಮೂಲ ಮಂಜೂರಾತಿ ದಾಖಲೆಗಳಿದ್ದು ಇದರ ಮೂಲ ಮಂಜೂರಾತಿ ಕಡತಗಳು ತಾಲ್ಲೂಕು ಕಛೇರಿಗಳಲ್ಲಿ ಲಭ್ಯವಿಲ್ಲದೇ ರೈತರು ತಮ್ಮ ಜಮೀನುಗಳನ್ನು ಪೋಡಿ ಮಾಡಿಸಲಾಗದೇ ತೊಂದರೆಗಳನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಪ್ರಕರಣಗಳ ವಿವರಗಳನ್ನು ಒದಗಿಸುವುದು)

(ಇ) ಇಂತಹ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಿ. ರೈತರ ಹಿತರಕ್ಷಣೆಗೆ ಸರ್ಕಾರವು ಈವರೆಗೆ ತೆಗೆದುಕೊಂಡ ಕ್ರಮಗಳೇನು ;

(ಈ) ಇಂತಹ ಪ್ರಕರಣಗಳನ್ನು ಗೈರು ಕಡತಗಳ ವಿಲೇವಾರಿ ಸಮಿತಿಗೆ ಶಿಫಾರಸ್ಸು ಮಾಡಿ ಇತ್ಯರ್ಥಪಡಿಸದೆ ಬಾಕಿಯಿರುವ ಪ್ರಕರಣಗಳೆಷ್ಟು ; (ವಿವರಗಳನ್ನು ಒದಗಿಸುವುದು)

(ಉ) ಈ ರೀತಿ ಗೈರು ಕಡತಗಳ ವಿಲೇವಾರಿ ಸಮಿತಿಯಲ್ಲಿ ಇತ್ಯರ್ಥವಾಗದೇ ವಿನಾಕಾರಣ ರೈತರನ್ನು ಅಲೆದಾಡಿಸುತ್ತಿರುವ ಬಗ್ಗೆ ಸರ್ಕಾರದ ನಿಲುವೇನು ; ಯಾವ ಕಾಲಮಿತಿಯೊಳಗೆ ಇಂತಹ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗುವುದು ?

## ರಾಜ್ಯದ ಹೆದ್ದಾರಿಗಳಲ್ಲಿ ಕಟ್ಟಡ ನಿಯಂತ್ರಣ ರೇಖೆ ಗುರುತಿಸುವ ಬಗ್ಗೆ

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೪ (೧೭೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಯ ಇಕ್ಕೆಲಗಳಲ್ಲಿ ಕಟ್ಟಡ ನಿಯಂತ್ರಣ ರೇಖೆಯನ್ನು ಗುರುತಿಸುವ ಹೊಣೆಗಾರಿಕೆ ಯಾರದು ;

(ಆ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವ ಯಾವೆಲ್ಲಾ ರಸ್ತೆಗಳಿಗೆ ವ್ಯಾಪ್ತಿಯಲ್ಲಿ ಕಟ್ಟಡ ನಿಯಂತ್ರಣ ರೇಖೆಯನ್ನು ಗುರುತಿಸಲಾಗಿದೆ ; (ರಸ್ತೆ ಮತ್ತು ಅದರ ಚೈನೇಜ್ ಮಾಹಿತಿಯೊಂದಿಗೆ ವಿವರವನ್ನು ಒದಗಿಸುವುದು)

(ಇ) ಕಟ್ಟಡ ನಿಯಂತ್ರಣ ರೇಖೆಯನ್ನು ಗುರುತಿಸಿ ಕಲ್ಲಿನ ಕಂಬಗಳನ್ನು ಅಳವಡಿಸದ ಕಾರಣ ಅನಧಿಕೃತ ಕಟ್ಟಡಗಳನ್ನು ರಸ್ತೆಯ ಇಕ್ಕೆಲಗಳಲ್ಲಿ

ನಿರ್ಮಾಣವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕಟ್ಟಡ ನಿಯಂತ್ರಣ ರೇಖೆಯನ್ನು ಗುರುತಿಸಿ ಕಲ್ಲಿನ ಕಂಬಗಳನ್ನು ಅಳವಡಿಸದೆ ಅಕ್ರಮ ಕಟ್ಟಡಗಳ ನಿರ್ಮಾಣಕ್ಕೆ ಕಾರಣವಾಗಿರುವ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ ;

(ಈ) ಯಾವ ಕಾಲಮಿತಿಯಲ್ಲಿ ಕಟ್ಟಡ ನಿಯಂತ್ರಣ ರೇಖೆಯನ್ನು ಗುರುತಿಸಿ ಸ್ಥಳೀಯ ಆಡಳಿತಕ್ಕೆ ವರದಿ ನೀಡಲಾಗುವುದು ?

## ಜಮೀನು ಮಂಜೂರಾತಿ ಬಗ್ಗೆ

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೫ (೧೭೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯಿತಿಗಳು ವಿವಿಧ ಸಾರ್ವಜನಿಕ ಉದ್ದೇಶಕ್ಕಾಗಿ (ನಿವೇಶನ, ಸ್ಮಶಾನ, ಘನ ತ್ಯಾಜ ಘಟಕ, ಗ್ರಾಮ ಪಂಚಾಯತ್ ಕಚೇರಿ, ಸಾರ್ವಜನಿಕ ಕೆರೆ ಹಾಗೂ ಇತರೆ) ಜಮೀನು ಮಂಜೂರಾತಿ ಕೋರಿ ಕಂದಾಯ ಇಲಾಖೆಗೆ ಸಲ್ಲಿಸಲಾದ ಪ್ರಸ್ತಾವನೆಗಳ ಪೈಕಿ ಜಮೀನು ಮಂಜೂರಾತಿ ಗೊಳಿಸಲು ಬಾಕಿ ಇರುವ ಮತ್ತು ತಿರಸ್ಕರಿಸಿದ ಪ್ರಸ್ತಾವನೆಗಳು ಎಷ್ಟು; ಯಾವ ದಿನಾಂಕಗಳಂದು ಕಂದಾಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ; ಪ್ರಸ್ತಾವನೆಯ ಉದ್ದೇಶ ಮತ್ತು ಪ್ರಸ್ತಾವನೆಯನ್ನು ತಿರಸ್ಕಕರಿಸಲು ಕಾರಣವೇನು ; (ಗ್ರಾಮ ಪಂಚಾಯತ್ ವಾರು ವಿವರಣೆ ನೀಡುವುದು)

(ಆ) ಈಗಾಗಲೇ ವಿವಿಧ ಉದ್ದೇಶಗಳಿಗೆ ಗ್ರಾಮ ಪಂಚಾಯಿತಿಗಳಿಗೆ ಮಂಜೂರು ಮಾಡಿರುವ ಜಮೀನಿನ ಗಡಿಯನ್ನು ಗುರುತಿಸಿ ಬೇಲಿ ಅಳವಡಿಸಲಾಗಿದೆಯೇ ; ಗಡಿ ಗುರುತು ಆಗದಿದ್ದಲ್ಲಿ, ಕಾರಣಗಳೇನು ;

(ಇ) ಗ್ರಾಮ ಪಂಚಾಯಿತಿಗಳಿಗೆ ಸಾರ್ವಜನಿಕ ಉದ್ದೇಶಕ್ಕಾಗಿ ಮಂಜೂರಾದ ಜಮೀನು ಒತ್ತುವರಿ ಮಾಡಿಕೊಳ್ಳಲಾದ ಪ್ರಕರಣಗಳು ಕಂಡುಬಂದಿದೆಯೇ ? (ವಿವರ ನೀಡುವುದು)

(ಈ) ಒತ್ತುವರಿ ಕಂಡು ಬಂದಿದ್ದಲ್ಲಿ, ಸದರಿ ಒತ್ತುವರಿಯನ್ನು ತೆರವುಗೊಳಿಸಲು ಕರ್ನಾಟಕ ಭೂ ಕಬಳಿಕೆ ಪ್ರತಿಬಂಧಕ ಕಾಯ್ದೆ ಪ್ರಕಾರ ಕ್ರಮ ವಹಿಸಲಾಗಿದೆಯೇ ; ಗ್ರಾಮ ಪಂಚಾಯಿತಿಗಳಿಗೆ ಸಾರ್ವಜನಿಕ ಉದ್ದೇಶಕ್ಕೆ ಜಮೀನು ಮಂಜೂರಾತಿ ಮಾಡುವ ಪ್ರಾಧಿಕಾರ ಯಾವುದು ; ಅವರು ಎಷ್ಟು ವಿಸ್ತೀರ್ಣದವರೆಗೆ ಜಮೀನು ಮಂಜೂರಾತಿಗೊಳಿಸುವ ಅಧಿಕಾರ ಹೊಂದಿರುತ್ತಾರೆ ?

## ಸಾರ್ವಜನಿಕ ಉದ್ದೇಶಕ್ಕೆ ಭೂ ಮಂಜೂರಾತಿ ಕುರಿತು

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೬ (೧೭೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳು ವಿವಿಧ ಸಾರ್ವಜನಿಕ ಉದ್ದೇಶಕ್ಕೆ ಭೂ ಮಂಜೂರಾತಿ ಕೋರಿ ಸಲ್ಲಿಸುವ ಪ್ರಸ್ತಾವನೆಗಳನ್ನು ಯಾವ ಕಾಲಮಿತಿಯೊಳಗೆ ಭೂ ಮಂಜೂರಾತಿಗೊಳಿಸಲು ಕ್ರಮ ವಹಿಸಲಾಗುತ್ತಿದೆ ;

(ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಗ್ರಾಮೀಣ ಸ್ಥಳೀಯ ಸಂಸ್ಥೆಗಳು (ಗ್ರಾ.ಪಂ., ತಾ.ಪಂ., ಜಿ.ಪಂ.) ಮತ್ತು ನಗರ ಸ್ಥಳೀಯ ಸಂಸ್ಥೆಗಳು (ಪಟ್ಟಣ ಪಂಚಾಯತ್, ಪುರಸಭೆ, ನಗರಸಭೆ) ವಿವಿಧ ಸಾರ್ವಜನಿಕ ಉದ್ದೇಶಕ್ಕೆ ಜಮೀನು ಮಂಜೂರಾತಿ ಕೋರಿ ಸಲ್ಲಿಸಿದ ಪ್ರಸ್ತಾವನೆಗಳ ಪೈಕಿ ಜಮೀನು ಮಂಜೂರಾತಿಗೊಳಿಸಲು ಬಾಕಿ ಇರುವ ಮತ್ತು ತಿರಸ್ಕೃತ ಪ್ರಸ್ತಾವನೆಗಳು ಎಷ್ಟು ; (ಪ್ರಸ್ತಾವನೆ ನೀಡಿದ ದಿನಾಂಕ ಸಹಿತ ವಿವರ ನೀಡುವುದು)

(ಇ) ಸದರಿ ಸ್ಥಳೀಯ ಸಂಸ್ಥೆಗಳಿಗೆ ಈಗಾಗಲೇ ಮಂಜೂರಾದ ಜಮೀನನ್ನು ರದ್ದುಪಡಿಸಲಾದ ಪ್ರಕರಣಗಳು ಕಂಡು ಬಂದಿದೆಯೇ ;

(ಈ) ವಿವಿಧ ಸರಕಾರಿ ಕಚೇರಿಗಳಿಂದ ಭೂ ಮಂಜೂರಾತಿ ಕೋರಿ ಸಲ್ಲಿಸುವ ಪ್ರಸ್ತಾವನೆಗಳನ್ನು ಈಡೇರಿಸಲು ಸದರಿ ಅರ್ಜಿಗಳ ಸೂಕ್ತ ವಿಲೇವಾರಿಗೆ ಮೇಲುಸ್ತುವಾರಿ ಪ್ರಾಧಿಕಾರ ಯಾವುದು ;

(ಉ) ಸದರಿ ಜಿಲ್ಲೆಗಳಲ್ಲಿ ಸಾರ್ವಜನಿಕ ಉದ್ದೇಶಕ್ಕೆ ಲಭ್ಯವಿರುವ ಸರ್ಕಾರಿ ಜಮೀನುಗಳು ಎಷ್ಟು ? (ಸರ್ವೆ ನಂಬರ್ ಸಹಿತ ವಿಸ್ತೀರ್ಣದ ವಿವರ ನೀಡುವುದು)

## ರಾಜ್ಯದಲ್ಲಿ ಪೌತಿ ಖಾತೆ ಆಂದೋಲನ ಕುರಿತು

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೭ (೧೭೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇ ಪೌತಿ ಆಂದೋಲನದಡಿ ರಾಜ್ಯದಲ್ಲಿ ಎಷ್ಟು ವಾರಸುದಾರರಿಗೆ ಜಮೀನಿನ ಪೌತಿ ಖಾತೆಯನ್ನು ಮಾಡಿಕೊಡಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಪೋಡಿ ಮುಕ್ತ ಗ್ರಾಮ ಅಭಿಯಾನದಡಿ ಇತ್ತೀಚಿನ ಮೂರು ವರ್ಷಗಳಲ್ಲಿ ಎಷ್ಟು ಗ್ರಾಮಗಳ ಪೋಡಿ ಕಾರ್ಯವನ್ನು ಮುಕ್ತಾಯಗೊಳಿಸಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಭೂಮಿ ದರ್ಕಾಸ್ತು ಪೋಡಿ ಕಾರ್ಯಕ್ರಮದಡಿ ರಾಜ್ಯದಲ್ಲಿ ಎಷ್ಟು ಫಲಾನುಭವಿಗಳ ಜಮೀನುಗಳನ್ನು ಪೋಡಿ ಮಾಡಿಕೊಡಲಾಗಿದೆ ; (ತಾಲೂಕುವಾರು ಮಾಹಿತಿ ನೀಡುವುದು)

(ಈ) ಇತ್ತೀಚಿನ ಮೂರು ವರ್ಷಗಳಿಂದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಸರ್ಕಾರಿ ಜಮೀನು ಮಂಜೂರಾತಿ ಕೋರಿ ನಮೂನೆ ೫೦.೫೩ ಮತ್ತು ೫೭ರಡಿ ಅರ್ಜಿ ಸಲ್ಲಿಸಿದ ಎಷ್ಟು ಫಲಾನುಭವಿಗಳಿಗೆ ಜಮೀನು ಮಂಜೂರಾತಿಗೊಳಿಸಲಾಗಿದೆ ; ತಿರಸ್ಕೃತ ಮತ್ತು ಬಾಕಿ ಅರ್ಜಿಗಳ ಸಂಖ್ಯೆ ಎಷ್ಟು ; (ತಾಲೂಕುವಾರು ಮಾಹಿತಿ ನೀಡುವುದು)

(ಉ) ಅಕ್ರಮ ಸಕ್ರಮದಡಿ ಮಂಜೂರಾದ ಜಮೀನುಗಳನ್ನು ಷರತ್ತಿನ ಉಲ್ಲಂಘನೆಗಾಗಿ ಹಾಗೂ ಇತರ ಕಾರಣಗಳಿಗಾಗಿ ಭೂ ಮಂಜೂರಾತಿ ಆದೇಶವನ್ನು ರದ್ದುಪಡಿಸುವ ಪ್ರಾಧಿಕಾರ ಯಾವುದು ?

## ಸಿಂಧನೂರು ತಾಲ್ಲೂಕಿನಲ್ಲಿ ಸುಪ್ರಸಿದ್ಧ ಅಂಬಾದೇವಿ ಅಂಬಾಮಠಕ್ಕೆ ಸರ್ಕಾರದಿಂದ ಮಂಜೂರಾಗಿರುವ ಅನುದಾನದ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು):–**

೧೫೮ (೧೭೬) ಮಾನ್ಯ ಸಾರಿಗೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಿಂಧನೂರು ತಾಲ್ಲೂಕಿನ ಪ್ರಸಿದ್ಧ ಅಂಬಾದೇವಿ ಮಠದ ಅಭಿವೃದ್ಧಿಗೆ ಹೊಸ ಕಟ್ಟಡ ನಿರ್ಮಾಣ ಸೇರಿದಂತೆ ಸರ್ಕಾರದಿಂದ ಈಗಾಗಲೇ ಎಷ್ಟು ಹಣ ಮಂಜೂರಾಗಿದೆ ;

(ಆ) ಕಳೆದ ೫೦ ವರ್ಷಗಳಲ್ಲಿ ಸದರಿ ದೇವಸ್ಥಾನಕ್ಕೆ ಬಂದಿರುವ ಆದಾಯವೆಷ್ಟು ;

(ಇ) ಸದರಿ ಆದಾಯವನ್ನು ಯಾವ ಕಾರ್ಯಗಳಿಗಾಗಿ ವಿನಿಯೋಗ ಮಾಡಲಾಗಿದೆ ; (ಪೂರ್ಣ ವಿವರ ನೀಡುವುದು)

(ಈ) ಸದರಿ ದೇವಸ್ಥಾನದಲ್ಲಿ ತೆಂಗಿನ ಕಾಯಿ, ಪ್ರಸಾದ ವಿನಿಯೋಗ, ಲೈಟಿಂಗ್ ಸೇರಿದಂತೆ ಇನ್ನಿತರೆ ಅಂಗಡಿ ಮುಂಗಟ್ಟುಗಳಿಗೆ ಟೆಂಡರ್ ಕರೆಯಲಾಗಿದೆಯೇ ? (ಸಂಪೂರ್ಣ ವಿವರವನ್ನು ನೀಡುವುದು)

## ರಾಷ್ಟ್ರೀಯ ಹೆದ್ದಾರಿ '150ಎ' ರಲ್ಲಿ ಸಿಂಧನೂರು ಹಳ್ಳಕ್ಕೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆ ಕಾಮಗಾರಿ ಕಳಪೆಯಿಂದ ಕೂಡಿರುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೯ (೧೭೭) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಷ್ಟ್ರೀಯ ಹೆದ್ದಾರಿ '೧೫೦ಎ' ರಲ್ಲಿ ಸಿಂಧನೂರು ಹಳ್ಳಕ್ಕೆ ಅಡ್ಡಲಾಗಿ ನಿರ್ಮಿಸಲಾಗಿರುವ ಸೇತುವೆಯ ಕಾಮಗಾರಿಯು ಕಳಪೆಯಿಂದ ಕೂಡಿರುವ ಬಗ್ಗೆ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ತೆರಳಿ ಪರಿಶೀಲಿಸಲಾಗಿದ್ದು, ಅಧಿಕಾರಿಗಳು ಈ ಸಂಬಂಧ ನೀಡಿರುವ ವರದಿಯಲ್ಲಿ ಯಾವ ಅಂಶಗಳು ಒಳಗೊಂಡಿವೆ ;

(ಆ) ಯಾವ ಕಾಲಮಿತಿಯೊಳಗೆ ಸದರಿ ಕಾಮಗಾರಿಯ ನ್ಯೂನ್ಯತೆಗಳನ್ನು ಸರಿಪಡಿಸಲು ಇಲಾಖೆಯಿಂದ ಕ್ರಮವಹಿಸಲಾಗುತ್ತದೆ ;

(ಇ) ಈ ರೀತಿ ಕಳಪೆ ಕಾಮಗಾರಿಯನ್ನು ಕೈಗೊಂಡಿರುವ ಗುತ್ತಿಗೆದಾರರ ವಿರುದ್ಧ ಯಾವ ಕ್ರಮವಹಿಸಲಾಗುತ್ತದೆ ?

## ಸಿಂಧನೂರು ತಾಲ್ಲೂಕಿನಲ್ಲಿ ಸಾರ್ವಜನಿಕರಿಂದ ಸರ್ಕಾರದ ಭೂಮಿ ಒತ್ತುವರಿಯಾಗಿರುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು):–**

೧೬೦ (೧೭೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಿಂಧನೂರು ತಾಲ್ಲೂಕಿನಲ್ಲಿ ಎಷ್ಟು ಎಕರೆ ಸರ್ಕಾರಿ ಭೂಮಿಯು ಸಾರ್ವಜನಿಕರಿಂದ ಒತ್ತುವರಿಯಾಗಿದೆ ಹಾಗೂ ಎಲ್ಲೆಲ್ಲಿ ಒತ್ತುವರಿಯಾಗಿದೆ ; (ಪೂರ್ಣ ವಿವರ ನೀಡುವುದು)

(ಆ) ಸದರಿ ಒತ್ತುವರಿಯಲ್ಲಿ ಪ್ರಸ್ತುತ ಎಷ್ಟು ಪ್ರಮಾಣದ ಒತ್ತುವರಿಯನ್ನು ಈಗಾಗಲೇ ತೆರವುಗೊಳಿಸಲಾಗಿದೆ ;

(ಇ) ಒತ್ತುವರಿಯನ್ನು ತೆರವುಗೊಳಿಸಲು ಬಾಕಿಯಿರುವ ಪ್ರಮಾಣವೆಷ್ಟು ;

(ಈ) ಈ ರೀತಿ ಅಕ್ರಮವಾಗಿ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವ ಅಕ್ರಮ ಒತ್ತುವರಿದಾರರ ವಿರುದ್ಧ ಸರ್ಕಾರದಿಂದ ಕೈಗೊಳ್ಳಲಾಗುವ ಕ್ರಮಗಳೇನು ?

## ಕಂದಾಯ ಗ್ರಾಮದ ವ್ಯಾಪ್ತಿಗೆ ಒಳಪಡದ ಗ್ರಾಮ/ಕ್ಯಾಂಪ್‌ಗಳ ಕುರಿತು

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು):–**

೧೬೧ (೧೭೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪ್ರಸ್ತುತ ಸಿಂಧನೂರು ತಾಲ್ಲೂಕಿನಲ್ಲಿ ಕಂದಾಯ ಗ್ರಾಮದ ವ್ಯಾಪ್ತಿಗೆ ಒಳಪಡದ ಗ್ರಾಮ/ಕ್ಯಾಂಪ್‌ಗಳ ಸಂಖ್ಯೆ ಎಷ್ಟು ಹಾಗೂ ಯಾವುವು ; (ವಿವರ ನೀಡುವುದು)

(ಆ) ಸದರಿ ಗ್ರಾಮ/ಕ್ಯಾಂಪ್‌ಗಳನ್ನು ಕಂದಾಯ ಗ್ರಾಮವನ್ನಾಗಿ ಘೋಷಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ;

(ಇ) ಇದ್ದಲ್ಲಿ, ಪ್ರಸ್ತುತ ಯಾವ ಹಂತದಲ್ಲಿದೆ ?

## ಧಾರ್ಮಿಕ ಹಾಗೂ ಧರ್ಮದಾಯ ದತ್ತಿಗಳ ಇಲಾಖೆಯ ಯೋಜನೆಗಳ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೧೬೨ (೧೮೩) ಮಾನ್ಯ ಸಾರಿಗೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಧಾರ್ಮಿಕ ಹಾಗೂ ಧರ್ಮದಾಯ ದತ್ತಿಗಳ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ಯಾವ ಯಾವ ಹೊಸ ಯೋಜನೆಗಳನ್ನು ಜಾರಿಗೊಳಿಸಿದೆ ;

(ಆ) ರಾಜ್ಯ ಸರ್ಕಾರ ವಾರ್ಷಿಕ ತಸ್ತಿಕ ಮೂಲಕ ಒಟ್ಟು ಎಷ್ಟು ಹಣವನ್ನು ನೀಡುತ್ತಿದೆ; ರಾಜ್ಯದಲ್ಲಿ ಒಟ್ಟು ಎಷ್ಟು ದೇವಾಲಯಗಳು ತಸ್ತಿಕ ಹಣವನ್ನು ಪಡೆಯುತ್ತಿವೆ ;

(ಇ) ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ದುರಸ್ತಿ, ಜೀರ್ಣೋದ್ಧಾರ ಮತ್ತು ನಿರ್ವಹಣೆಗೆ ಎಷ್ಟು ಅನುದಾನಗಳನ್ನು ನೀಡಿರುತ್ತದೆ ;

(ಉ) ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ಕೈಲಾಸ ಮಾನಸ ಸರೋವರ ಯಾತ್ರಿಕರಿಗೆ, ಚಾರ್ ಧಾಮ್ ಯಾತ್ರಿಕರಿಗೆ ಎಷ್ಟು ಸಹಾಯಧನ ನೀಡಿರುತ್ತದೆ ; ಒಟ್ಟು ಎಷ್ಟು ಮಂದಿ ಯಾತ್ರಿಕರು ಇದರ ಪ್ರಯೋಜನ ಪಡೆದುಕೊಂಡಿರುತ್ತಾರೆ ;

(ಊ) ಕಡಿಮೆ ಆದಾಯವಿರುವ ಎಷ್ಟು ಮುಜರಾಯಿ ದೇವಸ್ಥಾನಗಳಿಗೆ ದೈನಂದಿನ ಪೂಜಾ ಕಾರ್ಯಕ್ರಮಗಳಿಗೆ ಸರ್ಕಾರ ವಾರ್ಷಿಕವಾಗಿ ಎಷ್ಟು ಸಹಾಯಧನ ನೀಡುತ್ತಿದೆ ; ಇದನ್ನು ಹೆಚ್ಚಿಸುವ ಉದ್ದೇಶ ಸರ್ಕಾರದ ಮುಂದೆ ಇದೆಯೇ ?

## ಚಿಕ್ಕನಾಯಕನ ಹಳ್ಳಿ ತಾಲೂಕಿನಲ್ಲಿ ಭೂ ನ್ಯಾಯ ಮಂಡಳಿ ರಚನೆ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೧೬೩ (೧೮೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಭೂಸುಧಾರಣೆ ಕಾಯಿದೆ ಅಡಿಯಲ್ಲಿ ಭೂ ನ್ಯಾಯ ಮಂಡಳಿಯನ್ನು ರಚಿಸಲಾಗಿದೆಯೇ ; ರಚಿಸಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಎಷ್ಟು ಸಭೆಗಳನ್ನು ಮಾಡಲಾಗಿದೆ ಮತ್ತು ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ; (ಪೂರ್ಣ ಮಾಹಿತಿಯನ್ನು ಒದಗಿಸುವುದು)

(ಆ) ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಫಾರಂ–೫೦ ಮತ್ತು ಫಾರಂ ೫೩ ಅಡಿಯಲ್ಲಿ ಇಲ್ಲಿಯವರೆಗೆ ಎಷ್ಟು ಅರ್ಜಿದಾರರಿಗೆ ಭೂ ಮಂಜೂರಾತಿ ಆಗಿರುತ್ತದೆ ; ಬಾಕಿ ಇರುವ ಅರ್ಜಿಗಳೆಷ್ಟು: ಕಳೆದ ಮೂರು ವರ್ಷಗಳಲ್ಲಿ ಈ ಸಂಬಂಧ ಎಷ್ಟು ಸಭೆಗಳನ್ನು ನಡೆಸಲಾಗಿರುತ್ತದೆ ; (ಅರ್ಜಿದಾರರ ವಿವರಗಳ ಸಮೇತ ಪೂರ್ಣ ವಿವರಗಳನ್ನು ಒದಗಿಸುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ಸಾಗುವಳಿ ಚೀಟಿ ಕೋರಿ ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಎಷ್ಟು ಅರ್ಜಿಗಳು ಸಲ್ಲಿಕೆ ಆಗಿರುತ್ತದೆ ಇವುಗಳಲ್ಲಿ ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿರುತ್ತದೆ ಬಾಕಿ ಇರುವ ಅರ್ಜಿಗಳು ಸಂಖ್ಯೆ ಎಷ್ಟು; (ಪೂರ್ಣ ವಿವರಗಳನ್ನು ಒದಗಿಸುವುದು)

(ಈ) ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಆಶ್ರಯ ಸಮಿತಿಯು ಮೂರು ವರ್ಷಗಳಲ್ಲಿ ಎಷ್ಟು ಸಭೆಗಳನ್ನು ನಡೆಸಲಾಗಿರುತ್ತದೆ ; ಎಷ್ಟು ಮಂದಿ ಫಲಾನುಭವಿಗಳಿಗೆ ಆಶ್ರಯ ಯೋಜನೆಯ ಅಡಿಯಲ್ಲಿ ಮಂಜೂರಾತಿ ನೀಡಲಾಗಿರುತ್ತದೆ ? (ಪೂರ್ಣ ವಿವರಗಳನ್ನು ಒದಗಿಸುವುದು)

## ಪಶುಸಂಗೋಪನಾ ಇಲಾಖೆಯ ಮಾಹಿತಿ ಬಗ್ಗೆ

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೧೬೪ (೧೮೭) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ಪಶು ಭಾಗ್ಯ ಯೋಜನೆಯಲ್ಲಿ ತುಮಕೂರು ಜಿಲ್ಲೆಯಲ್ಲಿ ಎಷ್ಟು ರೈತರಿಗೆ/ಫಲಾನುಭವಿಗಳಿಗೆ ಹಸು, ಕುರಿ, ಮೇಕೆ, ಕೋಳಿ ಸಾಕಾಣಿಕೆಗೆ ಅನುದಾನ/ಸಹಾಯಧನ ನೀಡಲಾಗಿರುತ್ತದೆ ; (ತಾಲ್ಲೂಕುವಾರು ಫಲಾನುಭವಿಗಳ ವಿವರಗಳನ್ನು ಒದಗಿಸುವುದು)

(ಆ) ಈ ತಾಲ್ಲೂಕಿನಲ್ಲಿ ಪಶು ಸಂಗೋಪನಾ ಇಲಾಖೆಯು ಫಲಾನುಭವಿಗಳ ಆಯ್ಕೆಗೆ ಸಮಿತಿಯನ್ನು ರಚಿಸಲಾಗಿದೆಯೇ ; ರಚಿಸಿದ್ದಲ್ಲಿ, ೨ ವರ್ಷದ ಸಮಿತಿಯ ಸಭೆಯ ವಿವರ ನೀಡುವುದು ;

(ಇ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಪಶುಸಂಗೋಪನಾ ಇಲಾಖೆಯು ಕಳೆದ ೩ ವರ್ಷಗಳಲ್ಲಿ ನಡೆಸಿರುವ ಚುಚ್ಚುಮದ್ದು ವಿವರ ಉಚಿತ ಚಿಕಿತ್ಸೆಯ ವಿವರ, ಜಾಗೃತಿ ಕಾರ್ಯಕ್ರಮಗಳ ವಿವರ ಒದಗಿಸುವುದು ;

(ಈ) ಕಳೆದ ೩ ವರ್ಷಗಳಲ್ಲಿ ಸದರಿ ತಾಲ್ಲೂಕಿನಲ್ಲಿ ಕೆಸಿಸಿ ಮುಖಾಂತರ ನೀಡಿರುವ ಸಾಲಬಡ್ಡಿ ಸಹಾಯಧನ ಮತ್ತು ವಿತರಿಸಿರುವ ಪಶು ವಿಮೆ ಎಷ್ಟು ; (ಫಲಾನುಭವಿಗಳ ವಿವರ ನೀಡುವುದು)

(ಉ) ಕಳೆದ ಮೂರು ವರ್ಷಗಳಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಹೈನುಗಾರಿಕೆ ಯೋಜನೆ ಅಡಿಯಲ್ಲಿ ಎಷ್ಟು ಮಹಿಳೆಯರಿಗೆ ಸಹಾಯಧನ ನೀಡಲಾಗಿದೆ ? (ಫಲಾನುಭವಿಗಳ ವಿವರಗಳನ್ನು ಒದಗಿಸುವುದು)

## ವಸತಿ ಇಲಾಖೆಯಿಂದ ಮಾಹಿತಿ ನೀಡುವ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೧೬೫ (೧೮೮) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಗೃಹ ಮಂಡಳಿಯು ಇಲ್ಲಿಯವರಿಗೆ ಎಷ್ಟು ನಾಗರೀಕ ನಿವೇಶನಗಳನ್ನು ಸರ್ಕಾರಕ್ಕೆ/ಸಂಘ ಸಂಸ್ಥೆಗಳಿಗೆ/ಅರೆಸರ್ಕಾರಿ ಸಂಸ್ಥೆಗಳಿಗೆ ಹಂಚಿಕೆ ಮಾಡಿರುತ್ತದೆ ; (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು)

(ಆ) ಕರ್ನಾಟಕ ಗೃಹ ಮಂಡಳಿಯಲ್ಲಿ ಎಷ್ಟು ನಾಗರೀಕ ನಿವೇಶನಗಳು ಹಂಚಿಕೆಗೆ ಲಭ್ಯವಿರುತ್ತದೆ ; (ನಾಗರೀಕ ನಿವೇಶನಗಳ ವಿವರಗಳನ್ನು ಒದಗಿಸುವುದು)

(ಇ) ರಾಜ್ಯ ಸರ್ಕಾರದ ಪರಿಷ್ಕೃತ ನೀತಿಗೆ ಅನುಗುಣವಾಗಿ ಶಿಕ್ಷಣ ಸಂಸ್ಥೆಗಳು ಶಾಲಾ/ಕಾಲೇಜು ಪ್ರಾರಂಭಿಸಲು ಕನಿಷ್ಠ ಎರಡು ಎಕರೆ ನಿವೇಶನ ಹೊಂದಿರಬೇಕು ಎಂಬ ನಿಯಮ ಕೆ.ಹೆಚ್.ಬಿ ಗಮನಕ್ಕೆ ಬಂದಿರುತ್ತದೆಯೇ ;

(ಈ) ಕೆ.ಹೆಚ್.ಬಿ ಯಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಹಂಚಿಕೆ ಮಾಡುವ ನಿವೇಶನ ಕನಿಷ್ಠ ಎರಡು ಎಕರೆಗೆ ನಿಗದಿಪಡಿಸಿ ಆದೇಶ ಮಾಡಲಾಗಿದೆಯೇ ; ಮಾಡದೆ ಇದ್ದಲ್ಲಿ, ಯಾವಾಗ ಹಂಚಿಕೆ ನಿಯಮಕ್ಕೆ ತಿದ್ದುಪಡಿ ಮಾಡಲಾಗುವುದು ;

(ಉ) ನಾಗರೀಕ ನಿವೇಶನ ಹಂಚಿಕೆಯಲ್ಲಿ ಕೆ.ಹೆಚ್.ಬಿ ನಿಗದಿಗೊಳಿಸಿರುವ ದರವೆಷ್ಟು ; ಸರ್ಕಾರದ ಮಾರ್ಗಸೂಚಿ ದರದ ಶೇ.೨೫%ಕ್ಕಿಂತ ನಾಗರೀಕ ನಿವೇಶನದ ದರ ಕಡಿಮೆಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

## ಲೋಕೋಪಯೋಗಿ ಇಲಾಖೆಯ ರಸ್ತೆ ಅಭಿವೃದ್ಧಿ ಮಾಹಿತಿ ಕೋರಿ

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೧೬೬ (೧೮೯) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆ ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮ ನಿಯಮಿತ ವತಿಯಿಂದ ೨೫೦ ಕೋಟಿ ರೂಪಾಯಿಗಳ ರಸ್ತೆ ಕಾಮಗಾರಿಯನ್ನು ಕೈಗೊಳ್ಳಲಾಗಿದೆಯೇ ; ಕೈಗೊಂಡಿದ್ದಲ್ಲಿ, ಡಿಪಿಆರ್, ಟೆಂಡರ್ ಕಾಮಗಾರಿ, ಗುತ್ತಿಗೆ ಕರಾರು ವಿವರಗಳನ್ನು ಒದಗಿಸುವುದು ;

(ಆ) ತುಮಕೂರು ಜಿಲ್ಲೆಯಲ್ಲಿ ಎಷ್ಟು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳು ನಡೆಯುತ್ತಿವೆ ; ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಕೈಗೊಳ್ಳುವ ಮುನ್ನ ಭೂಸ್ವಾಧೀನ ಆಗಿರುವ ಎಲ್ಲಾ ಭೂಮಾಲೀಕರಿಗೆ ಪರಿಹಾರ ನೀಡಲಾಗಿದೆಯೇ ; ಭೂ ಪರಿಹಾರಕ್ಕೆ ಬಾಕಿ ಇರುವ ಪ್ರಕರಣಗಳು ಎಷ್ಟು ;

(ಇ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆ ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮದ ವತಿಯಿಂದ ಕೈಗೊಂಡಿರುವ ಒಟ್ಟು ರಸ್ತೆ ಕಾಮಗಾರಿಗಳು ಎಷ್ಟು ; (ಕಾಮಗಾರಿಗಳ ಪೂರ್ಣ ವಿವರಗಳನ್ನು ಒದಗಿಸುವುದು)

(ಈ) ಈ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ಇದುವರೆಗೂ ಅನುಮೋದನೆಗೊಂಡಿರುವ ಕಾಮಗಾರಿಗಳು ಎಷ್ಟು ; ಇದರಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳು ಎಷ್ಟು ; ಬಾಕಿ ಇರುವ ಕಾಮಗಾರಿಗಳು ಎಷ್ಟು ? (ಪೂರ್ಣ ವಿವರಗಳನ್ನು ಒದಗಿಸುವುದು)

## ರಾಜೀವ್ ಗಾಂಧಿ ವಸತಿ ಯೋಜನೆಯಡಿಯಲ್ಲಿ ಹಲವಾರು ವರ್ಷಗಳಿಂದ ಅರ್ಜಿ ಸಲ್ಲಿಸಿ ಕಾಯುತ್ತಿರುವ ಬಡವರಿಗೆ ಮನೆ ಮಂಜೂರಾತಿ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೬೭ (೧೮೫) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರಿನ ಕೋಗಿಲು ಲೇಔಟ್ (Kogilu Layout) ನಿವಾಸಿಗಳಿಗೆ ಹಾಗೂ ಅ ಸ್ಥಳೀಯರಿಗೆ ಮನೆಗಳನ್ನು ಒದಗಿಸುವ ಕುರಿತು ಸರ್ಕಾರವು ತಕ್ಷಣವೇ ಭರವಸೆ ನೀಡಿ, ಮನೆಗಳ ಮಂಜೂರಾತಿಗೆ ಅನುಮೋದನೆ ನೀಡಿರುವುದು ನಿಜವೇ ; ಹಾಗಿದ್ದಲ್ಲಿ, ಈ ಕುರಿತು ಕೈಗೊಂಡಿರುವ ನಿರ್ಧಾರದ ಸಂಪೂರ್ಣ ವಿವರಗಳನ್ನು ನೀಡುವುದು ;

(ಆ) ಶಿವಮೊಗ್ಗ ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 'ರಾಜೀವ್ ಗಾಂಧಿ ವಸತಿ ಯೋಜನೆ'ಯಡಿ ಕಳೆದ ಹಲವಾರು ವರ್ಷಗಳಿಂದ

ಅರ್ಜಿ ಸಲ್ಲಿಸಿ ಕಾಯುತ್ತಿರುವ ಬಡವರಿಗೆ ಹಾಗೂ ಪ್ರವಾಹ ಪೀಡಿತರಿಗೆ ಮನೆಗಳು ಇನ್ನೂ ಹಂಚಿಕೆಯಾಗದೆ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ವರ್ಷಗಳಿಂದ ವಸತಿ ಸೌಲಭ್ಯಕ್ಕಾಗಿ ಕಾಯುತ್ತಿರುವ ಗ್ರಾಮೀಣ ಭಾಗದ ಬಡವರನ್ನು ಹಾಗೂ ಪ್ರವಾಹ ಸಂತ್ರಸ್ತರನ್ನು ಕಡೆಗಣಿಸಿ, ಕೇವಲ ಕೋಗಿಲು ಲೇಔಟ್ ವಿಷಯಕ್ಕೆ ಮಾತ್ರ ವಿಶೇಷ ಆದ್ಯತೆ ನೀಡಿ ತಕ್ಷಣೇ ಸ್ಪಂದಿಸಲು ಇರುವ ಬಲವಾದ ಕಾರಣಗಳೇನು ;

(ಈ) ಕೋಗಿಲು ಲೇಔಟ್‌ಗೆ ಸಂಬಂಧಿಸಿದಂತೆ ತೆಗೆದುಕೊಂಡಿರುವ ಈ ನಿರ್ಧಾರವು ಕೇವಲ ರಾಜಕೀಯ ಒತ್ತಡ ಅಥವಾ ಒಂದು ನಿರ್ದಿಷ್ಟ ವರ್ಗಕ್ಕೆ ಲಾಭ ಮಾಡಿಕೊಡುವ ಏಕಪಕ್ಷೀಯ ತೀರ್ಮಾನವಲವೇ ; ಇದರಿಂದ ರಾಜ್ಯದ ಇತರ ಭಾಗದ ಅರ್ಹ ಫಲಾನುಭವಿಗಳಿಗೆ ಅನ್ಯಾಯಾವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಸರ್ಕಾರವು ಕೇವಲ ಒಂದು ಪ್ರದೇಶಕ್ಕೆ ಸೀಮಿತವಾಗಿ ವಸತಿ ಯೋಜನೆಗಳನ್ನು ಘೋಷಿಸುತ್ತಿರುವುದು ಸಮಾನತೆ ಮತ್ತು ಸಾಮಾಜಿಕ ನ್ಯಾಯದ ತತ್ವಗಳಿಗೆ ವಿರುದ್ಧವಾಗಿಲ್ಲವೇ ; ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳ ಬಡವರಿಗೂ ಸಮಾನವಾಗಿ ವಸತಿ ಸೌಲಭ್ಯ ಒದಗಿಸಲು ಸರ್ಕಾರದ ಬಳಿ ಇರುವ ಕಾಲಮಿತಿ ಯೋಜನೆ ಯಾವುದು ?

## ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ವಸತಿ ಯೋಜನೆ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೬೮ (೧೯೦) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ವಿವಿಧ ವಸತಿ ಯೋಜನೆಗಳಡಿ (ಬಸವ ವಸತಿ, ಡಾ: ಬಿ.ಆರ್. ಅಂಬೇಡ್ಕರ್ ನಿವಾಸ ಯೋಜನೆ) ಮಂಜೂರಾದ ಒಟ್ಟು ಮನೆಗಳ ಸಂಖ್ಯೆ ಎಷ್ಟು ; (ತಾಲ್ಲುಕುವಾರು ವಿವರ ನೀಡುವುದು)

(ಆ) ಮಂಜೂರಾದ ಮನೆಗಳಲ್ಲಿ ಎಷ್ಟು ಮನೆಗಳು ಪೂರ್ಣಗೊಂಡಿವೆ ಮತ್ತು ಎಷ್ಟು ಮನೆಗಳು ವಿವಿಧ ಹಂತಗಳಲ್ಲಿ ಬಾಕಿ ಇವೆ; ವಿಳಂಬಕ್ಕೆ ಕಾರಣಗಳೇನು ;

(ಇ) ಜಿಪಿಎಸ್ ಫೋಟೋ ಅಪ್‌ಲೋಡ್ ಆದರೂ ಹಣ ಬಿಡುಗಡೆಯಾಗದ ಪ್ರಕರಣಗಳೆಷ್ಟು, ಈ ಬಾಕಿ ಮೊತ್ತವನ್ನು ಯಾವಾಗ ಪಾವತಿಸಲಾಗುವುದು ?

## ಮೈಸೂರು ಮತ್ತು ಚಾಮರಾಜನಗರಗಳಲ್ಲಿನ ಸಾರಿಗೆ ವ್ಯವಸ್ಥೆ ಬಗ್ಗೆ

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೬೯ (೧೯೧) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ನಗರದ ಸಾಂಸ್ಕೃತಿಕ ಪರಂಪರೆ ಮತ್ತು ಪ್ರವಾಸೋದ್ಯಮವನ್ನು ಗಮನದಲ್ಲಿಟ್ಟುಕೊಂಡು, ನಗರದ ಸಾರಿಗೆ ದಟ್ಟಣೆ ಕಡಿಮೆ ಮಾಡಲು ಜಾರಿಗೆ ತರಲು ಉದ್ದೇಶಿಸಿರುವ 'ಪಾರಂಪರಿಕ ಸಾರಿಗೆ ವ್ಯವಸ್ಥೆ' ಅಥವಾ ಎಲೆಕ್ಟ್ರಿಕ್ ಬಸ್‌ಗಳ ವಿಸ್ತರಣೆಯ ಪ್ರಸ್ತುತ ಹಂತವೇನು ;

(ಆ) 'ಶಕ್ತಿ' ಯೋಜನೆಯಡಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಮಹಿಳಾ ಪ್ರಯಾಣಿಕರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದ್ದು, ಇದಕ್ಕೆ ಪೂರಕವಾಗಿ ಹಳೆಯ ಬಸ್‌ಗಳ ಬದಲಿಗೆ ಹೊಸ ಬಸ್‌ಗಳನ್ನು ಮಂಜೂರು ಮಾಡಲು ಸರ್ಕಾರ ಕಾಲಮಿತಿಯನ್ನು ನಿಗದಿಪಡಿಸಿದೆಯೇ ;

(ಇ) ಚಾಮರಾಜನಗರ ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಸಾರಿಗೆ ಸಂಸ್ಥೆಯ ಬಸ್‌ಗಳ ಕೊರತೆಯಿಂದ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಈ ಜಿಲ್ಲೆಗಳಿಗೆ ಎಷ್ಟು ಹೊಸ ಬಸ್‌ಗಳನ್ನು ಮಂಜೂರು ಮಾಡಲು ಉದ್ದೇಶಿಸಲಾಗಿದೆ ?

## ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಕೈಗೊಳ್ಳಲಾದ ಕಾಮಗಾರಿಗಳು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೦ (೧೯೨) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರಿನ ಚಾಮುಂಡಿ ಬೆಟ್ಟದ ಅಭಿವೃದ್ಧಿಗಾಗಿ ರಚಿಸಲಾಗಿರುವ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಕೈಗೊಳ್ಳಲಾದ ಕಾಮಗಾರಿಗಳ ಪ್ರಗತಿ ಎಷ್ಟು ;

(ಆ) ಪರಿಸರ ಸಂರಕ್ಷಣೆ ಮತ್ತು ಮೂಲಸೌಕರ್ಯಗಳ ನಡುವೆ ಸಮತೋಲನ ಕಾಯ್ದುಕೊಳ್ಳಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸ್ಮಶಾನ ಭೂಮಿ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೧ (೧೯೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸ್ವಂತ ಸ್ಮಶಾನ ಭೂಮಿ ಇಲ್ಲದ ಗ್ರಾಮಗಳ ಸಂಖ್ಯೆ ಎಷ್ಟು ;

(ಆ) ಕಳೆದ ಎರಡು ವರ್ಷಗಳಲ್ಲಿ ಸ್ಮಶಾನಕ್ಕಾಗಿ ಎಷ್ಟು ಎಕರೆ ಭೂಮಿಯನ್ನು ಕಂದಾಯ ಇಲಾಖೆ ಗುರುತಿಸಿದೆ ಮತ್ತು ಹಸ್ತಾಂತರಿಸಿದೆ ?

## ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿನ ನಿವೇಶನ ರಹಿತರ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೨ (೧೯೪) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ವಸತಿ ರಹಿತರ ಸಂಖ್ಯೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಜಿಲ್ಲೆಗಳಲ್ಲಿ ನಿವೇಶನ ಹಂಚಿಕೆಗಾಗಿ ಎಷ್ಟು ಎಕರೆ ಸರ್ಕಾರಿ ಭೂಮಿಯನ್ನು ಗುರುತಿಸಲಾಗಿದೆ ; ಸರ್ಕಾರಿ ಭೂಮಿ ಲಭ್ಯವಿಲ್ಲದ ಕಡೆ ಖಾಸಗಿ ಜಮೀನು ಖರೀದಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಸಬ್–ರಿಜಿಸ್ಟ್ರಾರ್ ಹುದ್ದೆಗಳ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) :–**

೧೭೩ (೧೯೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ಸಬ್–ರಿಜಿಸ್ಟ್ರಾರ್ (ಉಪ–ನೋಂದಣಾಧಿಕಾರಿ) ಹುದ್ದೆಗಳ ಸಂಖ್ಯೆ ಎಷ್ಟು ; ಮತ್ತು ಖಾಲಿ ಇರುವ ಸಬ್–ರಿಜಿಸ್ಟ್ರಾರ್ ಹುದ್ದೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಖಾಲಿ ಹುದ್ದೆಗಳಿಗೆ ಸರ್ಕಾರ ಅಂತಿಮವಾಗಿ ಯಾವ ವರ್ಷದಲ್ಲಿ ನೇಮಕಾತಿ ಮಾಡಿಕೊಂಡಿರುತ್ತದೆ ;

(ಇ) ಖಾಲಿ ಇರುವ ಸಬ್–ರಿಜಿಸ್ಟ್ರಾರ್ ಹುದ್ದೆಗಳ ನೇಮಕಾತಿಗೆ ಸರ್ಕಾರದ ಮುಂದಿರುವ ಕ್ರಮವೇನು ಹಾಗೂ ಎಷ್ಟು ಹುದ್ದೆಗಳ ನೇಮಕಾತಿಗೆ ಸರ್ಕಾರ ಸಿದ್ಧವಿದೆ ;

ಈ) ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆ.ಪಿ.ಎಸ್.ಸಿ) ವಿಳಂಬ ಧೋರಣೆ, ಪಾರದರ್ಶಕತೆಯ ಕೊರತೆಯಿರುವುದರಿಂದ ಸಬ್–ರಿಜಿಸ್ಟ್ರಾರ್ ನೇಮಕಾತಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆ.ಇ.ಎ) ವಹಿಸುವ ಚಿಂತನೆ ಸರ್ಕಾರದ ಮುಂದಿದೆಯೇ ?

## ರಬಕವಿಯ ಮಹೀಷವಾಡಗಿ ಸೇತುವೆ ಕಾಮಗಾರಿ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) :–**

೧೭೪ (೧೯೭) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಜಿಲ್ಲೆಯ ರಬಕವಿಯ ಮಹೀಷವಾಡಗಿ ಸೇತುವೆ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಮಹೀಷವಾಡಗಿ ಸೇತುವೆ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ ; ಸದರಿ ಕಾಮಗಾರಿಯು ಕಳೆದ ೪ ವರ್ಷಗಳಿಂದ ಸ್ಥಗಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಸ್ಥಗಿತಗೊಳ್ಳಲು ಕಾರಣಗಳೇನು ; ಈ ಕುರಿತು ಸರ್ಕಾರದ ಕ್ರಮಗಳೇನು ; (ವಿವರ ಒದಗಿಸುವುದು)

(ಇ) ಸದರಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸರ್ಕಾರಕ್ಕೆ ಇರುವ ಅಡಚಣೆಗಳೇನು ಹಾಗೂ ಈ ಕುರಿತು ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

ಈ) ಕಾಮಗಾರಿ ವಿಳಂಬದಿಂದಾಗಿ ಆ ಭಾಗದ ರೈತರಿಗೆ ತೊಂದರೆಯಾಗಿ ಉಪವಾಸ ಸತ್ಯಾಗ್ರಹ, ಪ್ರತಿಭಟನೆ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ; ಹಾಗಿದ್ದಲ್ಲಿ, ಇಲ್ಲಿವರೆಗೆ ಕಾಮಗಾರಿ ಪ್ರಾರಂಭಿಸದೇ ಇರಲು ಕಾರಣಗಳೇನು ; ( ವಿವರ ನೀಡುವುದು)

(ಉ) ಸದರಿ ಮಹೀಷವಾಡಗಿ ಸೇತುವೆ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು ?

## ಕೆ.ಕೆ.ಆರ್.ಟಿ.ಸಿ ಬಸ್‌ಗಳ ಕೊರತೆ ಮತ್ತು ಹೊಸ ಮಾರ್ಗಗಳ ಬಗ್ಗೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೫ (೧೯೮) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯಲ್ಲಿ ಸದ್ಯ ಸಂಚರಿಸುತ್ತಿರುವ ಕೆ.ಕೆ.ಆರ್.ಟಿ.ಸಿ ಬಸ್‌ಗಳ ಸಂಖ್ಯೆ ಎಷ್ಟು ; ಇವುಗಳಲ್ಲಿ ಕಾಲಾವಧಿ ಮುಗಿದ (Old/Scrap condition) ಬಸ್‌ಗಳ ಸಂಖ್ಯೆ ಎಷ್ಟು ;

(ಆ) ಜಿಲ್ಲೆಯ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಸಮರ್ಪಕ ಬಸ್ ಸೌಲಭ್ಯವಿಲ್ಲದೆ ತೊಂದರೆಯಾಗುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ ;

(ಇ) ಕಳೆದ ಎರಡು ವರ್ಷಗಳಲ್ಲಿ ಕಲಬುರಗಿ ಜಿಲ್ಲೆಗೆ ಮಂಜೂರಾದ ಹೊಸ ಬಸ್‌ಗಳೆಷ್ಟು ಮತ್ತು ಪ್ರಸ್ತುತ ಖಾಲಿ ಇರುವ ಚಾಲಕ ಹಾಗೂ ನಿರ್ವಾಹಕರ ಹುದ್ದೆಗಳ ಸಂಖ್ಯೆ ಎಷ್ಟು ;

(ಈ) ಶಕ್ತಿ ಯೋಜನೆಯ ನಂತರ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದ್ದು, ಈ ಒತ್ತಡವನ್ನು ನಿಭಾಯಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ದೇವಸ್ಥಾನಗಳ ಅಭಿವೃದ್ಧಿ ಮತ್ತು ಅನುದಾನದ ಬಗ್ಗೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೬ (೧೯೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಬರುವ ಒಟ್ಟು ದೇವಸ್ಥಾನಗಳ ಸಂಖ್ಯೆ ಎಷ್ಟು ; (ವರ್ಗವಾರು ಮಾಹಿತಿ ನೀಡುವುದು)

(ಆ) ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಬಿಡುಗಡೆಯಾದ ಒಟ್ಟು ಅನುದಾನ ಎಷ್ಟು ಮತ್ತು ಅದರಲ್ಲಿ ಬಳಕೆಯಾದ ಮೊತ್ತವೆಷ್ಟು ;

(ಇ) ಜಿಲ್ಲೆಯ ಅನೇಕ ದೇವಸ್ಥಾನಗಳಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು ಶೌಚಾಲಯ ಮತ್ತು ಭಕ್ತಾದಿಗಳಿಗೆ ತಂಗುದಾಣದ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಅರ್ಚಕರ ತಸ್ತೀಕ್ (Tastik) ಮೊತ್ತವನ್ನು ಹೆಚ್ಚಿಸುವ ಅಥವಾ ಸಕಾಲಕ್ಕೆ ಪಾವತಿಸುವ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ರಸ್ತೆಗಳ ಸುಧಾರಣೆ, ಸೇತುವೆಗಳ ನಿರ್ಮಾಣ ಮತ್ತು ಅನುಷ್ಠಾನದಲ್ಲಿರುವ ಕಾಮಗಾರಿಗಳ ಬಗ್ಗೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೭ (೨೦೦) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವ ಒಟ್ಟು ರಸ್ತೆಗಳ ಉದ್ದ ಎಷ್ಟು ; ಇದರಲ್ಲಿ ಎಷ್ಟು ಕಿಲೋಮೀಟರ್ ರಸ್ತೆಗಳು ಸಂಪೂರ್ಣವಾಗಿ ಹದಗೆಟ್ಟಿವೆ ಹಾಗೂ ಇವುಗಳ ದುರಸ್ಥಿಗೆ ಸರ್ಕಾರ ರೂಪಿಸಿರುವ ಯೋಜನೆಯೇನು ;

(ಆ) ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಗೆ ಮಂಜೂರಾದ ರಾಜ್ಯ ಹೆದ್ದಾರಿ (SH) ಮತ್ತು ಜಿಲ್ಲಾ ಮುಖ್ಯ ರಸ್ತೆಗಳ (MDR) ಅಭಿವೃದ್ಧಿ ಕಾಮಗಾರಿಗಳು ಯಾವುವು ; ಇವುಗಳಲ್ಲಿ ಪೂರ್ಣಗೊಂಡಿರುವ ಮತ್ತು ವಿಳಂಬವಾಗಿರುವ ಕಾಮಗಾರಿಗಳ ಪಟ್ಟಿಯನ್ನು ಒದಗಿಸುವುದು ;

(ಇ) ಮಳೆಗಾಲದಲ್ಲಿ ಜಿಲ್ಲೆಯ ಅನೇಕ ಹಳ್ಳ ಕೊಳ್ಳಗಳು ತುಂಬಿ ಹರಿಯುತ್ತಿರುವುದರಿಂದ ಗ್ರಾಮೀಣ ಭಾಗದ ಸಂಪರ್ಕ ಕಡಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ನಿಟ್ಟಿನಲ್ಲಿ ಎಷ್ಟು ಹೊಸ ಸೇತುವೆಗಳ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ;

(ಈ) ೨೦೨೩-೨೪ ಮತ್ತು ೨೪-೨೫ ನೇ ಸಾಲಿನಲ್ಲಿ ಕಲಬುರಗಿ ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು ; ಮತ್ತು ಅದರಲ್ಲಿ ಖರ್ಚಾದ ಮೊತ್ತವೆಷ್ಟು ; (ತಾಲೂಕುವಾರು ಮಾಹಿತಿ ನೀಡುವುದು)

(ಉ) ಜಿಲ್ಲೆಯಲ್ಲಿ ಇತ್ತೀಚೆಗೆ ನಿರ್ಮಿಸಲಾದ ರಸ್ತೆಗಳು ಕೆಲವೇ ತಿಂಗಳಲ್ಲಿ ಕಿತ್ತು ಹೋಗುತ್ತಿವೆ ಎಂಬ ದೂರುಗಳು ಕೇಳಿ ಬಂದಿದ್ದು, ಈ ಕಾಮಗಾರಿಗಳ ಗುಣಮಟ್ಟದ ಬಗ್ಗೆ ತಪಾಸಣೆ ನಡೆಸಲಾಗಿದೆಯೇ; ಅಂತಹ ಗುತ್ತಿಗೆದಾರರ ವಿರುದ್ಧ ಕೈಗೊಂಡ ಕ್ರಮಗಳೇನು ?

## ಹೊಸ ಫಲಾನುಭವಿಗಳ ಆಯ್ಕೆ ಮತ್ತು ವಸತಿ ರಹಿತರ ಸಮೀಕ್ಷೆ ಬಗ್ಗೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೭೮ (೨೦೧) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ಜಿಲ್ಲೆಯಲ್ಲಿ ಪ್ರಸ್ತುತ ಇರುವ ವಸತಿರಹಿತರ ಸಂಖ್ಯೆ ಎಷ್ಟು ; ಕಳೆದ ಎರಡು ವರ್ಷಗಳಲ್ಲಿ ಎಷ್ಟು ಹೊಸ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ ;

(ಆ) ವಸತಿ ಇಲಾಖೆಯ ತಂತ್ರಾಂಶದಲ್ಲಿ (Software) ತಾಂತ್ರಿಕ ದೋಷಗಳಿಂದಾಗಿ ಅರ್ಹ ಫಲಾನುಭವಿಗಳ ಹೆಸರು ಕೈಬಿಟ್ಟು ಹೋಗಿರುವುದು ನಿಜವೇ ;

(ಇ) ಜಿಲ್ಲೆಯ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ನಿವೇಶನ ರೈತರಿಗಾಗಿ ಸರ್ಕಾರ ಹೊಸದಾಗಿ ಜಮೀನು ಗುರುತಿಸಿ ನಿವೇಶನ ಹಂಚಿಕೆ ಮಾಡುವ ಯೋಜನೆ ಹೊಂದಿದೆಯೇ ?

## ಮೀನುಗಾರಿಕೆ ಉತ್ತೇಜನ ಕುರಿತು

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೯ (೨೦೨) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ (PMMSY) ಕಲಬುರಗಿ ಜಿಲ್ಲೆಗೆ ಮಂಜುರಾದ ಒಟ್ಟು ಅನುದಾನವೆಷ್ಟು ;

(ಆ) ಜಿಲ್ಲೆಯಲ್ಲಿ ಮೀನು ಸಾಕಾಣಿಕೆಗಾಗಿ ಸಬ್ಸಿಡಿ ದರದಲ್ಲಿ ಗಾಳಿ ತುಂಬಿದ ದೋಣಿಗಳು, ಬಲೆಗಳು ಮತ್ತು ಮೀನು ಮಾರಾಟ ಮಳಿಗೆಗಳನ್ನು ಪಡೆಯಲು ಸಲ್ಲಿಕೆಯಾಗಿರುವ ಅರ್ಜಿಗಳು ಎಷ್ಟು; ಎಷ್ಟು ಫಲಾನುಭವಿಗಳಿಗೆ ಸೌಲಭ್ಯ ನೀಡಲಾಗಿದೆ ;

(ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಮೀನು ಸಾಕಾಣಿಕೆ ಘಟಕ ಸ್ಥಾಪಿಸಲು ನೀಡುತ್ತಿರುವ ಉತ್ತೇಜನಗಳೇನು ?

## ರಾಜ್ಯದ ಲೋಕೋಪಯೋಗಿ ಇಲಾಖೆಯಡಿ ಬರುವ ಸೇತುವೆಗಳ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೦ (೨೦೩) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಲೋಕೋಪಯೋಗಿ ಇಲಾಖೆಯಡಿ ಬರುವಂತಹ ಸೇತುವೆಗಳ ಸಂಖ್ಯೆ ಎಷ್ಟು ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಆ) ಸದರಿ ಸೇತುವೆಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಸೇತುವೆಗಳನ್ನು ಗುರುತಿಸಲಾಗಿದೆಯೇ ; ಅವು ಯಾವುವು ;

(ಇ) ಶಿಥಿಲಾವಸ್ಥೆಯಲ್ಲಿರುವ ಸೇತುವೆಗಳ ದುರಸ್ತಿ ಕಾರ್ಯ ಅಥವಾ ದುರಸ್ತಿ ಕಾರ್ಯ ಕೈಗೊಳ್ಳಲು ಬಾರದ ಸೇತುವೆಗಳಿಗೆ ನೂತನ ಸೇತುವೆಗಳ ನಿರ್ಮಾಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳು ಹಾಗೂ ಯೋಜನೆಗಳಾವುವು ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಈ) ಕಳೆದ ಎರಡು ವರ್ಷಗಳಲ್ಲಿ ಎಷ್ಟು ನೂತನ ಸೇತುವೆಗಳನ್ನು ನಿರ್ಮಿಸುವ ಯೋಜನೆ ಕೈಗೆತ್ತಿಕೊಳ್ಳಲಾಗಿದೆ ; ಅವುಗಳ ಪೈಕಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ ; ಬಾಕಿ ಉಳಿದ ಕಾಮಗಾರಿಗಳು ಯಾವುವು ?

## ಸಾರಿಗೆ ಸಂಸ್ಥೆಗಳ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೧ (೨೦೫) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಸ್ತುತ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾರಿಗೆ ಸಂಸ್ಥೆಗಳೆಷ್ಟು; ಸದರಿ ಸಾರಿಗೆ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರುಗಳ ಸಂಖ್ಯೆ ಎಷ್ಟು ; (ಸಂಪೂರ್ಣ ವಿವರಗಳೊಂದಿಗೆ ಮಾಹಿತಿ ನೀಡುವುದು)

(ಆ) ೨೦೨೧–೨೨ ರಿಂದ ೨೦೨೫–೨೬ನೇ ಸಾಲಿನವರೆಗೆ ಸಾರಿಗೆ ಸಂಸ್ಥೆಗೆ ಎಷ್ಟು ಬಸ್‌ಗಳನ್ನು ಮತ್ತು ಯಾವ ಯಾವ ದರ್ಜೆಯ ಬಸ್ಸುಗಳನ್ನು ಸರ್ಕಾರದಿಂದ ಮತ್ತು ಕೇಂದ್ರ ಸರ್ಕಾರದಿಂದ ಖರೀದಿಸಿ ವಿತರಿಸಲಾಗಿದೆ ; (ಸಾರಿಗೆ ಸಂಸ್ಥೆಗಳ ವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ವಾಯುವ್ಯ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ ಒಟ್ಟು ಎಷ್ಟು ಬಸ್‌ಗಳಿವೆ ಅದರಲ್ಲಿ ೧೦ ವರ್ಷಗಳಷ್ಟು ಹಳೆಯದಾದ ಬಸ್‌ಗಳ ಸಂಖ್ಯೆ ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಉತ್ತರ ಕರ್ನಾಟಕಕ್ಕೆ ಹೊಸ ಬಸ್‌ಗಳನ್ನೇ ನೀಡದೆ ಹಳೆಯ ಬಸ್‌ಗಳನ್ನು ನೀಡಲಾಗಿದ್ದು, ಈ ಬಸ್‌ಗಳು ರಸ್ತೆಯಲ್ಲಿ ಕೆಟ್ಟು ನಿಲ್ಲುವ, ಅಪಘಾತ, ರಿಪೇರಿ ಇತ್ಯಾದಿಗಳಿಂದ ಸಾರ್ವಜನಿಕರಿಗೆ ಸಮಸ್ಯೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮಗಳೇನು ;

(ಉ) ವಾಯುವ್ಯ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ ಯಾವ ಯಾವ ದರ್ಜೆಯ ಎಷ್ಟು ಬಸ್‌ಗೆ ಕಾರ್ಯ ನಿರ್ವಹಿಸುತ್ತಿವೆ ; (ಬಸ್‌ಗಳ ಸಂಪೂರ್ಣ ಮಾಹಿತಿ ನೀಡುವುದು)

(ಊ) ವಾಯುವ್ಯ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಗಳಲ್ಲಿ ವೋಲ್ವೋ ಮತ್ತು ಅತ್ಯುನ್ನತ ದರ್ಜೆಯ ಬಸ್‌ಗಳು ಉತ್ತರ ಕರ್ನಾಟಕದ ಹಳ್ಳಿಗಳಿಗೆ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದೆಯೆ ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ಮುಖ್ಯಮಂತ್ರಿಗಳ ಬಹುಮಹಡಿ ವಸತಿ ಯೋಜನೆಯಡಿ ಮನೆ ನಿರ್ಮಾಣ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೨ (೨೦೬) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ವತಿಯಿಂದ ಮುಖ್ಯಮಂತ್ರಿಗಳ ಬಹುಮಹಡಿ ವಸತಿ ಯೋಜನೆ ಅಡಿಯಲ್ಲಿ ಬೆಂಗಳೂರಿನಲ್ಲಿ ಎಷ್ಟು ವಿಧಾನಸಭಾ ಕ್ಷೇತ್ರಗಳಲ್ಲಿ ೧ ಬಿ.ಎಚ್.ಕೆ ಮತ್ತು ೨ ಬಿ.ಎಚ್.ಕೆ ಯ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ ; ಸದರಿ ಮನೆಗಳಲ್ಲಿ ಸರ್ಕಾರದಿಂದ ಎಷ್ಟು ಮೊತ್ತವನ್ನು ನಿಗದಿಪಡಿಸಲಾಗಿದೆ ; ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಬ್ಸಿಡಿ ಎಷ್ಟು ; ಒಟ್ಟು ಎಷ್ಟು ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ ; ಎಷ್ಟು ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ ; (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಬೆಂಗಳೂರಿನ ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರದ ಕೆ. ನಾರಾಯಣಪುರ ವ್ಯಾಪ್ತಿಯಲ್ಲಿ ನಿರ್ಮಿಸಿರುವ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ವತಿಯಿಂದ ಮುಖ್ಯಮಂತ್ರಿಗಾಳ ಬಹುಮಹಡಿ ವಸತಿ ಯೋಜನೆ ಅಡಿಯಲ್ಲಿ ಎಷ್ಟು ೨ ಬಿ.ಎಚ್.ಕೆ ಮನೆಗಳನ್ನು ನಿರ್ಮಿಸಲಾಗಿದೆ ; ಎಷ್ಟು ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ ; ಫಲಾನುಭವಿಗಳ ಮಾಹಿತಿ ನೀಡುವುದು ; ಕೀ ಹಸ್ತಾಂತರ ಮಾಡಲಾಗಿದೆಯೇ ;

(ಇ) ಸದರಿ ೨ ಬಿ.ಎಚ್.ಕೆ ಮನೆಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೇ ; ಯಾವ ಕಾಮಗಾರಿ ಪೂರ್ಣಗೊಂಡಿದೆ ; ಯಾವ ಕಾಮಗಾರಿ ಪೂರ್ಣಗೊಂಡಿಲ್ಲ ; ವಿದ್ಯುತ್ ಪೂರೈಕೆ, ಕುಡಿಯುವ ನೀರು, ಲಿಫ್ಟ್ ಕೌಂಪೌಂಡ್ ಕಾಮಗಾರಿ ಸಂಪೂರ್ಣ ಆಗಿದೆಯೇ ; ಇಲ್ಲವಾದಲ್ಲಿ ಯಾವ ಕಾಲಮಿತಿಯೊಳಗೆ ಕಾಮಗಾರಿ ಪೂರ್ಣಗೊಳಿಸಲಾಗುವುದು ; (ವಿವರ ನೀಡುವುದು)

(ಈ) ಸದರಿ ೨ ಬಿ.ಹೆಚ್.ಕೆ.ಮನೆಗಳ ಫಲಾನುಭವಿಗಳಿಗೆ ಮನೆ ರಿಜಿಸ್ಟ್ರೇಷನ್ ಮಾಡಲಾಗಿದೆಯೇ ; ಯಾವ ಕಾರಣದಿಂದ ವಿಳಂಬವಾಗಿದೆ ; ಯಾವಾಗ ರಿಜಿಸ್ಟ್ರೇಷನ್ ಮಾಡಲಾಗುವುದು ? (ಸಂಪೂರ್ಣ ಮಾಹಿತಿಯೊಂದಿಗೆ ವಿವರ ನೀಡುವುದು)

## ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಒಳಪಡುವ ಕಾಮಗಾರಿಗಳ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೩ (೨೦೮) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಬಾಹ್ಯ ಆರ್ಥಿಕ ನೆರವಿನೊಂದಿಗೆ ರೂ.೫,೭೩೬ ಕೋಟಿ ವೆಚ್ಚದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿ ಪಡಿಸುತ್ತಿರುವುದು ನಿಜವೇ ; ಹಾಗಿದ್ದಲ್ಲಿ, ೫೭೩೦ ಕೋಟಿ ರೂಗಳಲ್ಲಿ ರಾಜ್ಯದಲ್ಲಿ ಯಾವ ಯಾವ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ;

(ಆ) ಹಾಸನದಲ್ಲಿ ೨೧.೧೦ ಕಿ.ಮೀ ಹೊರ ವರ್ತುಲ ರಸ್ತೆ ಕಾಮಗಾರಿ ಯಾವ ಹಂತದಲ್ಲಿದೆ ; ಮತ್ತು ಮೈಸೂರು ವರ್ತುಲ ರಸ್ತೆ ಯೋಜನೆ, ಬೆಳಗಾವಿಯ ಹೊರ ವರ್ತುಲ ರಸ್ತೆ ಸ್ಥಿತಿಗತಿ ಬಗ್ಗೆ ಮಾಹಿತಿ ನೀಡುವುದು ;

(ಇ) ರಾಜ್ಯದಲ್ಲಿ QR code-based smart cards for Class-1 and Class-ll contractors ಯೋಜನೆಯಡಿ ಇಲ್ಲಿಯವರೆಗೆ ಎಷ್ಟು ಗುತ್ತಿಗೆದಾರರು ಅರ್ಜಿ ಸಲ್ಲಿಸಿರುತ್ತಾರೆ ; ಮತ್ತು ಎಷ್ಟು ಗುತ್ತಿಗೆದಾರರಿಗೆ ಈ ಯೋಜನೆಯಲ್ಲಿ ಸ್ಮಾರ್ಟ್ ಕಾರ್ಡ್ ವಿತರಿಸಲಾಗಿದೆ ?

## ಕಂದಾಯ ಇಲಾಖೆಯ ಕ್ರಮಗಳ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೪ (೨೦೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭೂ ದಾಖಲೆಗಳ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಇಲಾಖೆ ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಮತ್ತು "ಭೂಮಿ" ಪಾರದರ್ಶಕತೆಯನ್ನು ಹೇಗೆ ಸುಧಾರಿಸುತ್ತಿದೆ ಮತ್ತು ಪಹಣಿಗಳಲ್ಲಿ (RTC) ದೋಷಗಳನ್ನು ಹೇಗೆ ಕಡಿಮೆ ಮಾಡುತ್ತಿದೆ ; (ಮಾಹಿತಿ ನೀಡುವುದು)

(ಆ) ಕೊಡಗು ಜಿಲ್ಲೆಯಲ್ಲಿ ಭೂ ಪರಿವರ್ತನೆ ಮತ್ತು ಪಿತ್ರಾರ್ಜಿತ ಪ್ರಕರಣಗಳನ್ನು ವಿಶೇಷವಾಗಿ ಸಂಕೀರ್ಣ ಅವಿಭಕ್ತ ಕುಟುಂಬ ಹಿಡುವಳಿಗಳು (Complex joint family holdings) ಭೂಮಿಗಳಿಗೆ ಸಂಬಂಧಿಸಿದಂತೆ ತ್ವರಿತ ಪರಿಹಾರವನ್ನು ಸಾಧಿಸಲು ಇಲಾಖೆ ವತಿಯಿಂದ ಯಾವ ಕ್ರಮಗಳನ್ನು ಜಾರಿಗೆ ತರಲಾಗುತ್ತಿದೆ ;

(ಇ) ಅಕ್ರಮ ಭೂ ವ್ಯವಹಾರಗಳು ಮತ್ತು ಭೂ ದಾಖಲೆಗಳ ಸೃಷ್ಟಿಕರಣವನ್ನು ತಡೆಯಲು ಇಲಾಖೆ ಕೈಗೊಂಡಿರುವ ಕ್ರಮಗಳು ಯಾವುವು ; ಮತ್ತು ಇಂತಹ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ಯಾವ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುವುದು ?

## ವಸತಿ ಇಲಾಖೆ ವತಿಯಿಂದ ಕೈಗೊಂಡಿರುವ ಕ್ರಮಗಳ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೫ (೨೧೦) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಧಾನ ಮಂತ್ರಿ ಅವಾಸ್ ಯೋಜನೆ ಅಡಿ ೭.೦೨ ಫಲಾನುಭವಿಗಳಿಗೆ ವಸತಿ ಯೋಜನೆಯ ಪ್ರಸ್ತುತ ಸ್ಥಿತಿ ಏನು ; ಈ ಯೋಜನೆಯು ಕೇವಲ ಶೇ.೨೬ ರಷ್ಟು ಪ್ರಗತಿ ಸಾಧಿಸಿರುವುದು ನಿಜವೇ ; ಇದಕ್ಕೆ ಕಾರಣಗಳೇನು ;

(ಆ) ಬಸವ ವಸತಿ ಯೋಜನೆ ಮತ್ತು ಡಾ॥ ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ ಸೇರಿದಂತೆ ವಿವಿಧ ರಾಜ್ಯ ಮತ್ತು ಕೇಂದ್ರ ಯೋಜನೆಗಳ ಅಡಿಯಲ್ಲಿ ವಸತಿ ನಿರ್ಮಾಣದಲ್ಲಿ ಗಮನಾರ್ಹ ವಿಳಂಬಕ್ಕೆ ಪ್ರಾಥಮಿಕ ಕಾರಣಗಳೇನು ;

(ಇ) ನೈಜ ನಿರಾಶ್ರಿತ ಕುಟುಂಬಗಳಿಗೆ ವಸತಿ ಸಿಗಲು ಅಥವಾ ಫಲಾನುಭವಿಗಳ ಆಯ್ಕೆಯು ಗ್ರಾಮ/ಸಭೆ ವಾರ್ಡ್ ಮಟ್ಟದಲ್ಲಿ ಪಾರದರ್ಶಕವಾಗಿ ರಾಜಕೀಯ ಅಥವಾ ಇನ್ನಿತರೇ ಹಸಕ್ಷೇಪದಿಂದ ಹೊರತಾಗಿ ಮುಕ್ತವಾಗಿ ನಡೆಯುವಂತೆ ನೋಡಿಕೊಳ್ಳಲು ಇಲಾಖೆ ವತಿಯಿಂದ ಯಾವ ಕ್ರಮಗಳನ್ನು ಜಾರಿಗೆ ತರಲಾಗುತ್ತಿದೆ ?

## ಪಶುಸಂಗೋಪನೆ ಇಲಾಖೆಯ ಕ್ರಮಗಳ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೬ (೨೧೧) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಾಲು ಮತ್ತು ಬಾಯಿ ರೋಗ (FMD) ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳು ಮತ್ತು ಗಡ್ಡೆ ಚರ್ಮರೋಗ (LSD) ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳು ಯಾವುವು ;

(ಆ) ದೂರದ ಮತ್ತು ಹಿಂದುಳಿದ ಪ್ರದೇಶಗಳನ್ನು ತಲುಪುವಲ್ಲಿ ಸಂಚಾರಿ ಪಶು ವೈದ್ಯಕೀಯ ಚಿಕಿತ್ಸಾಲಯಗಳು (೧೯೬೨ ಟೋಲ್ ಫ್ರೀ ಸಂಖ್ಯೆಯಲ್ಲಿ ಕಾರ್ಯನಿರ್ವಹಿಸುತ್ತಿರುವ "ಪಶು ಸಂಜೀವಿನಿ" ಯೋಜನೆ) ಎಷ್ಟು ಪರಿಣಾಮಕಾರಿಯಾಗಿದೆ ;

(ಇ) ಪ್ರಾಣಿ ರೋಗಗಳನ್ನು ಸಕಾಲಿಕವಾಗಿ ಗುರುತಿಸುವುದು ಮತ್ತು ತಡೆಗಟ್ಟುವುದನ್ನು ಖಚಿತಪಡಿಸಿಕೊಳ್ಳಲು ತಾಲ್ಲೂಕು ಮಟ್ಟದಲ್ಲಿ ರೋಗನಿರ್ಣಯ ಪ್ರಯೋಗಾಲಯ ಸೌಲಭ್ಯಗಳನ್ನು ಬಲಪಡಿಸಲು ಇಲಾಖೆ ಯಾವ ಕ್ರಮಗಳನ್ನು ಕೈಗೊಂಡಿದೆ ;

(ಈ) ಪ್ರಾಣಿಗಳ ಉತ್ತಮ ಆರೋಗ್ಯಕ್ಕಾಗಿ ಇಲಾಖೆ ವತಿಯಿಂದ ಜಾನುವಾರುಗಳಿಗೆ ನಿಯಮಿತವಾಗಿ ಜಂತುಹುಳು ನಿವಾರಣ ಕಾರ್ಯಕ್ರಮಗಳು ಮತ್ತು ಇತರೆ ನಿಯಂತ್ರಣ ಕ್ರಮಗಳನ್ನು ನಡೆಸಲಾಗುತ್ತಿದೆಯೇ ; ಮಾಹಿತಿ ನೀಡುವುದು ?

## ಕೊಪ್ಪಳ ಜಿಲ್ಲೆಯಲ್ಲಿ ಹದಗೆಟ್ಟ ರಸ್ತೆಗಳಿಂದ ಸಂಭವಿಸಿದ ರಸ್ತೆ ಅಪಘಾತಗಳ ಮತ್ತು ಜೀವಹಾನಿ ಕುರಿತು

**ಶ್ರೀಮತಿ ಹೇಮಲತ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೭ (೨೧೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿ ಹದಗೆಟ್ಟ ರಸ್ತೆಗಳಿಂದ ೨೦೨೩–೨೪ ರಿಂದ ಇಲ್ಲಿಯವರೆಗೆ ಸಂಭವಿಸಿದ ರಸ್ತೆ ಅಪಘಾತಗಳು ಮತ್ತು ಜೀವ ಹಾನಿಗಳು ಎಷ್ಟು ; (ತಾಲ್ಲೂಕುವಾರು ವಿವರಗಳನ್ನು ನೀಡುವುದು)

(ಆ) ಕೊಪ್ಪಳ ಜಿಲ್ಲಾ ಕೇಂದ್ರವನ್ನು ತಾಲ್ಲೂಕುಗಳಿಗೆ ಸಂಪರ್ಕಿಸುವ ಪ್ರಮುಖ ರಸ್ತೆಗಳು ಹದಗೆಟ್ಟಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಆ ರಸ್ತೆಗಳ ಪಟ್ಟಿಯನ್ನು ಸಲ್ಲಿಸುವುದು ;

(ಇ) ಸದರಿ ಹದಗೆಟ್ಟ ರಸ್ತೆಗಳನ್ನು ಯಾವಾಗ ದುರಸ್ತಿಗೊಳಿಸಲಾಗುವುದು ; ಅಥವಾ ಪುನರ್ ನಿರ್ಮಾಣ ಕೈಗೊಳ್ಳಲಾಗುವುದು ; ಕಾರ್ಯ ಯೋಜನೆ ಮತ್ತು ಅನುದಾನ ವಿವರಗಳನ್ನು ನೀಡುವುದು ;

(ಈ) ಕೊಪ್ಪಳ ನಗರದ ಹೃದಯ ಭಾಗದಲ್ಲಿರುವ ತಿನ್ನಾಳ ರಸ್ತೆ ಮತ್ತು ಕುಷ್ಟಗಿ ಮುಖ್ಯ ರಸ್ತೆಗಳು ಸಂಪೂರ್ಣ ಹದಗೆಟ್ಟಿರುವುದು ಸಾರ್ವಜನಿಕರಿಗೆ ತೀವ್ರ ತೊಂದರೆ ಉಂಟು ಮಾಡುತ್ತಿರುವ ಈ ರಸ್ತೆಗಳ ದುರಸ್ತಿ ಅಥವಾ ಮರು ಡಾಂಬರೀಕರಣವನ್ನು ಸರ್ಕಾರ ಯಾವಾಗ ಕೈಗೊಳ್ಳುತ್ತದೆ ? (ವಿವರಗಳನ್ನು ಒದಗಿಸುವುದು)

## ಕೊಪ್ಪಳ ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಅಭಿವೃದ್ಧಿಪಡಿಸಲಾಗಿರುವ ವಸತಿ ವಿನ್ಯಾಸಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೮ (೨೧೩) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೧೦ ವರ್ಷಗಳಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಅಭಿವೃದ್ಧಿಪಡಿಸಲಾಗಿರುವ ವಸತಿ ವಿನ್ಯಾಸಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ಒದಗಿಸುವುದು)

(ಆ) ಜಿಲ್ಲೆಯಲ್ಲಿ ಮಂಡಳಿಯಿಂದ ಅಭಿವೃದ್ಧಿ ಮಾಡಿರುವ ವಸತಿ ಲೇಔಟ್‌ಗಳಲ್ಲಿನ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ; ಹಂಚಿಕೆ ಮಾಡಲು ಬಾಕಿ ಇರುವ ನಿವೇಶನಗಳೆಷ್ಟು ; ಬಾಕಿ ಉಳಿದಿರಲು ಕಾರಣವೇನು ; ( ವಿವರ ನೀಡುವುದು)

(ಇ) ಈಗಾಗಲೇ ಹಂಚಿಕೆ ಮಾಡಿರುವ ಲೇಔಟ್‌ಗಳಲ್ಲಿನ ಎಲ್ಲಾ ಸಾರ್ವಜನಿಕ ಮೂಲ ಸೌಕರ್ಯಗಳನ್ನು ರಸ್ತೆ, ಪಾರ್ಕ್, ಸಿ.ಎ ಸೈಟ್ ಹಾಗೂ ಇತ್ಯಾದಿ ಆಯಾ ನಗರದ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಾಗಿದೆಯೇ ; ಇಲ್ಲದಿದ್ದಲ್ಲಿ, ಬಾಕಿ ಇರಲು ಕಾರಣವೇನು ;

(ಈ) ಈಗಾಗಲೇ ಹಂಚಿಕೆ ಮಾಡಿರುವ ನಿವೇಶನಗಳ ಭೂಮಾಲೀಕರುಗಳಿಗೆ ಆಯಾ ನಗರ ಸ್ಥಳೀಯ ಸಂಸ್ಥೆಗಳಿಂದ ನಮೂನೆ–೩ ನೀಡಲಾಗುತ್ತಿದೆಯೇ ; ಇಲ್ಲವಾದಲ್ಲಿ, ಅದಕ್ಕೆ ಕಾರಣವೇನು ;

(ಉ) ಕೆ.ಎಚ್.ಬಿ.ಯು ಲೇಔಟ್‌ಗಳಲ್ಲಿನ ಎಲ್ಲಾ ಸಾರ್ವಜನಿಕ ಮೂಲಸೌಕರ್ಯಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲು ಬಾಕಿ ಇರುವ ಪ್ರಕರಣಗಳನ್ನು ಯಾವ ಅವಧಿಯೊಳಗಾಗಿ ಹಸ್ತಾಂತರಿಸಲಾಗುವುದು ?

## ರಾಜ್ಯದಲ್ಲಿ ದಾಸೋಹ ಮಾಡುತ್ತಿರುವ ದೇವಾಲಯಗಳಿಂದ ಶಾಲಾ ಮಕ್ಕಳಿಗೆ ಬಿಸಿಯೂಟ ನೀಡುವ ಕುರಿತು

**ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ) :–**

೧೮೯ (೨೧೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಮುಜರಾಯಿ ಇಲಾಖೆ ವ್ಯಾಪ್ತಿಯ ದೇವಾಲಯಗಳಲ್ಲಿ ದಿನನಿತ್ಯ ದಾಸೋಹ ನಡೆಯುತ್ತಿರುವ ದೇವಾಲಯಗಳ ಸಂಖ್ಯೆ ಎಷ್ಟು ; ಅವುಗಳು ಯಾವುವು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಇಂತಹ ದಾಸೋಹ ನಡೆಯುತ್ತಿರುವ ದೇವಾಲಯಗಳಿಂದ ಈ ಭಾಗದ ಸುತ್ತಮುತ್ತಲಿನ ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆ ಬಿಸಿಯೂಟ ವ್ಯವಸ್ಥೆ ಮಾಡಲಾಗುತ್ತಿದೆಯೇ ; (ವಿವರ ನೀಡುವುದು)

(ಇ) ಸರ್ಕಾರ ಈ ದೇವಾಲಯಗಳಿಂದ ಆ ಭಾಗದ ಸರ್ಕಾರಿ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ವ್ಯವಸ್ಥೆಯನ್ನು ಜಾರಿಗೆ ತರಲು ಯಾವ ಕ್ರಮವನ್ನು ಕೈಗೊಂಡಿದೆ ?

## ಕಂದಾಯ ಇಲಾಖೆ ರಿಜಿಸ್ಟರ್ ಶುಲ್ಕವನ್ನು ಹೆಚ್ಚಳ ಮಾಡುತ್ತಿರುವ ಬಗ್ಗೆ

**ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ) :–**

೧೯೦ (೨೧೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ಬರುವ ಸಬ್ ರಿಜಿಸ್ಟರ್ ಶುಲ್ಕವನ್ನು ೨೦೨೩ ರಿಂದ ೨೦೨೬ ರವರೆಗೆ ಎಷ್ಟು ಬಾರಿ ಹೆಚ್ಚಳ ಮಾಡಲಾಗಿದೆ ;

(ಆ) ಸಬ್ ರಿಜಿಸ್ಟರ್ ಶುಲ್ಕವನ್ನು ಹೆಚ್ಚಳ ಮಾಡುತ್ತಿರುವುದರಿಂದ ಸಣ್ಣ ಸಣ್ಣ ಕುಟುಂಬದವರು ನಿವೇಶನ ಮತ್ತು ಆಸ್ತಿಗಳನ್ನು ಕೊಂಡುಕೊಳ್ಳಲು ತುಂಬಾ ತೊಂದರೆಯಾಗುತ್ತಿರುವುದರಿಂದ ಸರ್ಕಾರ ಈ ಶುಲ್ಕವನ್ನು ಹೆಚ್ಚಳ ಮಾಡುವುದನ್ನು ನಿಲ್ಲಿಸಲು ಕೈಗೊಂಡಿರುವ ಕ್ರಮಗಳೇನು ?

## ರಾಜ್ಯದ ಸಾರಿಗೆ ನಿಗಮಗಳ ವಾಹನಗಳ ಕುರಿತು

**ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ) :–**

೧೯೧ (೨೧೬) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ವಿವಿಧ ಸಾರಿಗೆ ನಿಗಮಗಳಲ್ಲಿ ಇರುವ ಒಟ್ಟು ಸಾರಿಗೆ ಬಸ್ಸುಗಳ ಸಂಖ್ಯೆ ಎಷ್ಟು ; (ನಿಗಮವಾರು, ಘಟಕಗಳ ವಿವರವಾದ ಪೂರ್ಣ ಮಾಹಿತಿಯನ್ನು ನೀಡುವುದು)

(ಆ) ವಿವಿಧ ಸಾರಿಗೆ ನಿಗಮಗಳಲ್ಲಿ ಸಂಚಾರ ಮಾಡುತ್ತಿರುವ ಸಾರಿಗೆ ವಾಹನಗಳಿಗೆ ತಿಂಗಳಿಗೆ ಒಂದು ವಾಹನಕ್ಕೆ ತಗಲುವ ವೆಚ್ಚ ಎಷ್ಟು ಹಾಗೂ ಈ ವಾಹನದಿಂದ ಸರ್ಕಾರಕ್ಕೆ ಬರುತ್ತಿರುವ ಮೊತ್ತ ಎಷ್ಟು? (ಪೂರ್ಣ ಮಾಹಿತಿ ನೀಡುವುದು)

## ಬೆಳಗಾವಿ ಜಿಲ್ಲೆ ಖಾನಾಪೂರ ತಾಲ್ಲೂಕಿನ ಧನಗರ ಗೌಳಿ ಜನಾಂಗದ ಕಂದಾಯ ಗ್ರಾಮಗಳ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) :–**

೧೯೨ (೨೧೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲ್ಲೂಕಿನಲ್ಲಿ ಧನಗರ ಗೌಳಿ ಜನಾಂಗದ ಗ್ರಾಮಗಳನ್ನು ಕಂದಾಯ ಗ್ರಾಮಗಳು/ಉಪ ಗ್ರಾಮಗಳನ್ನಾಗಿ ಮಾಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಕಂದಾಯ ಗ್ರಾಮಗಳನ್ನಾಗಿ ಮಾಡುವ ಗ್ರಾಮಗಳು ಮತ್ತು ಉಪ ಗ್ರಾಮಗಳನ್ನಾಗಿ ಮಾಡುವ ಗ್ರಾಮಗಳು ಯಾವುವು ;

(ಇ) ಧನಗರ ಗೌಳಿ ಜನಾಂಗದ ಅನೇಕ ಗ್ರಾಮಗಳ ಕುಟುಂಬಗಳ ಸಂಖ್ಯೆ, ಗ್ರಾಮದ ಜನಸಂಖ್ಯೆ, ವಾಸಿಸುವ ಜಾಗದ ಕುರಿತು ನಿಖರ ಮಾಹಿತಿ ಇಲ್ಲದೆ ಇರುವುದರಿಂದ ಕೆಲವು ಗ್ರಾಮಗಳು ಕಂದಾಯ ಗ್ರಾಮಗಳನ್ನಾಗಿ ಮಾಡುವ ಪಟ್ಟಿಯಿಂದ ಬಿಟ್ಟು ಹೋಗಿರುವುದು ಮತ್ತು ಅನೇಕ ಸೌಲಭ್ಯಗಳನ್ನು ಪಡೆಯಲು ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ತಾಲ್ಲೂಕಿನಲ್ಲಿರುವ ಸದರಿ ಜನಾಂಗದ ಗ್ರಾಮಗಳ ಸಂಪೂರ್ಣ ನಿಖರ ದತ್ತಾಂಶ ಪಡೆಯಲು ಸರ್ಕಾರ ತೆಗೆದುಕೊಳ್ಳುವ ಆದ್ಯತಾ ಕ್ರಮಗಳೇನು ?

## ಪಶುಸಂಗೋಪನೆ ಇಲಾಖೆಯಲ್ಲಿನ ಹುದ್ದೆಗಳ ಬಗ್ಗೆ

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :–**

೧೯೩ (೨೧೯) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪಶುಸಂಗೋಪನೆ ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; ಭರ್ತಿ ಮಾಡಿದ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು; (ಹುದ್ದೆವಾರು/ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಪಶು ವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆ ಎಷ್ಟು; ಎಲ್ಲಾ ಪಶು ಆಸ್ಪತ್ರೆಗಳಲ್ಲಿ ವೈದ್ಯರು ಲಭ್ಯವಿದ್ದಾರೆಯೇ; ಪಶು ವೈದ್ಯರು ಇಲ್ಲದೇ ಇರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು;

(ಇ) ಖಾಲಿಯಿರುವ ಹುದ್ದೆಗಳನ್ನು ಹಾಗೂ ಪಶು ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;

(ಈ) ಪಶು ವೈದ್ಯರು ಖಾಲಿಯಿರುವ ತಾಲ್ಲೂಕು ಪಶು ವೈದ್ಯಕೀಯ ಆಸ್ಪತ್ರೆಗಳಲ್ಲಿ ಯಾರು ಕಾರ್ಯನಿರ್ವಹಿಸುತ್ತಿದ್ದಾರೆ; ಯಾವುದೇ ಪಶು ವೈದ್ಯರು ಇಲ್ಲದೇ ಇದ್ದಲ್ಲಿ, ಪ್ರಾಣಿಗಳನ್ನು ರಕ್ಷಿಸುವುದು ಹೇಗೆ; ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

## ಲೋಕೋಪಯೋಗಿ ಇಲಾಖೆ ವತಿಯಿಂದ ನಿರ್ಮಿಸಿರುವ ವಸತಿ ಗೃಹದ ಬಗ್ಗೆ

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :–**

೧೯೪ (೨೨೦) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರಿ ನೌಕರರ ವಾಸ್ತವ್ಯಕ್ಕೆ ಅನುಕೂಲವಾಗುವಂತೆ ಲೋಕೋಪಯೋಗಿ ಇಲಾಖೆಯಿಂದ ಕಳೆದ ೨ ವರ್ಷಗಳಲ್ಲಿ ದಾವಣಗೆರೆ, ಚಿತ್ರದುರ್ಗ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ನಿರ್ಮಿಸಲಾಗಿರುವ ವಸತಿ ಗೃಹಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಈ ಜಿಲ್ಲೆಗಳಲ್ಲಿ ಕಳೆದ ೨ ವರ್ಷಗಳಲ್ಲಿ ನಿರ್ಮಿಸಲಾಗಿರುವ ವಸತಿ ಗೃಹಗಳಿಗೆ ಸರ್ಕಾರ ಎಷ್ಟು ಅನುದಾನ ಬಿಡುಗಡೆ ಮಾಡಿದೆ ? (ಜಿಲ್ಲಾವಾರು ಮಾಹಿತಿ ನೀಡುವುದು)

## ಬೀದರ್ ಜಿಲ್ಲೆಯ ವಸತಿ ಯೋಜನೆಯಲ್ಲಿ ಮಂಜೂರಾದ ಮನೆಗಳ ಕುರಿತು

**ಡಾ॥ ಎಂ. ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೫ (೨೨೫) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಈವರೆಗೆ ಬಸವ ವಸತಿ ಯೋಜನೆ ಮತ್ತು ಡಾ॥ ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ ಮಂಜೂರಾದ ಒಟ್ಟು ಮನೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಈ ಪೈಕಿ ಎಷ್ಟು ಮನೆಗಳು ಪೂರ್ಣಗೊಂಡಿವೆ ಮತ್ತು ಎಷ್ಟು ಮನೆಗಳು ವಿವಿಧ ಹಂತಗಳಲ್ಲಿ ಬಾಕಿ ಇವೆ; ಬಾಕಿ ಇರಲು ಕಾರಣಗಳೇನು ;

(ಇ) ಫಲಾನುಭವಿಗಳಿಗೆ ಪಾವತಿಸಬೇಕಾದ ಬಾಕಿ ಹಣ (Pending Payments) ಎಷ್ಟು; ಈ ಬಾಕಿ ಮೊತ್ತವನ್ನು ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಜಿಲ್ಲೆಯಲ್ಲಿ ವಸತಿ ರಹಿತರ ಸಂಖ್ಯೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಗೆ ಹೆಚ್ಚುವರಿಯಾಗಿ ಎಷ್ಟು ಹೊಸ ಮನೆಗಳನ್ನು ಮಂಜೂರು ಮಾಡಲು ಉದ್ದೇಶಿಸಲಾಗಿದೆ ?

## ಬೀದರ್ ಜಿಲ್ಲೆಯಲ್ಲಿ ವಸತಿ ಯೋಜನೆಗಳ ಅನುಷ್ಠಾನದಲ್ಲಿನ ಕುಂಠಿತ ಪ್ರಗತಿಯ ಕುರಿತು

**ಡಾ॥ ಎಂ.ಜಿ.ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೬ (೨೨೩) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಬಸವ ವಸತಿ ಯೋಜನೆ, ಡಾ॥ ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ ಹಾಗೂ ಪ್ರಧಾನ ಮಂತ್ರಿ ಅವಾಸ್ ಯೋಜನೆಯಡಿ ಮಂಜೂರಾದ ಒಟ್ಟು ಮನೆಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮತ್ತು ವರ್ಷವಾರು ಮಾಹಿತಿ ನೀಡುವುದು)

(ಆ) ಸದರಿ ಜಿಲ್ಲೆಯಲ್ಲಿ ಅನೇಕ ಮನೆಗಳು ಹಂತ–ಹಂತವಾಗಿ ಹಣ ಬಿಡುಗಡೆಯಾಗದೆ ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಫಲಾನುಭವಿಗಳಿಗೆ ಬಾಕಿ ಇರುವ ಒಟ್ಟು ಅನುದಾನವೆಷ್ಟು ;

(ಇ) ಅರ್ಹ ಫಲಾನುಭವಿಗಳ ಆಯ್ಕೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ ಹಾಗೂ ಜಿಪಿಎಸ್ (GPS) ಫೋಟೋ ಅಪ್‌ಲೋಡ್ ಮಾಡುವಲ್ಲಿ ತಾಂತ್ರಿಕ ತೊಂದರೆ ನೀಡಿ ಹಣ ಬಿಡುಗಡೆ ವಿಳಂಬ ಮಾಡುತ್ತಿರುವ ಬಗ್ಗೆ ದೂರುಗಳು ಬಂದಿವೆಯೇ ;

(ಈ) ಬಾಕಿ ಇರುವ ಮನೆಗಳನ್ನು ಪೂರ್ಣಗೊಳಿಸಲು ಸರ್ಕಾರ ನಿಗದಿಪಡಿಸಿರುವ ಕಾಲಮಿತಿ ಏನು ಮತ್ತು ಬಿಡುಗಡೆಗೆ ಬಾಕಿ ಇರುವ ಅನುದಾನವನ್ನು ಯಾವಾಗ ಪಾವತಿಸಲಾಗುವುದು ?

## ಬೀದರ್ ಜಿಲ್ಲೆಯ ಪ್ರಮುಖ ದೇವಾಲಯಗಳ ಅಭಿವೃದ್ಧಿ ಕುರಿತು

**ಡಾ॥ ಎಂ. ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೭ (೨೨೨) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯ ಪ್ರಸಿದ್ಧ ಝರಣಿ ನರಸಿಂಹ ಸ್ವಾಮಿ ದೇವಾಲಯಕ್ಕೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿದ್ದರೂ, ಅಲ್ಲಿನ ಗುಹೆಯೊಳಗೆ ನೀರು ಹೊರಹಾಕುವ ಮತ್ತು ಶುಚಿತ್ವ ಕಾಪಾಡುವ ವ್ಯವಸ್ಥೆ ಸಮರ್ಪಕವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ದೇವಾಲಯುವನ್ನು 'ಬೃಹತ್ ಪ್ರವಾಸಿ ಕೇಂದ್ರ'ವಾಗಿ ಅಭಿವೃದ್ಧಿಪಡಿಸಲು ಮುಜರಾಯಿ ಇಲಾಖೆಯಿಂದ ಮೀಸಲಿಟ್ಟಿರುವ ಅನುದಾನ ಎಷ್ಟು ?

## ಹೊಸ ಬಸ್‌ಗಳ ಹಂಚಿಕೆ ಮತ್ತು ಹಳೆಯ ಬಸ್‌ಗಳ ಬದಲಾವಣೆ ಕುರಿತು

**ಡಾ॥ ಎಂ. ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೮ (೨೨೧) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯ ಕೆ.ಕೆ.ಆರ್.ಟಿ.ಸಿ (KKRTC) ಘಟಕಗಳಲ್ಲಿ ಪ್ರಸ್ತುತ ಚಾಲನೆಯಲ್ಲಿರುವ ಬಸ್‌ಗಳ ಸಂಖ್ಯೆ ಎಷ್ಟು ; ಅವುಗಳಲ್ಲಿ ೧೦ ಲಕ್ಷ ಕಿ.ಮೀ ಗಿಂತ ಹೆಚ್ಚು ಸಂಚರಿಸಿದ, ಅವಧಿ ಮುಗಿದ ಬಸ್‌ಗಳ ಸಂಖ್ಯೆ ಎಷ್ಟು ;

(ಆ) "ಶಕ್ತಿ" ಯೋಜನೆಯ ನಂತರ ಬೀದರ್ ಜಿಲ್ಲೆಯಲ್ಲಿ ಪ್ರಯಾಣಿಕರ ಸಂಖ್ಯೆ ಶೇಕಡ ಎಷ್ಟು ಹೆಚ್ಚಾಗಿದೆ ; ಈ ಹೆಚ್ಚುವರಿ ಒತ್ತಡವನ್ನು ನಿಭಾಯಿಸಲು ಜಿಲ್ಲೆಗೆ ಮಂಜೂರು ಮಾಡಲಾದ ಹೊಸ ಬಸ್‌ಗಳ ಸಂಖ್ಯೆ ಎಷ್ಟು ;

(ಇ) ಜಿಲ್ಲೆಯ ಗಡಿ ಭಾಗದ ಹಳ್ಳಿಗಳಿಗೆ (ತೆಲಂಗಾಣ–ಮಹರಾಷ್ಟ್ರ ಗಡಿ) ಸಮರ್ಪಕ ಬಸ್ ಸೌಕರ್ಯವಿಲ್ಲದೆ ಶಾಲಾ ಮಕ್ಕಳು ಖಾಸಗಿ ವಾಹನಗಳನ್ನು ಅವಲಂಬಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ಶಕ್ತಿ ಯೋಜನೆಯ ಬಗ್ಗೆ

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ) :–**

೧೯೯ (೨೨೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಕ್ತಿ ಯೋಜನೆಯಲ್ಲಿ ೨೦೨೩ ರಿಂದ ಇಲ್ಲಿಯವರೆಗೆ ಎಷ್ಟು ಮೊತ್ತದ ಟಿಕೆಟ್ ವಿತರಿಸಲಾಗಿದೆ ; (ಸಾರಿಗೆ ನಿಗಮವಾರು, ವರ್ಷವಾರು ಮಾಹಿತಿ ನೀಡುವುದು)

(ಆ) ಸರ್ಕಾರ ಸದರಿ ಯೋಜನೆಗಾಗಿ ಸಾರಿಗೆ ನಿಗಮಗಳಿಗೆ ಬಿಡುಗಡೆ ಮಾಡಿದ ಮೊತ್ತವೆಷ್ಟು ; ಬಾಕಿಯಿರುವ ಮೊತ್ತವೆಷ್ಟು ; (ನಿಗಮವಾರು ವರ್ಷವಾರು ಮಾಹಿತಿ ನೀಡುವುದು)

(ಇ) ಬಾಕಿಯಿರುವ ಹಣವನ್ನು ಸರ್ಕಾರ ಸಕಾಲಕ್ಕೆ ಬಿಡುಗಡೆ ಮಾಡದ ಕಾರಣ ಸಾರಿಗೆ ನಿಗಮಗಳು ಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಬಾಕಿಯಿರುವ ಹಣ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ಕಳೆದ ಹತ್ತು ವರ್ಷಗಳಲ್ಲಿ ಸಾರಿಗೆ ನಿಗಮಗಳು ಹೊಸ ಬಸ್ ಖರೀದಿಗಾಗಿ/ಬಸ್ ನಿಲ್ದಾಣ, ನಿರ್ಮಾಣ ಮಾಡಲು ಮಾಡಿದ ವೆಚ್ಚವೆಷ್ಟು? (ನಿಗಮವಾರು ಮತ್ತು ವರ್ಷವಾರು ಮಾಹಿತಿ ನೀಡುವುದು)

## ಅತ್ತಿಬೆಲೆ ಹೋಬಳಿಯ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ.೧೯ರ ಕುರಿತು

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೦ (೨೨೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅತ್ತಿಬೆಲೆ ಹೋಬಳಿಯ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ.೧೯ಕ್ಕೆ ಸಂಬಂಧಿಸಿದ ಪ್ರಕರಣ ನ್ಯಾಯಾಲಯದಲ್ಲಿ ಯಾವ ವಿಚಾರಣೆಯಲ್ಲಿದೆ ;

(ಆ) ನ್ಯಾಯಾಲಯದ ಅಂತಿಮ ತೀರ್ಪು ಬರುವವರೆಗೆ ಈ ಭೂಮಿಯಲ್ಲಿ ಯಾವುದೇ ಚಟುವಟಿಕೆಗಳು ನಡೆಯದಂತೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಇ) ನ್ಯಾಯಾಲಯದ ತೀರ್ಪು ಬಂದ ನಂತರ ಸರ್ಕಾರ ಈ ಸರ್ವೆ ನಂಬರಿನ ಭೂಮಿಯ ಬಗ್ಗೆ ಯಾವ ರೀತಿಯ ಕ್ರಮ ಕೈಗೊಳ್ಳಲಿದೆ ;

(ಈ) ಸರ್ವೆ ನಂ.೧೯ರ ಭೂಮಿಯ ಸ್ವರೂಪ ಸರ್ಕಾರಿ/ಖಾಸಗಿ/ಗೋಮಾಳ ಕುರಿತು ಸರ್ಕಾರದ ಅಧಿಕೃತ ದಾಖಲೆಗಳೇನು ;

(ಉ) ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ ಯಾವ ಯಾವ ನ್ಯಾಯಾಲಯದ ಆದೇಶಗಳು ಬಂದಿದೆ ? (ವಿವರ ನೀಡುವುದು)

## ಬೆಂಗಳೂರು ನಗರದಲ್ಲಿ ವಾಯು–ಮಾಲಿನ್ಯ ಉಂಟು ಮಾಡುವ ವಾಹನಗಳ ಕುರಿತು

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೧ (೨೨೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಳೆಯ ಮತ್ತು ಹೆಚ್ಚು ಮಾಲಿನ್ಯ ಉಂಟುಮಾಡುವ ವಾಹನಗಳ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಎಲೆಕ್ಟ್ರಿಕ್ ವಾಹನಗಳನ್ನು ಉತ್ತೇಜಿಸಲು ರಾಜ್ಯ ಸರ್ಕಾರ ನೀಡುತ್ತಿರುವ ಪ್ರೋತ್ಸಾಹಧನ ಯಾವುವು ;

(ಆ) ಅಪಘಾತ ಸಂಭವಿಸುವ ( Black spots ) ಗುರುತಿಸಿ ಯಾವ ಕ್ರಮ ಕೈಗೊಳ್ಳಲಾಗಿದೆ ; ಶಾಲಾ ವಾಹನಗಳ ಸುರಕ್ಷತೆ ಪರಿಶೀಲನೆ ಎಷ್ಟು ಬಾರಿ ನಡೆಯುತ್ತಿದೆ ;

(ಇ) RTO ಕಛೇರಿಗಳಲ್ಲಿ ಆಗುತ್ತಿರುವ ವಿಳಂಬ ಮತ್ತು ಮಧ್ಯವರ್ತಿಗಳ ಸಮಸ್ಯೆ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು ಹಾಗೂ ಆನ್‌ಲೈನ್ ಸೇವೆಗಳಿದ್ದರೂ ಜನರು ಕಛೇರಿಗೆ ಬರುವ ಪರಿಸ್ಥಿತಿ ಉದ್ಭವಿಸಿರುವುದಕ್ಕೆ ಕಾರಣಗಳೇನು ? (ವಿವರ ನೀಡುವುದು)

## ಗ್ರಾಮಠಾಣಾ ಗಡಿಯ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೨ (೨೩೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗ್ರಾಮಗಳ ಗ್ರಾಮಠಾಣಾ ಗಡಿಯನ್ನು ಗುರುತಿಸಿದ್ದು ಅಥವಾ ನಿಗದಿಪಡಿಸಿದ್ದು ಯಾವಾಗ ;

(ಆ) ಗ್ರಾಮಠಾಣಾಗಳ ಗಡಿ ವಿಸ್ತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಇ) ಸರ್ಕಾರ ಗುರುತಿಸಲಾಗಿರುವ ಗ್ರಾಮಠಾಣಾ ವ್ಯಾಪ್ತಿಯಲ್ಲಿ ಜಾಗವಿಲ್ಲದ ಕಾರಣ ಸಾರ್ವಜನಿಕರು ಕಂದಾಯ ಭೂಮಿಯಲ್ಲಿ ಮನೆ ನಿರ್ಮಾಣ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈಗಾಗಲೇ ಸಾರ್ವಜನಿಕರು ನಿರ್ಮಿಸಿಕೊಂಡಿರುವ ಮನೆಗಳಿಗೆ ಸರ್ಕಾರದಿಂದ ಇ–ಸ್ವತ್ತು ನೀಡಲಾಗಿದೆಯೇ ; (ವಿವರ ನೀಡುವುದು)

(ಈ) ಮನೆ/ನಿವೇಶನಗಳಿಗೆ ಇ–ಸ್ವತ್ತು ನೀಡಲು ಯಾವ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ ?

## ಗ್ರಾಮ ಒನ್ ಕೇಂದ್ರಗಳ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೩ (೨೩೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಗ್ರಾಮ ಒನ್ ಕೇಂದ್ರಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಗ್ರಾಮ ಒನ್ ಕೇಂದ್ರಗಳನ್ನು ತೆರೆಯಲು ಇರುವ ಮಾನದಂಡಗಳು ಯಾವುವು ;

(ಇ) ಗ್ರಾಮ ಒನ್ ಕೇಂದ್ರಗಳಿಂದ ಸಾರ್ವಜನಿಕರಿಗೆ ನಿಗದಿತ ಅವಧಿಯಲ್ಲಿ ಸೇವೆ ನೀಡಲಾಗುತ್ತಿದೆಯೇ ;

(ಈ) ಪ್ರತಿ ತಿಂಗಳು ಗ್ರಾಮ ಒನ್ ಕೇಂದ್ರಕ್ಕೆ ಸಲ್ಲಿಕೆಯಾಗುವ ಅರ್ಜಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ಗ್ರಾಮ ಒನ್ ಕೇಂದ್ರ ಮತ್ತು ನಾಡ ಕಛೇರಿಗಳಲ್ಲಿ ಸಾರ್ವಜನಿಕರಿಗೆ ನೀಡುವ ಸೇವೆಗೆ ನಿಗಧಿಪಡಿಸಿರುವ ಶುಲ್ಕದಲ್ಲಿ ವ್ಯತ್ಯಾಸ ಇದೆಯೇ ; ಸರ್ಕಾರ ಕೈಗೊಂಡಿರುವ ಕ್ರಮವೇನು ?

## ಗಿಡ್ಡ ತಳಿ ಹಸುಗಳ ಸಂರಕ್ಷಣೆ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೪ (೨೩೨) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಳಿವಿನಂಚಿನಲ್ಲಿರುವ ಮಲೆನಾಡು ಗಿಡ್ಡ ತಳಿ ಸಂವರ್ಧನೆ ಮತ್ತು ಸಂರಕ್ಷಣೆ ಕೇಂದ್ರ ಸ್ಥಾಪನೆಗಾಗಿ ಅನುದಾನ ಮೀಸಲಿಡಲಾಗಿದೆಯೇ ;

(ಆ) ಮಲೆನಾಡು ಗಿಡ್ಡ ತಳಿ ಸಂವರ್ಧನೆ ಮತ್ತು ಸಂರಕ್ಷಣೆಗಾಗಿ ಸರ್ಕಾರದಿಂದ ಎಷ್ಟು ಎಕರೆ ಜಾಗ ಮೀಸಲಿಡಲಾಗಿದೆಯೇ ;

(ಇ) ರಾಜ್ಯದಲ್ಲಿ ಅಳಿವಿನಂಚಿನಲ್ಲಿರುವ ಮಲೆನಾಡು ಗಿಡ್ಡ ಹಸುಗಳ ಸರ್ವೆ ಮಾಡಲಾಗಿದೆಯೇ ? (ಜಿಲ್ಲಾವಾರು ಮಾಹಿತಿ ನೀಡುವುದು)

## ಪೋಡಿ ಇತ್ಯರ್ಥ ವಿಳಂಬವಾಗುತ್ತಿರುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೫ (೨೩೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪೋಡಿ ಇತ್ಯರ್ಥ ಪ್ರಕ್ರಿಯೆ ಅತೀ ವಿಳಂಬವಾಗುತ್ತಿದ್ದು, ಮೋಜಿಣಿ ತಂತ್ರಾಂಶಕ್ಕೆ ಸರ್ವರ್ ಸಮಸ್ಯೆ ಇಲಾಖೆಯಲ್ಲಿ ಪೋಡಿಗೆಂದೆ ಪ್ರತ್ಯೇಕ ತಂಡವಿಲ್ಲದಿರುವುದು ಸೇರಿದಂತೆ ಹಲವಾರು ತೊಡಕುಗಳ ಕಾರಣದಿಂದಾಗಿ ಬಹುತೇಕ ಪ್ರಕರಣಗಳು ದೀರ್ಘಕಾಲದಿಂದ ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ರಾಜ್ಯಾದ್ಯಂತ ಪ್ರಸ್ತುತ ಪೋಡಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಪ್ರತ್ಯೇಕ ವಿವರ ನೀಡುವುದು)

(ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೋಡಿ ಇತ್ಯರ್ಥದ ಅತೀ ಹೆಚ್ಚು ಪ್ರಕರಣಗಳು ದೀರ್ಘಕಾಲದಿಂದ ಬಾಕಿ ಇದ್ದು, ಜಿಲ್ಲೆಯಲ್ಲಿ ಪೋಡಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ಜಿಲ್ಲೆಯಲ್ಲಿ ಪೋಡಿ ಇತ್ಯರ್ಥಕ್ಕೆ ಸಲ್ಲಿಕೆಯಾಗಿರುವ ಬಹುತೇಕ ಅರ್ಜಿಗಳು ಅತೀ ದೀರ್ಘಕಾಲದಿಂದ ಹಾಗೆಯೇ ಬಾಕಿ ಉಳಿದಿದ್ದು ಯಾವ ಕಾಲಮಿತಿಯೊಳಗೆ ಜಿಲ್ಲೆಯಲ್ಲಿ ಬಾಕಿ ಇರುವ ಪ್ರಕರಣಗಳನ್ನು ವಿಲೇವಾರಿ ಮಾಡಲಾಗುವುದು ?

## ಸಾರಿಗೆ ನಿಗಮಗಳ ನೌಕರರ ವೇತನ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೬ (೨೩೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ರಸ್ತೆಸಾರಿಗೆ ನಿಗಮಗಳಲ್ಲಿ ದುಡಿಯುತ್ತಿರುವ ಸುಮಾರು ೧.೧೫ ಲಕ್ಷ ಅಧಿಕಾರಿ, ನೌಕರರಿಗೆ ಸಕಾಲದಲ್ಲಿ ವೇತನ ಪರಿಷ್ಕರಣೆಯಾಗದಿರುವುದು ಹಾಗೂ ೩೮ ತಿಂಗಳ ವೇತನ ಹಿಂಬಾಕಿಯು ಸಿಗದೆ ಅವರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಸರ್ಕಾರದ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಶಕ್ತಿ ಯೋಜನೆಗೆ ಶ್ರಮಿಸುತ್ತಿರುವ ನೌಕರರಿಗೆ ಅರ್ಹ ವೇತನವಿಲ್ಲದೇ ಅಶಕ್ತರಾಗಿರುವ ವಿದ್ಯಮಾನ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಪ್ರಸ್ತುತ ಸಾರಿಗೆ ನಿಗಮಗಳು ತಮ್ಮ ಅಧಿಕಾರಿ ಮತ್ತು ನೌಕರರಿಗೆ ಪಾವತಿಸಲು ಉಳಿಸಿಕೊಂಡಿರುವ ವಿವಿಧ ರೀತಿಯ ಬಾಕಿಗಳ ಒಟ್ಟು ಮೊತ್ತವೆಷ್ಟು ;

(ಇ) ಪ್ರಸ್ತುತ ಸಾರಿಗೆ ನಿಗಮಗಳು ತಮ್ಮ ಅಧಿಕಾರಿ ಮತ್ತು ನೌಕರರಿಗೆ ಪಾವತಿಸಲು ಉಳಿಸಿಕೊಂಡಿರುವ ವಿವಿಧ ರೀತಿಯ ಬಾಕಿ ಮೊತ್ತವನ್ನು ಪಾವತಿಸಲು ಮತ್ತು ವೇತನ ಪರಿಷ್ಕರಣೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ನಿವೃತ್ತ ನೌಕರರಿಗೆ ರಸ್ತೆ ಸಾರಿಗೆ ನಿಗಮಗಳು ಪಾವತಿಸಬೇಕಾಗಿರುವ ಬಾಕಿ ಮೊತ್ತ ಎಷ್ಟು ಮತ್ತು ಸದರಿ ಬಾಕಿ ಮೊತ್ತವನ್ನು ಯಾವ ಕಾಲಮಿತಿಯೊಳಗೆ ಸಂಪೂರ್ಣವಾಗಿ ನಿವೃತ್ತ ನೌಕರರಿಗೆ ಪಾವತಿಸಲಾಗುವುದು ;

(ಉ) ಸಾರಿಗೆ ನಿಗಮಗಳಲ್ಲಿ ನಿಗದಿತ ಅವಧಿಯೊಳಗೆ ವೇತನ ಪರಿಷ್ಕರಣೆ ಮಾಡದಿರಲು ಕಾರಣಗಳೇನು ; ಎರಡು ವರ್ಷಗಳ ಹಿಂದೆಯೇ ವೇತನ ಪರಿಷ್ಕರಣೆಯಾಗಬೇಕಾಗಿದ್ದು, ಅದು ಇದುವರೆಗೂ ಆಗದಿರಲು ಕಾರಣಗಳೇನು ; ಯಾವ ಕಾಲಮಿತಿಯೊಳಗೆ ವೇತನ ಪರಿಷ್ಕರಣೆ ಮಾಡಲಾಗುವುದು ಮತ್ತು ೩೮ ತಿಂಗಳ ವೇತನ ಹಿಂಬಾಕಿಯನ್ನು ಪಾವತಿಸಲಾಗುವುದು ?

## ಸರ್ ಸೈಯದ್ ಅಹ್ಮದ್ ಖಾನ್ ಸಂಶೋಧನಾ ಕೇಂದ್ರದ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೭ (೨೩೫) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಲ್ಪಸಂಖ್ಯಾತ ಸಮುದಾಯದ ಸಮಸ್ಯೆಗಳು ಮತ್ತು ಕಲ್ಯಾಣ ಕಾರ್ಯಕ್ರಮಗಳ ಕುರಿತು ಅಧ್ಯಯನ ನಡೆಸಿ ವರದಿ ಸಲ್ಲಿಸಲು

ಸ್ಥಾಪಿಸಲಾಗಿರುವ ಸರ್ ಸೈಯದ್ ಅಹ್ಮದ್ ಖಾನ್ ಸಂಶೋಧನಾ ಕೇಂದ್ರವು ರಾಜ್ಯ ಸರ್ಕಾರದಿಂದ ವಾರ್ಷಿಕವಾಗಿ ೪.೫ ಕೋಟಿ ರೂಪಾಯಿಗಳಂತೆ ಈ ತನಕ ಸುಮಾರು ೪೦ ಕೋಟಿ ರೂ. ಅನುದಾನ ಪಡೆದಿದ್ದರೂ ಕಳೆದ ೧೦ ವರ್ಷಗಳಲ್ಲಿ ಒಂದೇ ಒಂದು ಸಂಶೋಧನೆ ನಡೆಸಿಲ್ಲ ಎಂಬ ಆರೋಪ ಕೇಳಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಅಲ್ಪಸಂಖ್ಯಾತ ಸಮುದಾಯದ ಸಮಸ್ಯೆಗಳು ಮತ್ತು ಕಲ್ಯಾಣ ಕಾರ್ಯಕ್ರಮಗಳ ಕುರಿತು ಅಧ್ಯಯನ ನಡೆಸಿ ವರದಿ ಸಲ್ಲಿಸಲು ಸ್ಥಾಪಿಸಲಾಗಿರುವ ಸರ್ ಸೈಯದ್ ಅಹ್ಮದ್ ಖಾನ್ ಸಂಶೋಧನಾ ಕೇಂದ್ರಕ್ಕೆ ಸರ್ಕಾರ ಇದುವರೆಗೆ ನೀಡಿರುವ ಅನುದಾನ ಎಷ್ಟು; (ಸಂಪೂರ್ಣ ವಿವರ ಒದಗಿಸುವುದು)

(ಇ) ಸದರಿ ಸಂಶೋಧನಾ ಕೇಂದ್ರದ ಕಾರ್ಯವೈಖರಿ ಮತ್ತು ಕೇಳಿ ಬಂದಿರುವ ಆರೋಪದ ಕುರಿತು ತನಿಖೆ ನಡೆಸಲು ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು ;

(ಈ) ಯಾವ ಕಾಲಮಿತಿಯೊಳಗೆ ಸದರಿ ಸಂಶೋಧನಾ ಕೇಂದ್ರದ ಕಾರ್ಯವೈಖರಿ ಮತ್ತು ಕೇಳಿ ಬಂದಿರುವ ಆರೋಪದ ಕುರಿತು ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ?

## ಬೆಳ್ತಂಗಡಿ ನ್ಯಾಯಾಲಯ ಸಂಕೀರ್ಣ ಕಟ್ಟಡ ನಿರ್ಮಾಣ ಕಾಮಗಾರಿ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೮ (೨೩೬) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿನ ನ್ಯಾಯಾಲಯ ಸಂಕೀರ್ಣ ಕಟ್ಟಡ ನಿರ್ಮಾಣ ಹಾಗೂ ಪೀಠೋಪಕರಣಗಳ ಪೂರೈಕೆ ಕಾಮಗಾರಿಗೆ ರೂ.೧೩.೯೨ ಕೋಟಿ ಅನುದಾನವನ್ನು ಮಂಜೂರು ಮಾಡಿ ಬಿಡುಗಡೆ ಮಾಡುವ ಪ್ರಕ್ರಿಯೆ ಪ್ರಸ್ತುತ ಯಾವ ಹಂತದಲ್ಲಿದೆ ;

(ಆ) ಸದರಿ ಕಾಮಗಾರಿಗೆ ಅನುದಾನ ಇನ್ನೂ ಬಿಡುಗಡೆಯಾಗದಿದ್ದಲ್ಲಿ, ಯಾವ ಕಾಲಮಿತಿಯೊಳಗೆ, ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿನ ನ್ಯಾಯಾಲಯ ಸಂಕೀರ್ಣ ಕಟ್ಟಡ ನಿರ್ಮಾಣ ಹಾಗೂ ಪೀಠೋಪಕರಣಗಳ ಪೂರೈಕೆ ಕಾಮಗಾರಿಗೆ ರೂ. ೧೩.೯೨ ಕೋಟಿ ಅನುದಾನವನ್ನು ಬಿಡುಗಡೆಗೊಳಿಸಲಾಗುವುದು ;

(ಇ) ಸಾರ್ವಜನಿಕ ಹಿತದೃಷ್ಟಿಯಿಂದ ಅತ್ಯಂತ ಅತ್ಯವಶ್ಯಕವಾಗಿ ಮತ್ತು ಶೀಘ್ರವಾಗಿ ಆಗಬೇಕಾಗಿರುವ ಸದರಿ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಿ ಲೋಕಾರ್ಪಣೆಗೊಳಿಸಲಾಗುವುದು ?

## ಲಾಯಿಲ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಜಮೀನು ಮಂಜೂರು ಮಾಡುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :–**

೨೧೯ (೨೩೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು, ಲಾಯಿಲ ಗ್ರಾಮದ ಸರ್ವೆ ನಂಬರ್: ೧೩೧/೩ರಲ್ಲಿ ೦.೨೦ಎಕರೆ (ಇಪ್ಪತ್ತು ಸೆಂಟ್) ಸರ್ಕಾರಿ ಜಮೀನನ್ನು ಲಾಯಿಲ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ;

(ಆ) ಸಾರ್ವಜನಿಕ ಹಿತಾಸಕ್ತಿಯ ಹಿನ್ನಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲ್ಲೂಕು, ಲಾಯಿಲ ಗ್ರಾಮದ ಸರ್ವೆ ನಂಬರ್: ೧೩೧/೩ ರಲ್ಲಿ ೦.೨೦ ಎಕರೆ (ಇಪ್ಪತ್ತು ಸೆಂಟ್) ಸರ್ಕಾರಿ ಜಮೀನನ್ನು ಲಾಯಿಲ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಮಂಜೂರು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಯಾವ ಕಾಲಮಿತಿಯೊಳಗೆ ಸದರಿ ಜಮೀನನ್ನು ಲಾಯಿಲ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಮಂಜೂರು ಮಾಡಲಾಗುವುದು ?

## ಧಾರವಾಡ ನಗರ ಪ್ರದೇಶದಲ್ಲಿ ಮುಜರಾಯಿ ಇಲಾಖೆಯಡಿ ಬರುವ ದೇವಸ್ಥಾನಗಳಿಗೆ ನೀಡಿರುವ ಅನುದಾನದ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೦ (೨೪೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರವಾಡ ನಗರ ಪ್ರದೇಶದಲ್ಲಿ ಮುಜರಾಯಿ ಇಲಾಖೆಯಡಿ ಬರುವ ದೇವಸ್ಥಾನಗಳ ಸಂಖ್ಯೆ ಎಷ್ಟು ;

(ಆ) ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರದಡಿ ಮುಜರಾಯಿ ಇಲಾಖೆಯಡಿ ಬರುವ ದೇವಸ್ಥಾನಗಳ ಸಂಖ್ಯೆ ಎಷ್ಟು ಹಾಗೂ ಸದರಿ ದೇವಸ್ಥಾನಗಳ ಅಭಿವೃದ್ಧಿ ಕಾರ್ಯಗಳಿಗೆ ಮಂಜೂರು ಮಾಡಲಾಗಿರುವ ಅನುದಾನವೆಷ್ಟು ;

(ಇ) ಹುಬ್ಬಳ್ಳಿಯ ಹುಣಕಲ್‌ನಲ್ಲಿ ಬರುವ ಐತಿಹಾಸಿಕ ಚಂದ್ರಮೌಳೇಶ್ವರ ದೇವಸ್ಥಾನದ ಅಭಿವೃದ್ಧಿಗೆ ಬಿಡುಗಡೆ ಮಾಡಲಾಗಿರುವ ಅನುದಾನ ಎಷ್ಟು ಹಾಗೂ ಅಭಿವೃದ್ಧಿ ಕಾರ್ಯದ ಸದ್ಯದ ಪ್ರಗತಿಯ ಸ್ಥಿತಿ ಏನು ?

## ಧಾರವಾಡ ನಗರ ಪ್ರದೇಶದಲ್ಲಿ ಮಂಜೂರು ಮಾಡಲಾಗಿರುವ ಮನೆಗಳ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೧ (೨೪೧) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರವಾಡ ನಗರ ಪ್ರದೇಶದಲ್ಲಿರುವ ವಸತಿ ರಹಿತರು ಹಾಗೂ ನಿವೇಶನ ರಹಿತರ ಸಂಖ್ಯೆ ಎಷ್ಟು; (ವಿಧಾನಸಭಾ ಕ್ಷೇತ್ರವಾರು ಸಂಕ್ಷಿಪ್ತ ಮಾಹಿತಿ ನೀಡುವುದು)

(ಆ) ಕಳೆದ ಮೂರು ವರ್ಷದಿಂದ ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರು ಮಾಡಲಾಗಿರುವ ಮನೆಗಳ ಸಂಖ್ಯೆ ಎಷ್ಟು ಹಾಗೂ ಅನುದಾನ ಎಷ್ಟು?

## ಕರ್ನಾಟಕ ಸಾರ್ವಜನಿಕ ಜಮೀನುಗಳ ಅಭಿವೃದ್ಧಿ ನಿಗಮಗಳ ಬಗ್ಗೆ

**ಡಾ. ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೨ (೨೩೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಸಾರ್ವಜನಿಕ ಜಮೀನುಗಳ ಅಭಿವೃದ್ಧಿ ನಿಗಮವನ್ನು ಯಾವಾಗ ಸ್ಥಾಪನೆ ಮಾಡಲಾಯಿತು ; ಇದರ ಉದ್ದೇಶಗಳೇನು ; ನಿರ್ದೇಶಕರುಗಳ ಮತ್ತು ಅಧ್ಯಕ್ಷರುಗಳ ಕೇಂದ್ರ ಕಛೇರಿ ವಿಳಾಸದೊಂದಿಗೆ ವಿವರವಾದ ಮಾಹಿತಿ ನೀಡುವುದು ;

(ಆ) ಸದರಿ ನಿಗಮಕ್ಕೆ ಸರ್ಕಾರದಿಂದ ಹಾಗೂ ಇತರೆ ಮೂಲಗಳಿಂದ ಬಂದ ಹಣ ಎಷ್ಟು ಯಾವ ಯಾವ ಕಾಮಗಾರಿಗಳಿಗೆ ಇದನ್ನು ಬಳಸಲಾಗಿದೆ, ಸ್ಥಾಪನೆ ಆದಾಗಿನಿಂದ ಇಲ್ಲಿಯವರೆಗೆ ವರ್ಷವಾರು ಮಾಹಿತಿ ನೀಡುವುದು ;

(ಇ) ಸದರಿ ನಿಗಮದಿಂದ ಸಾರ್ವಜನಿಕರಿಗೆ ಮತ್ತು ರಾಜ್ಯಕ್ಕೆ ಆಗಿರುವ ಅನುಕೂಲಗಳೇನು ; (ಮಾಹಿತಿ ನೀಡುವುದು)

(ಈ) ಸದರಿ ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಯಾರು ; (ಹೆಸರು, ಹುದ್ದೆಯ ಪದನಾಮ ಹಾಗೂ ಮಾಹೆಯಾನ ಪಡೆಯುತ್ತಿರುವ ವೇತನದೊಂದಿಗೆ ವಿವರವಾದ ಮಾಹಿತಿ ನೀಡುವುದು)

(ಉ) ನಿಗಮ ಪ್ರಾರಂಭದಿಂದ ಇಲ್ಲಿಯವರೆಗೆ ಸರ್ಕಾರಿ ಆಸ್ತಿ ರಕ್ಷಣೆ ಹಾಗೂ ಸ್ಮಶಾನ ಅಭಿವೃದ್ಧಿ ಹಾಗೂ ಇತರೆಗಳಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ? (ಜಿಲ್ಲಾವಾರು, ವರ್ಷವಾರು ಮಾಹಿತಿ ನೀಡುವುದು)

## ರಾಜ್ಯದಲ್ಲಿ ಫಿಶ್ ಮಿಲ್ಲುಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೩ (೨೪೫) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಸ್ತುತ ಒಟ್ಟು ಎಷ್ಟು ಫಿಶ್ ಮಿಲ್‌ಗಳು ಕಾರ್ಯನಿರ್ವಹಿಸುತ್ತಿವೆ; ಅವು ಯಾವ ವರ್ಷದಲ್ಲಿ ಸ್ಥಾಪನೆಯಾಗಿವೆ; ಅವುಗಳ ಉತ್ಪಾದನಾ ಸಾಮರ್ಥ್ಯ ಎಷ್ಟು ;

(ಆ) ಫಿಶ್ ಮಿಲ್‌ಗಳ ಕಾರ್ಯಾಚರಣೆಗೆ ಪರವಾನಗಿ/ಪ್ರಮಾಣ ಪತ್ರ ನೀಡುವ ಪ್ರಾಧಿಕಾರ ಯಾವುದು; ಫಿಶ್ ಮಿಲ್‌ಗಳ ಸ್ಥಾಪನೆ ಮತ್ತು ಕಾರ್ಯಾಚರಣೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಪ್ರಾಮಾಣಿತ ಕಾರ್ಯವಿಧಾನ (Standard Operating Procedure-SOP) ರಚಿಸಲಾಗಿದೆಯೇ; ಅದರ ಮುಖ್ಯ ಅಂಶಗಳಾವುವು ;

(ಇ) ಉಡುಪಿ, ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಎಷ್ಟು ಫಿಶ್ ಮಿಲ್‌ಗಳು ಕಾರ್ಯನಿರ್ವಹಿಸುತ್ತಿವೆ; ಅವುಗಳ ಮಾಲೀಕರ ವಿವರಗಳು ಏನು ; ಈ ಜಿಲ್ಲೆಗಳಲ್ಲಿನ ಫಿಶ್ ಮಿಲ್‌ಗಳು ವಾರ್ಷಿಕವಾಗಿ ಎಷ್ಟು ಪ್ರಮಾಣದ ಉತ್ಪನ್ನವನ್ನು ತಯಾರಿಸುತ್ತಿವೆ; ಈ ಫಿಶ್ ಮಿಲ್‌ಗಳು ವಾರ್ಷಿಕವಾಗಿ ಸರ್ಕಾರಕ್ಕೆ ಎಷ್ಟು ಪ್ರಮಾಣದ ತೆರಿಗೆ ಪಾವತಿಸುತ್ತಿವೆ ;

(ಈ) ಫಿಶ್ ಮಿಲ್‌ಗಳಿಂದ ಉತ್ಪನ್ನವಾಗುವ ಘನ ಮತ್ತು ದ್ರವ ತ್ಯಾಜ್ಯವನ್ನು ಸಂಸ್ಕರಿಸಲು ಯಾವ ರೀತಿಯ ವೃತ್ತ ಅಳವಡಿಸಲಾಗಿದೆ; ಫಿಶ್ ಮಿಲ್‌ಗಳ ತ್ಯಾಜ್ಯ ಸಂಸ್ಕರಣಾ ವ್ಯವಸ್ಥೆಯ ಪರಿಶೀಲನೆ ಮತ್ತು ಮೇಲ್ವಿಚಾರಣೆಯನ್ನು ಯಾರು ಮಾಡುತ್ತಿದ್ದಾರೆ ;

(ಉ) ಫಿಶ್ ಮಿಲ್‌ಗಳಲ್ಲಿ ಉತ್ಪನ್ನವಾಗುವ ತ್ಯಾಜ್ಯ ನೀರನ್ನು ನದಿ/ ಸಮುದ್ರ/ಇತರ ಜಲಮೂಲಗಳಿಗೆ ಬಿಡಲಾಗುತ್ತಿದೆಯೇ ; ತ್ಯಾಜ್ಯ ನೀರು ಜಲಮೂಲಗಳಿಗೆ ಸೇರದಂತೆ ತಡೆಯಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; ನಿಯಮ ಉಲ್ಲಂಘನೆಯಾದಲ್ಲಿ ಯಾವ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ ?

## ರಾಜ್ಯದಲ್ಲಿ ಲೋಕೋಪಯೋಗಿ ರಸ್ತೆ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೪೪ (೨೪೪೬) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇದುವರೆಗೆ ಎಷ್ಟು ರಸ್ತೆಗಳನ್ನು ರಾಜ್ಯ ಹೆದ್ದಾರಿಗಳಾಗಿ (State Highways) ಉನ್ನತೀಕರಿಸಲಾಗಿದೆ ; ಈ ರೀತಿಯ

ಉನ್ನತೀಕರಣಕ್ಕೆ ಅನುಸರಿಸಲಾದ (criteria) ಮಾನದಂಡಗಳಾವುವು ; ಉನ್ನತೀಕರಿಸಲಾದ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿ ಪಡಿಸಲಾಗಿದೆಯೇ ; ಅಭಿವೃದ್ಧಿ ಪಡಿಸಿರದಿದ್ದಲ್ಲಿ, ಅದಕ್ಕೆ ಕಾರಣಗಳೇನು ;

(ಆ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯು (PWD) ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ದೊಂದಿಗೆ ಯಾವ ರೀತಿಯಲ್ಲಿ ಸಮನ್ವಯ ಸಾಧಿಸುತ್ತಿದೆ ; ಹೊಸ ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸುವ ಸಂದರ್ಭದಲ್ಲಿ ರಾಜ್ಯದ ಭೌಗೋಳಿಕ, ಸಾಮಾಜಿಕ ಹಾಗೂ ನಗರ/ಗ್ರಾಮೀಣ ಪರಿಸ್ಥಿತಿಗಳನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಗಮನಕ್ಕೆ ತರಲಾಗಿದೆಯೇ ;

(ಇ) ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗುವ ನಗರ ಪ್ರದೇಶಗಳು, ಜನವಸತಿ ಪ್ರದೇಶಗಳು, ರಾಜ್ಯ ಹೆದ್ದಾರಿಗಳು, ಜಿಲ್ಲಾ ಮುಖ್ಯ ರಸ್ತೆಗಳು ಹಾಗೂ ಗ್ರಾಮ ಪಂಚಾಯತ್ ರಸ್ತೆಗಳು ಇರುವ ಸ್ಥಳಗಳಲ್ಲಿ ಮೇಲ್ಸೇತುವೆ (Flyover), ಅಂಡರ್‌ಪಾಸ್, ಪಾದಚಾರಿ ಕ್ರಾಸಿಂಗ್, ಸರ್ವೀಸ್ ರಸ್ತೆ ಮತ್ತು ಇತರೆ ರಸ್ತೆ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಜಾರಿಗೆ ತರುವ ಕುರಿತು ಕ್ರಮ ಕೈಗೊಳ್ಳಲಾಗಿದೆಯೇ ;

(ಈ) ಸಾರ್ವಜನಿಕರ ಪ್ರತಿಭಟನೆಯ ನಂತರ ಮಾತ್ರ ರಾಷ್ಟ್ರೀಯ ಹೆದ್ದಾರಿ ನಿರ್ಮಾಣದ ವೇಳೆ ಅಂಡರ್‌ಪಾಸ್, ಮೇಲ್ಸೇತುವೆ, ಕ್ರಾಸಿಂಗ್ ಹಾಗೂ ಸರ್ವಿಸ್ ರಸ್ತೆಗಳನ್ನು ನಿರ್ಮಿಸಲಾಗುತ್ತಿದ್ದು ಈ ಅಗತ್ಯಗಳನ್ನು ಯೋಜನೆ ರೂಪಿಸುವ ಹಂತದಲ್ಲೇ ಗುರುತಿಸಿ, ಅನಗತ್ಯ ಗೊಂದಲಗಳು ಹಾಗೂ ಹೆಚ್ಚುವರಿ ವೆಚ್ಚಗಳನ್ನು ತಪ್ಪಿಸಬಹುದಲ್ಲವೇ ; ಲೋಕೋಪಯೋಗಿ ಇಲಾಖೆಯು ಈ ಕುರಿತು ಹೆದ್ದಾರಿ ಇಲಾಖೆಗೆ ಸಲಹೆ ನೀಡುತ್ತಿದೆಯೇ ;

(ಉ) ಈ ಕುರಿತು ರಾಜ್ಯದ ಲೋಕೋಪಯೋಗಿ ಇಲಾಖೆ ಯಾವುದೇ ಪೂರ್ವಯೋಜನೆ ಅಥವಾ ಮಾರ್ಗಸೂಚಿಗಳನ್ನು ರೂಪಿಸುವ ಬಗ್ಗೆ ಚಿಂತನೆ ನಡೆಸಿದೆಯೇ ? (ವಿವರ ನೀಡುವುದು)

## ರಾಜ್ಯದಲ್ಲಿ ಸಾರಿಗೆ ಮತ್ತು ಸರಕು ಸಾಗಾಣಿಕೆ ವಾಹನ ಸುರಕ್ಷತಾ ನೀತಿ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೫ (೨೪೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯದಲ್ಲಿ ಸಾರಿಗೆ ಮತ್ತು ಸರಕು ಸಾಗಾಣಿಕೆ ವಾಹನಗಳ ಸುರಕ್ಷತೆಗಾಗಿ ಜಾರಿಯಲ್ಲಿರುವ ನಿಯಮಗಳು ಯಾವುವು; ಹೆಚ್ಚುತ್ತಿರುವ ರಸ್ತೆ ಅಪಘಾತಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಸಾರಿಗೆ ಇಲಾಖೆ ಯಾವ ಯಾವ ಸುರಕ್ಷತಾ ಕ್ರಮಗಳನ್ನು ಕೈಗೊಂಡಿದೆ ;

(ಆ) ಸಾರಿಗೆ ವಾಹನಗಳನ್ನು ಸಂಬಂಧಿತ ಸಾರಿಗೆ ಪ್ರಾಧಿಕಾರಗಳಲ್ಲಿ ಪಾಸಿಂಗ್ ಮಾಡಿದ ನಂತರ, ಅನಧಿಕೃತವಾಗಿ ಆಸನಗಳು, ಲೈಟುಗಳು, ಮೆಟ್ಟಿಲುಗಳು ಹಾಗೂ ಇತರೆ ರಚನಾತ್ಮಕ ಅಂಶಗಳಲ್ಲಿ ಮಾರ್ಪಾಡುಗಳನ್ನು ಮಾಡದಂತೆ ತಡೆಯಲು ಇಲಾಖೆ ಯಾವ ರೀತಿಯಲ್ಲಿ ಪರಿಶೀಲಿಸುತ್ತಿದೆ; ಇಂತಹ ಅನಧಿಕೃತ ಮಾರ್ಪಾಡುಗಳ ಕುರಿತು ಇದುವರೆಗೆ ಎಷ್ಟು ಪ್ರಕರಣಗಳನ್ನು ಪತ್ತೆಹಚ್ಚಿದೆ ; ಅವುಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ ;

(ಇ) ಸಾರಿಗೆ ವಾಹನಗಳಲ್ಲಿ ಬ್ರೇಕ್ ಲೈಟ್, ಹಾರನ್, ನಂಬರ್ ಪ್ಲೇಟ್, ಇಂಡಿಕೇಟರ್, ಹೊಗೆ ತಪಾಸಣೆ ಹಾಗೂ ಇತರೆ ಕಡ್ಡಾಯ

ಸುರಕ್ಷತಾ ಉಪಕರಣಗಳು ಸರಿಯಾಗಿ ಅಳವಡಿಸಿರುವುದನ್ನು ಮತ್ತು ಕಾರ್ಯನಿರ್ವಹಿಸುತ್ತಿರುವುದನ್ನು ಯಾವ ರೀತಿಯಲ್ಲಿ ದೃಢಪಡಿಸಲಾಗುತ್ತಿದೆ ;

(ಈ) ರಾಜ್ಯದಲ್ಲಿ ಹೆಚ್ಚು ಜನಸಂದಣಿ ಹಾಗೂ ಹೆಚ್ಚಿನ ಜನಸಂಚಾರ ಇರುವ ಪ್ರದೇಶಗಳಲ್ಲಿ, ವೈಯಕ್ತಿಕ ಖಾಸಗಿ ವಾಹನಗಳ ದಟ್ಟನೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಹೆಚ್ಚುವರಿ ಸಾರಿಗೆ ಪರವಾನಿಗೆಗಳನ್ನು ನೀಡುವ ಮೂಲಕ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸುವ ಬಗ್ಗೆ ಇಲಾಖೆ ಕೈಗೊಂಡಿರುವ ಕಾನೂನು ಮತ್ತು ಆಡಳಿತಾತ್ಮಕ ಕ್ರಮಗಳೇನು ;

(ಉ) ಪ್ರಸ್ತುತ ಜಾರಿಯಲ್ಲಿರುವ ನಿಯಮಗಳ ಪ್ರಕಾರ ೧೫ ವರ್ಷ ಮೀರಿರುವ ಖಾಸಗಿ ವಾಹನಗಳನ್ನು, ಸರ್ಕಾರಿ ವಾಹನಗಳಂತೆ ಗುಜರಿಗೆ ಹಾಕುವ (scrapping) ಪ್ರಕ್ರಿಯೆಯನ್ನು ಜಾರಿಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ೧೫ ವರ್ಷ ಮೀರಿರುವ ಖಾಸಗಿ ವಾಹನಗಳು ಇನ್ನೂ ರಸ್ತೆಗಳಲ್ಲಿ ಸಂಚರಿಸುತ್ತಿರುವುದನ್ನು ಪರಿಶೀಲಿಸಲು ಇಲಾಖೆ ಯಾವ ಕ್ರಮಗಳನ್ನು ಕೈಗೊಂಡಿದೆ; ಈ ಸಂಬಂಧ ಎಷ್ಟು ವಾಹನಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ?

## ರಾಜ್ಯದಲ್ಲಿ ಕಂದಾಯ ಇಲಾಖೆ ಭೂಮಿಗಳಿಗೆ ದಾಖಲೆ ಇಂಡೀಕರಣ ಪ್ರಕ್ರಿಯೆ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೬ (೨೪೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಸ್ತುತ ಕಂದಾಯ ಇಲಾಖೆ ಭೂಮಿಗಳಿಗೆ ದಾಖಲೆ ಇಂಡೀಕರಣ ಪ್ರಕ್ರಿಯೆ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು; ವಿವಿಧ ರೀತಿಯಲ್ಲಿ ಇಂಡೀಕರಣಕ್ಕೆ ಬಾಕಿಯಿರುವ ಒಟ್ಟು ಭೂಹಿಡುವಳಿಗಳ ಸಂಖ್ಯೆಯೆಷ್ಟು; ಅವು ಯಾವುವು ;

(ಆ) ಸರ್ಕಾರಿ ಹಕ್ಕುಪತ್ರ ನಿವೇಶನ, ೯೪ ಸಿ ಮತ್ತು ೯೪ ಸಿಸಿ ನಿವೇಶನಗಳಿಗೆ ಹಕ್ಕುಪತ್ರ ಮಾತ್ರ ನೀಡಲಾಗುತ್ತಿದ್ದು ಇ–ಸ್ವತ್ತು ತಂತ್ರಾಂಶದಲ್ಲಿ ಮಾರಾಟ ಪ್ರಮಾಣ ಪತ್ರ (Sale Deed) ಕಡ್ಡಾಯ ಮಾಡಿದ್ದು, ನಮೂನೆ ೯ ೧೧ ದಾಖಲೆ ಮಾಡಲು ತೊಂದರೆಯಗುತ್ತಿರುವುದನ್ನು ಪರಿಹರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಇ) ಅಕ್ರಮ ಸಕ್ರಮ ಪ್ರಕ್ರಿಯೆಯಲ್ಲಿ ತಿರಸ್ಕೃತ ಪಟ್ಟಿಯ ಸರ್ಕಾರ ಜಾಗಗಳನ್ನು ಸರ್ಕಾರದ ವಶಕ್ಕೆ ಸ್ವಾಧೀನ ಪಡೆಯಲು ಕಾಲಮಿತಿ ನಿಗದಿಪಡಿಸಿದೆಯೇ ; ಅನೇಕ ಪ್ರಕರಣಗಳಲ್ಲಿ ಅಕ್ರಮ ಬೇಲಿ ಹಾಕಿದ ಮತ್ತು ಆವರಣಗೋಡೆ ರಚಿಸಿದ ಜಮೀನುಗಳು ತೆರವುಗೊಳಿಸಲು ಕ್ರಮ ವಹಿಸದಿರಲು ಕಾರಣವೇನು ;

(ಈ) ಖಾಸಗಿ ಜಾಗದಲ್ಲಿ ಸಾರ್ವಜನಿಕ ಸಂಪರ್ಕ ರಸ್ತೆ ಇರುವ ಕುರಿತು ಇಲಾಖೆಯ ಕ್ರಮಗಳೇನು ; ಇಂತಹ ಪ್ರಕರಣಗಳು ರಾಜ್ಯದಲ್ಲಿ ಕಂಡು ಬಂದಿದೆಯೇ ;

(ಉ) ಸರ್ಕಾರಿ ಜಾಗದಲ್ಲಿ ಮತ್ತು ಖಾಸಗಿ ಜಾಗದಲ್ಲಿ ಹಾದುಹೋಗಿರುವ ರಾಷ್ಟ್ರೀಯ/ರಾಜ್ಯ ಹೆದ್ದಾರಿ, ಎಂ.ಡಿ.ಆರ್. ಗ್ರಾಮ ಪಂಚಾಯತಿ ರಸ್ತೆ, ವಿವಿಧ ಯೋಜನೆಗಳಲ್ಲಿ ನಿರ್ಮಿತವಾದ (ನಮ್ಮ ಗ್ರಾಮ ನಮ್ಮ ರಸ್ತೆ ಇತ್ಯಾದಿ) ರಸ್ತೆಗಳ ಜಾಗವನ್ನು ಸಕ್ಷಮ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ಅಧಿಸೂಚಿಸಲು ಯಾವಾಗ ಕ್ರಮ ವಹಿಸಲಾಗುವುದು ?

# ರಾಜ್ಯದಲ್ಲಿ ಸಾರ್ವಜನಿಕ ಉದ್ದೇಶಗಳಿಗೆ ಭೂ ಮಂಜೂರಾತಿ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೭ (೨೪೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಒದಗಿಸಲು ಗ್ರಾಮೀಣ ಮಟ್ಟದ ಸರ್ಕಾರಿ ಇಲಾಖಾ ಕಛೇರಿಗಳನ್ನು ಸ್ಥಾಪಿಸಲು ಹಾಗೂ ಆಸ್ತಿ ಸೃಜನೆ ಮಾಡುವ ಉದ್ದೇಶದಿಂದ ಕಂದಾಯ ಇಲಾಖೆಯಿಂದ ಸರ್ಕಾರಿ ಜಾಗಗಳನ್ನು ಮಂಜೂರು ಮಾಡಲಾಗುತ್ತಿದೆಯೇ; ಈ ಸಂಬಂಧ ಸಲ್ಲಿಸಲಾದ ಪ್ರಸ್ತಾವನೆಗಳು ಎಷ್ಟು ಅವಧಿಯಿಂದ ಬಾಕಿಯಿವೆ ;

(ಆ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ ಗ್ರಾಮ ಪಂಚಾಯಿತಿಗಳಿಂದ ಪಂಚಾಯಿತಿ ಕಟ್ಟಡ, ಆಟದ ಮೈದಾನ, ಪಶು ಚಿಕಿತ್ಸಾ ಕೇಂದ್ರ ಹಾಗೂ ಇತರ ಸರ್ಕಾರಿ ಇಲಾಖೆಗಳ ಕಟ್ಟಡ/ಕಛೇರಿ ನಿವೇಶನಗಳಿಗಾಗಿ ಸ್ವೀಕೃತಗೊಂಡಿರುವ ಪ್ರಸ್ತಾವನೆಗಳ ಒಟ್ಟು ಸಂಖ್ಯೆ ಎಷ್ಟು ;

(ಇ) ಅನೇಕ ಸಂದರ್ಭಗಳಲ್ಲಿ ಭೂ ಮಂಜೂರಾತಿಯನ್ನು ಪಹಣಿಯ ೧೧ನೇ ಕಾಲಂನಲ್ಲಿ ಮಾತ್ರ ದಾಖಲಿಸಲಾಗುತ್ತಿದ್ದು, ಕಂದಾಯ ಇಲಾಖೆ ಹಾಗೂ ಜಾಗ ಮಂಜೂರಾತಿ ಪಡೆದ ಇಲಾಖೆಗಳ ನಿರ್ಲಕ್ಷದಿಂದಾಗಿ ಸರ್ಕಾರಿ ಜಾಗಗಳ ಸೂಕ್ತ ಸ್ವಾಧೀನ ಮತ್ತು ನಿರ್ವಹಣೆ ಇಲ್ಲದೆ ಅತಿಕ್ರಮಣವಾಗುತ್ತಿರುವ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಸದರಿ ಇಲಾಖೆಗಳು ಜಾಗಗಳ

ಪಹಣಿಯನ್ನು ತಮ್ಮ ಹೆಸರಿಗೆ ದಾಖಲಿಸಲು ಅಗತ್ಯ ಅರಿವು ಮತ್ತು ಸೂಕ್ತ ಸಹಕಾರವನ್ನು ಕಂದಾಯ ಇಲಾಖೆಯಿಂದ ನೀಡಲಾಗಿದೆಯೇ ;

(ಈ) ಇವುಗಳಲ್ಲಿ ಮಂಜೂರಾತಿ ನೀಡಲಾದ ಪ್ರಸ್ತಾವನೆಗಳ ಸಂಖ್ಯೆ ಎಷ್ಟು; ಮಂಜೂರಾತಿ ನೀಡದೆ ಬಾಕಿಯಿರುವ ಪ್ರಸ್ತಾವನೆಗಳ ಸಂಖ್ಯೆ ಎಷ್ಟು; ಮಂಜೂರಾತಿ ನೀಡದಿರುವುದಕ್ಕೆ ಕಾರಣಗಳೇನು ಈ ಪ್ರಸ್ತಾವನೆಗಳು ಪ್ರಸ್ತುತ ಯಾವ ಹಂತದಲ್ಲಿ ಹಾಗೂ ಯಾರ ಬಳಿ ಬಾಕಿಯಿವೆ ; ಮಂಜೂರಾತಿಗೆ ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ;

(ಉ) ಮುಂದಿನ ದಿನಗಳಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ಮಂಜೂರಾದ ಜಾಗಗಳನ್ನು ಪಹಣಿಯ ೯ನೇ ಕಾಲಂನಲ್ಲಿ ದಾಖಲಿಸುವಂತೆ ಸ್ಪಷ್ಟ ಮಾರ್ಗಸೂಚಿ/ನಿರ್ದೇಶನಗಳನ್ನು ನೀಡಲು ಸರ್ಕಾರ ಉದ್ದೇಶಿಸಿರುವುದೇ ?

## ವೇದ ವಿಜ್ಞಾನ ಮಹಾಪೀಠ (Art of Living) ಕುರಿತು

**ಡಾ॥ ಆರತಿ ಕೃಷ್ಣ (ನಾಮನಿರ್ದೇಶನ ಹೊಂದಿದವರು) :–**

೨೧೮ (೨೫೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವೇದ ವಿಜ್ಞಾನ ಮಹಾಪೀಠ (Art of Living) ಕ್ಕೆ, ಬೆಂಗಳೂರು ದಕ್ಷಿಣ ಜಿಲ್ಲೆ, ಕೆಂಗೇರಿ ಹೋಬಳಿ, ಅಗರ ಹಾಗೂ ಕಗ್ಗಿಪುರ ಗ್ರಾಮಗಳಲ್ಲಿ ಲೀಸ್ ಆಧಾರದ ಮೇಲೆ ಒದಗಿಸಲಾದ ಸರ್ಕಾರಿ ಜಮೀನುಗಳ ಕಾಲಾವಧಿ ಮುಕ್ತಾಯವಾಗಿದ್ದರೂ ಸಹ,

ಪ್ರಸ್ತಾಪಿತ ಜಮೀನುಗಳನ್ನು ಹಿಂಪಡೆಯಲು ಸರ್ಕಾರ ಇಲ್ಲಿಯವರೆಗೆ ಕೈಗೊಂಡ ಕ್ರಮಗಳೇನು ಹಾಗೂ ವಿಳಂಬವಾಗುತ್ತಿರುವುದಕ್ಕೆ ಯಾವುದಾದರೂ ಅಧಿಕೃತ ಕಾರಣಗಳಿವೆಯಾ ; (ಮಾಹಿತಿ ಒದಗಿಸುವುದು)

(ಆ) ವೇದ ವಿಜ್ಞಾನ ಮಹಾಪೀಠ (Art of Living) ಸ್ಥಾಪಿತ ಪ್ರದೇಶದಲ್ಲಿ, ಪೀಠದವರಿಂದ ಅತಿಕ್ರಮಣ ಮಾಡಿರುವ ಸರ್ಕಾರಿ ರಾಜಕಾಲುವೆಗಳ ತೆರವಿಗೆ ನ್ಯಾಯಾಲಯದ ಆದೇಶಗಳಿದ್ದರೂ ಸಹ, ಸಂಬಂಧಪಟ್ಟ ಇಲಾಖೆ/ಪ್ರಾಧಿಕಾರದವರು ಸದರಿ ಜಾಗಗಳನ್ನು ತೆರವುಗೊಳಿಸುವಲ್ಲಿ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ವಕ್ಫ್ ಆಸ್ತಿಗಳನ್ನು ನೋಂದಣಿ ಮಾಡಿಸುವ ಕುರಿತು

**ಡಾ. ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೨೧೯ (೨೫೫) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

ರಾಜ್ಯದಲ್ಲಿ ಸಾಕಷ್ಟು ಮಸೀದಿ, ಈದ್ಗಾ ಮೈದಾನ ಮತ್ತು ಇನ್ನಿತರ ವಕ್ಫ್ ಆಸ್ತಿಗಳು ನೋಂದಣಿಯಾಗಿಲ್ಲದಿರುವುದರಿಂದ, ವಕ್ಫ್ ಇಲಾಖೆ ವತಿಯಿಂದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ರೀತಿ ಎಷ್ಟು ಮಸೀದಿ, ಈದ್ಗಾ ಮೈದಾನ ಮತ್ತು ಇನ್ನಿತರ ವಕ್ಫ್ ಆಸ್ತಿಗಳ ನೋಂದಣಿ ಬಾಕಿ ಇದೆ ; ಸದರಿ ನೋಂದಣಾ ಪ್ರಕ್ರಿಯೆಯನ್ನು ಶೀಘ್ರಗತಿಯಲ್ಲಿ ಮುಕ್ತಾಯಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ಒದಗಿಸುವುದು)

## ತಹಶೀಲ್ದಾರ್ ವೃಂದದ ಅಧಿಕಾರಿಗಳಿಗೆ ಪದೋನ್ನತಿ ನೀಡುವ ಕುರಿತು

**ಡಾ. ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೨೨೦ (೨೫೬) ಮಾನ್ಯ ಕಂದಾಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

ಕಂದಾಯ ಇಲಾಖೆಯಲ್ಲಿ ತಹಶೀಲ್ದಾರ್ ಗ್ರೇಡ್–೨ ಮತ್ತು ತಹಶೀಲ್ದಾರ್ ಗ್ರೇಡ್–೧ ಹುದ್ದೆಗಳು ಬಹಳಷ್ಟು ಖಾಲಿ ಇದ್ದರೂ ಸಹ ಪದೋನ್ನತಿ ನೀಡಲು ಕಳೆದ ೩ ವರ್ಷಗಳಿಂದ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ತೆಗೆದುಕೊಂಡ ಕ್ರಮಗಳೇನು ; ೩ ವರ್ಷದಲ್ಲಿ ಎಷ್ಟು ಅಧಿಕಾರಿಗಳಿಗೆ ಪದೋನ್ನತಿ ನೀಡಲಾಗಿದೆ ? (ಹುದ್ದೆವಾರು ವಿವರ ನೀಡುವುದು)

## ಕಂದಾಯ ಇಲಾಖೆಯಿಂದ ಸರ್ಕಾರಿ ಜಮೀನನ್ನು ಹಂಚಿಕೆ ಮಾಡಿರುವ ಕುರಿತು

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೨೧ (೧೨೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯಾದ್ಯಂತ ಸರ್ಕಾರದ ಸ್ವಾಧೀನದಲ್ಲಿರುವ ಹಾಗೂ ಗೋಮಾಳ ಭೂಮಿಯೆಂದು ಸರ್ಕಾರ ಘೋಷಿಸಿರುವ ಜಮೀನುಗಳ ವಿವರ ನೀಡುವುದು ; ಸದರಿ ಜಮೀನುಗಳನ್ನು ಒತ್ತುವರಿ ಮಾಡಿರುವುದು ಹಾಗೂ ಗುಂಡಿಗಳನ್ನು ಮಾಡಿ ಮಣ್ಣನ್ನು ತೆಗೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು ;

(ಆ) ಸದರಿ ಸರ್ಕಾರಿ ಗೋಮಾಳ ಭೂಮಿಯು–ಕೆಲವೊಂದು ಪ್ರದೇಶದಲ್ಲಿ ಪಾಳು ಬಿದ್ದಿದ್ದು, ಅದನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮವೇನು ; ಈ ಸರ್ಕಾರಿ ಗೋಮಾಳ ಭೂಮಿಗಳ ಮೇಲ್ವಿಚಾರಣೆ ಮಾಡುವುದು ಹಾಗೂ ಸಂರಕ್ಷಣೆ ಮಾಡುವ ಜವಾಬ್ದಾರಿ ಯಾರದ್ದಾಗಿರುತ್ತದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ೨೦೨೧–೨೨, ೨೦೨೨–೨೩, ೨೦೨೩–೨೪, ೨೦೨೪–೨೫, ೨೦೨೫–೨೬ ನೇ ಸಾಲಿನಲ್ಲಿ ಸರ್ಕಾರಿ ಜಮೀನನ್ನು ರಾಜಕೀಯ ಪಕ್ಷಗಳಿಗೆ/ಕಛೇರಿಗಳಿಗೆ ನೀಡಲಾಗಿದೆಯೇ ; ನೀಡಿದ್ದರೆ ಯಾವ ಸ್ಥಳದಲ್ಲಿ ಎಷ್ಟು ಜಮೀನನ್ನು ಯಾವ ರಾಜಕೀಯ ಪಕ್ಷಕ್ಕೆ ನೀಡಲಾಗಿದೆ ; ನೀಡಿರುವ ಜಮೀನಿನ ಮೌಲ್ಯವೆಷ್ಟು ; ಸದರಿ ಜಮೀನುಗಳನ್ನು ನೀಡಲು ಸರ್ಕಾರ ಅನುಸರಿಸಿರುವ ಕ್ರಮಗಳೇನು ; ಯಾವ ಇಲಾಖೆಯ ಪೂರ್ವಾನುಮತಿ ಪಡೆಯಲಾಗಿದೆ ; ಯಾವ ಉದ್ದೇಶಕ್ಕಾಗಿ ಸರ್ಕಾರಿ ಜಮೀನನ್ನು ರಾಜಕೀಯ ಪಕ್ಷಗಳಿಗೆ/ ಕಛೇರಿಗಳಿಗೆ ನೀಡಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಸರ್ಕಾರದ ನಡವಳಿ ಆದೇಶ ಸಂಖ್ಯೆ.ಕಂಇ/೬೦/ಎಲ್.ಜಿ.ಟಿ/ ೨೦೨೩ ದಿನಾಂಕ ೨೯.೧೦.೨೦೨೫ ರ ಸಂಪೂರ್ಣ ಮಾಹಿತಿ ಒದಗಿಸುವುದು ;

(ಉ) ಕರ್ನಾಟಕ ಭೂ ಮಂಜೂರಾತಿ ನಿಯಮಗಳು, ೧೯೬೯ರ ನಿಯಮ ೨೨ಎ(೧)(i) ಅನ್ನು ಯಾವ ರೀತಿಯಲ್ಲಿ ಸಡಿಲಿಸಲಾಗಿದೆ ; ನಿಯಮ ಮೊದಲು ಏನನ್ನು ಹೇಳುತ್ತಿತ್ತು ; ಪ್ರಸ್ತುತ ಯಾವ ರೀತಿಯಲ್ಲಿ ಸಡಿಲಿಸಿ ಜಮೀನುಗಳನ್ನು ನೀಡಲಾಗುತ್ತಿದೆ ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು ;

(ಊ) ಕರ್ನಾಟಕ ಭೂ ಮಂಜೂರಾತಿ ನಿಯಮಗಳು ೧೯೬೯ರ ನಿಯಮ ೨೨-ಎ(೨) ರನ್ವಯ ಭೂ ಮಂಜೂರಾತಿಯಲ್ಲಿ ಏನನ್ನು ಸೂಚಿಸುತ್ತದೆ ; ನಿಯಮದ ಸಂಪೂರ್ಣ ಮಾಹಿತಿ ನೀಡುವುದು ;

(ಋ) ಕರ್ನಾಟಕ ಭೂ ಮಂಜೂರಾತಿ ನಿಯಮಗಳು ೧೯೬೯ರ ನಿಯಮ ೨೭ರಲ್ಲಿ ಅಡಕವಾಗಿರುವ ಅಂಶಗಳಾವುವು ? (ಸಂಪೂರ್ಣ ಮಾಹಿತಿ ನೀಡುವುದು)

## ವಿವಿಧ ವಸತಿ ಯೋಜನೆಗಳಡಿ ಹಂಚಿಕೆಯಾಗಿರುವ ಮನೆಗಳ ಮತ್ತು ಆಯ್ಕೆಯಾದ ಫಲಾನುಭವಿಗಳ ವಿವರದ ಕುರಿತು

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೨೨೨ (೨೪೪) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪ್ರಸ್ತುತ ರಾಜ್ಯದಲ್ಲಿರುವ ವಸತಿ ರಹಿತ ಕುಟುಂಬಗಳ ಸಂಖ್ಯೆ ಎಷ್ಟು; ವಸತಿ ರಹಿತ ಕುಟುಂಬಗಳನ್ನು ಗುರುತಿಸಲು ಸರ್ಕಾರವು ನಿಗದಿಪಡಿಸಿರುವ ಮಾನದಂಡಗಳೇನು; ವಸತಿ ರಹಿತರನ್ನು ಗುರುತಿಸಿ ಅವರಿಗೆ ವಸತಿಯನ್ನು ಕಲ್ಪಿಸಿ ರಾಜ್ಯವನ್ನು ಗುಡಿಸಲು ಮುಕ್ತವಾಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ವಸತಿರಹಿತ ಬಡಜನರಿಗೆ ವಸತಿ ಸೌಲಭ್ಯ ಕಲ್ಪಿಸಲು ೨೦೨೩-೨೪, ೨೦೨೪-೨೫, ೨೦೨೫-೨೬ನೇ ಸಾಲಿನಲ್ಲಿ ವಿವಿಧ ವಸತಿ ಯೋಜನೆಯಡಿಯಲ್ಲಿ ಎಷ್ಟು ಮನೆಗಳ ಅನುಷ್ಠಾನದ ಗುರಿಯನ್ನು

ನಿಗದಿ ಪಡಿಸಲಾಗಿರುತ್ತದೆ ; ಎಷ್ಟು ಮನೆಗಳನ್ನು ಹಂಚಲಾಗಿರುತ್ತದೆ; ಯಾವ ಯೋಜನೆಗಳಡಿ (ಕೇಂದ್ರ/ರಾಜ್ಯ) ಮನೆಗಳನ್ನು ಹಂಚಿಕೆ ಮಾಡಲಾಗಿದೆ ; ಎಷ್ಟು ಮೊತ್ತವನ್ನು ಫಲಾನುಭವಿಗಳಿಗೆ ಪಾವತಿಸಲಾಗಿದೆ ; ಫಲಾನುಭವಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಪ್ರತ್ಯೇಕವಾಗಿ ಮತ್ತು ಸಂಪೂರ್ಣ ಮಾಹಿತಿ ನೀಡುವುದು)

(ಇ) ಒಂದು ವೇಳೆ ಮನೆಗಳ ಹಂಚಿಕೆಯ ಗುರಿಯನ್ನು ೨೦೨೩–೨೪, ೨೦೨೪–೨೫ ಮತ್ತು ೨೦೨೫–೨೬ನೇ ಸಾಲಿನಲ್ಲಿ ನಿಗದಿ ಪಡಿಸದೇ ಇದ್ದಲ್ಲಿ ಯೋಜನೆಗಳ ಅನುಷ್ಠಾನ ವಿಳಂಬವಾಗುವುದಿಲ್ಲವೇ ; ಗುರಿಯನ್ನು ನಿಗದಿಪಡಿಸದೇ ಇರಲು ಕಾರಣಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಈ) PMAY ಯೋಜನೆಯಡಿ ೨೦೨೩–೨೪, ೨೦೨೪–೨೫ ಮತ್ತು ೨೦೨೫–೨೬ನೇ ಸಾಲಿನಲ್ಲಿ ರಾಜ್ಯಕ್ಕೆ ಹಂಚಿಕೆಯಾದ ಮನೆಗಳ ಸಂಖ್ಯೆ ಮತ್ತು ಫಲಾನುಭವಿಗಳಿಗೆ ಪಾವತಿಸಿರುವ ಮೊತ್ತವೆಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

## ರಾಜ್ಯದ ಜಿಲ್ಲಾ ಕೇಂದ್ರಗಳ ಸ್ಲಂಗಳ ಅವ್ಯವಸ್ಥೆ ಕುರಿತು

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) :–**

೨೨೩ (೧೪೪೪) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿರುವ ಸ್ಲಂಗಳು ಹೊಲಸಿನಿಂದ ತುಂಬಿದ್ದು ಜನರು ವಾಸಿಸಲು ಯೋಗ್ಯವಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮುರುಕಲು ಹಾಗೂ ಗುಡಿಸಲು ಮನೆಗಳು, ಕೊಳಚೆ ನೀರು, ಶೌಚಾಲಯಗಳು/ಸ್ನಾನಗೃಹಗಳ ಕೊರತೆಗಳಿಂದ ಸ್ಲಂಗಳಲ್ಲಿ ವಾಸಿಸುತ್ತಿರುವ ಜನರು ರೋಗ–ರುಜಿನಗಳಿಗೆ ಬಲಿಯಾಗಿ ನರಕದ ಜೀವನ ನಡೆಸುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ ; ಇವುಗಳ ಪರಿಹಾರಕ್ಕೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ;

(ಇ) ಸುಮಾರು ೭೦ ಲಕ್ಷ ನಿವಾಸಿಗಳು ಮೂಲಭೂತ ಸೌಕರ್ಯಗಳಿಲ್ಲಿದೆ ನಾಗರೀಕ ಸಮಾಜ ನಾಚಿಕೆ ಪಡುವಂತಹ ಜೀವನ ನಡೆಸುತ್ತಿದ್ದು ಅವರಿಗೆ ಸುಸಜ್ಜಿತ ನಿವೇಶನಗಳನ್ನು ಒದಗಿಸಲು ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ;

(ಈ) ಮೂಡ ನಂಬಿಕೆ, ದುಶ್ಚಟಗಳು, ರೋಗ–ರುಜಿನಗಳು, ಹೆಣ್ಣು ಮಕ್ಕಳ ಶೋಷಣೆ, ಪೌಷ್ಠಿಕ ಆಹಾರದ ಕೊರತೆ ಮುಂತಾದ ಸಾಮಾಜಿಕ–ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಗಿದೆಯೇ ; ಅವು ಯಾವುವು ?

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಮತ್ಸ್ಯಾಶ್ರಯ ಮನೆಗಳ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೨೪ (೨೫೦) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕಳೆದ ೫ ವರ್ಷಗಳಿಂದ ಇಲ್ಲಿಯವರೆಗೆ ಮತ್ಸ್ಯಾಶ್ರಯ ಯೋಜನೆಯಡಿ ಮನೆ ನಿರ್ಮಿಸಲು ಸರ್ಕಾರ ಎಷ್ಟು ಅನುದಾನ ಬಿಡುಗಡೆ ಮಾಡಿದೆ ;

(ಆ) ಬಿಡುಗಡೆ ಮಾಡಿದ ಅನುದಾನದಲ್ಲಿ ನಿರ್ಮಿಸಲಾದ ಮನೆಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಸದರಿ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಸರ್ಕಾರ ಮಾನದಂಡಗಳನ್ನು ಅನುಸರಿಸುತ್ತದೆ ಹಾಗೂ ಇದುವರೆವಿಗೂ ಎಷ್ಟು ಫಲಾನುಭವಿಗಳಿಗೆ ಮನೆಗಳನ್ನು ವಿತರಿಸಲಾಗಿದೆ ?

## ಕಲಬುರಗಿ ಜಿಲ್ಲೆಯ ಕಾಳಗಿ ತಾಲ್ಲೂಕಿನ ಬಿಡುಗಡೆಯಾದ ತೊಗರಿ ಬೆಳೆಯ ಪರಿಹಾರದ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೨೫ (೨೫೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯ ಕಾಳಗಿ ತಾಲ್ಲೂಕಿನಲ್ಲಿ ಎಷ್ಟು ಹೆಕ್ಟೇರ್ ಪ್ರದೇಶದ ಜಮೀನಿನಲ್ಲಿ ತೊಗರಿ ಹಾನಿಯಾಗಿದೆ ಹಾಗೂ ಪರಿಹಾರಕ್ಕಾಗಿ ಎಷ್ಟು ಕೋಟಿ ನಿಗದಿಯಾಗಿದೆ ನಿಗದಿಯಾದ ಮೊತ್ತದಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ ;

(ಆ) ಎಷ್ಟು ರೈತರಿಗೆ ಒಂದೇ ಭಾರಿಗೆ ಸಂಪೂರ್ಣ ಪರಿಹಾರ ನೀಡಲಾಗಿದೆ ಎಷ್ಟು ನೀಡದಿದ್ದಲ್ಲಿ ಕಾರಣವೇನು ಹಾಗೂ ಸರ್ಕಾರದಿಂದ ಜಿಲ್ಲಾಡಳಿತಕ್ಕೆ ಪರಿಹಾರ ಹಣ ಯಾವಾಗ ಬಿಡುಗಡೆಯಾಯಿತು ; (ದಿನಾಂಕ ಮಾಹೆವಾರು ವಿವರ ನೀಡುವುದು)

(ಇ) ಮೇಲ್ಕಂಡ ತಾಲ್ಲೂಕಿನಲ್ಲಿ ಬೆಳೆ ನಷ್ಟ ನೋಂದಣಿಯಲ್ಲಿ ಗ್ರಾಮ ಲೆಕ್ಕಾಧಿಕಾರಿಗಳ ನಿರ್ಲಕ್ಷ್ಯದಿಂದ ಹೆಚ್ಚು ಬೆಳೆ ನಷ್ಟವಾಗಿದ್ದರೂ ಕಡಿಮೆ ಪರಿಹಾರ ಬಂದಿದೆಯೆಂದು ರೈತರು ದೋಷಿಸುತ್ತಿದು, ಲೋಪ ದೋಷಗಳನ್ನು ಸರಿಪಡಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುವುದು ?

## ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು ಧರ್ಮಪುರದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಬಗ್ಗೆ

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೨೬ (೨೫೩) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ಧರ್ಮಪುರದಲ್ಲಿ ಕರ್ನಾಟಕ ರಾಜ್ಯ ಸಾರಿಗೆ ನಿಗಮದ ಬಸ್ ನಿಲ್ದಾಣ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಧರ್ಮಪುರದಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣವನ್ನು ಸ್ಥಾಪಿಸಲು ಈವರೆವಿಗೂ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಇ) ಸದರಿ ಸ್ಥಳದಲ್ಲಿ ಅತಿ ಹೆಚ್ಚು ಶಾಲಾ/ಕಾಲೇಜು ಮಕ್ಕಳು ಗರ್ಭಿಣಿಯರು, ವೃದ್ಧರು, ರೈತರು ಹಾಗೂ ದಿನಗೂಲಿ ಮಾಡುವ ಸಾಮಾನ್ಯ ವರ್ಗದವರು ಬಸ್‌ಗೆ ರಸ್ತೆಯಲ್ಲಿ ಕಾಯತ್ತಾ ಬಿಸಿಲು ಮಳೆಯಲ್ಲಿಯೇ ನಿಲ್ಲುವಂತಹ ಪರಿಸ್ಥಿತಿ ಎದುರಿಸುತ್ತಿರುವುದನ್ನು ತಪ್ಪಿಸಲು ಯಾವ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳುವುದು ? (ಸಂಪೂರ್ಣ ವಿವರ ನೀಡುವುದು)

## ಶಾಂತನಪುರ ಸರ್ವೆ ನಂ. ೯ ಪೋಡಿ ಬಗ್ಗೆ

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) :–**

೨೨೭ (೨೫೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೊಸಕೋಟೆ ತಾಲ್ಲೂಕಿನ ಶಾಂತನಪುರ ಗ್ರಾಮದ ಸರ್ವೆ ನಂ.೯ ರ ಜಮೀನಿನ ಮಂಜೂರಾತಿ ಅಕ್ರಮದ ಬಗ್ಗೆ ಈ ಹಿಂದಿನ ಸರ್ಕಾರ ತನಿಖೆ ನಡೆಸಲು ಆದೇಶಿಸಿದ್ದು, ಪ್ರಕರಣ ನ್ಯಾಯಾಲಯದಲ್ಲಿದ್ದರೂ ಕೂಡ ಪೋಡಿ ದುರಸ್ಥಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ನ್ಯಾಯಾಲಯದಲ್ಲಿ ಪ್ರಕರಣವಿದ್ದರೂ ಸಹ ಪೋಡಿ ದುರಸ್ಥಿ ಮಾಡಲು ಕಾನೂನಿನಲ್ಲಿ ಅವಕಾಶವಿದೆಯೇ ? (ವಿವರ ನೀಡುವುದು)

## P.W.D ಇಲಾಖೆಗೆ ಅನುದಾನದ ಬಗ್ಗೆ

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) :–**

೨೨೮ (೨೫೯) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಮಂಜೂರಾದ ರಸ್ತೆ ಕಾಮಗಾರಿಗಳು ಯಾವುವು ; (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ನೀಡುವುದು)

(ಆ) ಸದರಿ ರಸ್ತೆ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು; (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ನೀಡುವುದು)

(ಇ) ಹೊಸಕೋಟೆ ವಿಧಾನಸಭಾ ಕ್ಷೇತ್ರಕ್ಕೆ ಅನುದಾನ ಬಿಡುಗಡೆ ಆಗಿದೆಯೇ; ಹಾಗಿದ್ದಲ್ಲಿ, ಬಿಡುಗಡೆ ಮಾಡಲಾಗಿರುವ ಅನುದಾನವೆಷ್ಟು ? (ವಿವರ ನೀಡುವುದು)

**ಕೆ. ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. O152/500 ಪ್ರತಿಗಳು/23–01–2026